ಶನಿವಾರ, ಡಿಸೆಂಬರ್ 6, 2025| ₹ 7.00
prajavani.net prajavani
www.prajavani.net

ನೃತ್ಯ ಸೊಬಗು...
ಪ್ರಯಾಗ್‌ರಾಜ್‌ನಲ್ಲಿ ಶುಕ್ರವಾರ ನಡೆದ ರಾಷ್ಟ್ರೀಯ ಕಲಾ ಉತ್ಸವದಲ್ಲಿ ತಮಿಳುನಾಡಿನ ಕಲಾವಿದೆಯೊಬ್ಬರು 'ಪೊಯ್ಕ ಅಟ್ಟಂ' ನೃತ್ಯ ಪ್ರದರ್ಶಿಸಿದರು



ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಚಾರ್ವಿ ಸಾಧನೆ
ಬೆಂಗಳೂರಿನ ಪ್ರತಿಭಾನ್ವಿತ ಚೆಸ್ ಆಟಗಾರ್ತಿ ಚಾರ್ವಿ ಅನಿಲ್ ಕುಮಾರ್, ಸ್ಪೇನ್‌ನಲ್ಲಿ ಶುಕ್ರವಾರ ಮೊದಲ 'ಮಹಿಳಾ ಇಂಟರ್‌ನ್ಯಾಷನಲ್ ಮಾಸ್ಟರ್' (ಡಬ್ಲ್ಯು.ಐ.ಎಂ) ನಾರ್ಮ್ ಪಡೆದಿದ್ದಾಳೆ


Video shot at site
Scan to chat
Scan for floor plans
FUTURE IS ONE
ವಿಶೇಷವಾಗಿ ಕೆಲವರಿಗೆ ವಿವೇಚನೆಯಿಂದ ವಿನ್ಯಾಸಗೊಳಿಸಲಾಗಿದೆ.
ಅತ್ಯಧಿಕ ಬಾಡಿಗೆ
• ಮುಂಬರುವ ಇನ್ಫೋಸಿಸ್ ಕ್ಯಾಂಪಸ್ ಪಕ್ಕ
• ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಿಂದ ನಡಿಗೆ ದೂರ (50 ಎಕರೆ ಕಾರ್ಯಾಚರಣೆ ಕ್ಯಾಂಪಸ್)
• ಮುಂಬರುವ ನ್ಯೂ ಹಾರಿಜನ್ ವಿಶ್ವವಿದ್ಯಾಲಯಕ್ಕೆ ಕೂಗಳತೆ ದೂರ
ಅದ್ಭುತ ಜಾಗ
• ಎಲ್ಲಾ ಪ್ರಮುಖ ಅಂತಾರಾಷ್ಟ್ರೀಯ ಶಾಲೆಗಳಿಗೆ ಹತ್ತಿರ
• ಯೋಜಿತ ಸ್ವಿಫ್ಟ್ ಸಿಟಿಗೆ ಹತ್ತಿರ (15 ನಿಮಿಷ)
• ಪ್ರಮುಖ ಎಂಎನ್‌ಸಿಗಳಿಗೆ ಹತ್ತಿರ
AIIKYA VILLAGE
SARJAPUR
741513 1234
aiikyavillage.com
5-6ನೇ ಡಿಸೆಂಬರ್, 2025ರ ಮಧ್ಯಾಹ್ನ 2.10ಕ್ಕೆ ಬೆಂಗಳೂರಿನ ಮ್ಯಾರಿಯಟ್ ಯುಬಿ ಸಿಟಿಯಲ್ಲಿ ನಡೆಯುವ ಟೈಮ್ಸ್ ಫ್ಯಾಶನ್ ವೀಕ್‌ನಲ್ಲಿ AIIKYA ಲಾಂಜ್‌ಗೆ ಭೇಟಿ ನೀಡಿ.
ಪ್ರಶಸ್ತಿ ಪುರಸ್ಕೃತ ಡೂಪ್ಲೆಕ್ಸ್‌ಗಳು
2.5 ಬಿಹೆಚ್‌ಕೆ ರೂ.1.33 ಕೋಟಿ 1586 ಚದರಡಿ
3.5 ಬಿಹೆಚ್‌ಕೆ ರೂ.1.51 ಕೋಟಿ 1731-1907 ಚದರಡಿ
5.5 ಬಿಹೆಚ್‌ಕೆ ರೂ.2.34 ಕೋಟಿ 2807 ಚದರಡಿ
ಒಳಾಂಗಣ ವಿನ್ಯಾಸ ಸೇರಿದೆ
4-ವೇ ಪರಿವರ್ತಿಸಬಹುದಾದ ಗೃಹಗಳು
18+ Meaningful Amenities
ಇವಿ ಸಿದ್ಧ ಪಾರ್ಕಿಂಗ್
ಅಲೆಕ್ಸಾ ಸಕ್ರಿಯತೆಯ ಸ್ಮಾರ್ಟ್ ಹೋಮ್
18 ಅಡಿ ಹೈ ಸೀಲಿಂಗ್
ಹೈಡ್ರೋಪೋನಿಕ್ ಗ್ರೀನ್ಸ್
ರೇರಾ ನಂ.: PRM/KA/RERA/1251/446/PR/221123/006419
ಭವಿಷ್ಯಕ್ಕಾಗಿ ರೂಪಿಸಲಾದ ವಿನ್ಯಾಸ, ಸ್ಮಾರ್ಟ್ & ಕನ್ವರ್ಟಿಬಲ್ ಹೋಮ್ಸ್‌ನ ಹೊಸ ಯುಗ

ಶನಿವಾರ, ಡಿಸೆಂಬರ್ 6, 2025| ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸಾಂಪ್ರದಾಯಿಕ ಉಡುಗೆ

ಭೋಪಾಲ್‌ನಲ್ಲಿ ನಡೆದ ರಾಷ್ಟ್ರೀಯ ಬಾಲರಂಗ ಹಬ್ಬದಲ್ಲಿ ವಿದ್ಯಾರ್ಥಿನಿಯರು ಸಾಂಪ್ರದಾಯಿಕ ಉಡುಗೆ ಮತ್ತು ಆಭರಣ ಧರಿಸಿ ಗಮನ ಸೆಳೆದರು



ಶ್ರೀಹರಿ ಮಿಂಚು

ಒಲಿಂಪಿಯನ್ ಈಜುತಾರೆ ಶ್ರೀಹರಿ ನಟರಾಜ್ ಅವರು ಜೈಪುರದಲ್ಲಿ ನಡೆದ ಖೇಲೊ ಇಂಡಿಯಾ ವಿಶ್ವವಿದ್ಯಾಲಯ ಕ್ರೀಡಾಕೂಟದಲ್ಲಿ ಒಂಬತ್ತು ಚಿನ್ನ ಸೇರಿ 11 ಪದಕ ಗೆದ್ದರು. ಅವರು ಬೆಂಗಳೂರಿನ ಜೈನ್ ವಿ.ವಿ.ಯನ್ನು ಪ್ರತಿನಿಧಿಸಿದ್ದರು



ಭ್ರಷ್ಟಾಚಾರ: ಮುಂದುವರಿದ ಜಟಾಪಟಿ

ಬೆಂಗಳೂರು: ಕರ್ನಾಟಕದ ಭ್ರಷ್ಟಾಚಾರದ ಕುರಿತು ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ನೀಡಿದ್ದ ಹೇಳಿಕೆ ವಿಚಾರವಾಗಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ನಾಯಕರ ಜಟಾಪಟಿ ಶುಕ್ರವಾರವೂ ಮುಂದುವರೆದಿದೆ.

'ಇದು ಕಾಂಗ್ರೆಸ್ ಅವಧಿಯ ವರದಿ' ಎಂದು ಬಿಜೆಪಿ ನಾಯಕರು ಹೇಳುತ್ತಿದ್ದರೆ, 'ಇದು ಬಿಜೆಪಿ ಅವಧಿಯ ವರದಿ' ಎಂದು ಕಾಂಗ್ರೆಸ್ ಪ್ರತಿಪಾದಿಸುತ್ತಿದೆ. ಆದರೆ 2019ರ ನವೆಂಬರ್‌ನಲ್ಲಿ ಬಿಡುಗಡೆಯಾದ ವರದಿಯು, ಅಲ್ಲಿಂದ 12 30ಗಳ ಹಿಂದಿನ ಅವಧಿಗೆ ಸಂಬಂಧಿಸಿದ್ದು. ಆ ಅವಧಿಯಲ್ಲಿ ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರವಿತ್ತು.

'ಅಶೋಕ ಮತಿಗೇಡಿತನ'


ಸಿದ್ದರಾಮಯ್ಯ

'ಟ್ರಾನ್ಸ್‌ಪರೆನ್ಸಿ ಇಂಡಿಯಾ ಇಂಟರ್‌ನ್ಯಾಶನಲ್ ಸಂಸ್ಥೆಯು 2019ರ ನವೆಂಬರ್‌ನಲ್ಲಿ ನೀಡಿರುವ ವರದಿಯಲ್ಲಿ ರಾಜ್ಯದಲ್ಲಿ ಶೇ 63ರಷ್ಟು ಭ್ರಷ್ಟಾಚಾರ ಇದೆ ಎಂದಿತ್ತು. ಈ ವರದಿ ಹೊರಬರುವ ವೇಳೆಯಲ್ಲಿ ರಾಜ್ಯದಲ್ಲಿ ಯಡಿಯೂರಪ್ಪ ಅವರ ನೇತೃತ್ವದ ಬಿಜೆಪಿ ಸರ್ಕಾರ ಆಡಳಿತದಲ್ಲಿ ಇತ್ತು. ಆರ್.ಅಶೋಕ ಅವರು ಉಪಲೋಕಾಯುಕ್ತರ ಮಾತನ್ನು ಸರಿಯಾಗಿ ಅರ್ಥೈಸಿಕೊಂಡಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಉಪ ಲೋಕಾಯುಕ್ತ ಬಿ.ವೀರಪ್ಪ ಅವರ ಮಾತುಗಳನ್ನು ನಮ್ಮ ಸರ್ಕಾರಕ್ಕೆ ಅನ್ವಯಿಸಿ ಹೇಳುವ ಆರ್.ಅಶೋಕ ಅವರ ಮತಿಗೇಡಿತನಕ್ಕೆ ಏನೆನ್ನಬೇಕು? ನಮ್ಮ ಸರ್ಕಾರದಲ್ಲಿ ನೇಮಕಾತಿಯಿಂದ ಹಿಡಿದು ವರ್ಗಾವಣೆಯವರೆಗೆ ಎಲ್ಲವನ್ನೂ ಪಾರದರ್ಶಕವಾಗಿಸುವ, ಯಾವುದೇ ರೀತಿಯ ಹಣ, ಅಧಿಕಾರದ ದುರ್ಬಳಕೆಯಾಗುವುದನ್ನು ತಡೆಯುವ ಪ್ರಯತ್ನ ಜಾರಿಯಲ್ಲಿದೆ. ಬಿಜೆಪಿ ಸರ್ಕಾರದಲ್ಲಿ ಆಗಿರುವ ಬ್ರಹ್ಮಾಂಡ ಭ್ರಷ್ಟಾಚಾರವನ್ನು ಎರಡೂವರೆ ವರ್ಷದಲ್ಲಿ ಸ್ವಚ್ಛ ಮಾಡುವುದು ಅಸಾಧ್ಯ. ಸ್ವಲ್ಪ ಸಮಯ ಕೊಡಿ ಎಲ್ಲವನ್ನೂ ಸರಿಪಡಿಸುತ್ತೇವೆ' ಎಂದಿದ್ದಾರೆ.

'ಶೇ 40 ಅಲ್ಲ, ಶೇ 63'


ಡಿ.ಕೆ. ಶಿವಕುಮಾರ್

'ಈ ವರದಿ ಬಂದಾಗ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರವಿತ್ತು. 2023ರಲ್ಲಿ ನಾವು, 'ಬಿಜೆಪಿಯದ್ದು ಶೇ 40ರಷ್ಟು ಕಮಿಷನ್ ಸರ್ಕಾರ' ಎಂದಿದ್ದೆವು. ಈಗ ಬಿಜೆಪಿಯವರು ತಮ್ಮ ಸರ್ಕಾರದ ಅವಧಿಯಲ್ಲಿ ಶೇ 63ರಷ್ಟು ಭ್ರಷ್ಟಾಚಾರವಿತ್ತು ಎಂದಿರುವ ವರದಿಯನ್ನು ತಾವೇ ಸಾರ್ವಜನಿಕಗೊಳಿಸಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಬಿಜೆಪಿ ನಾಯಕರು ಕರ್ನಾಟಕದತ್ತ ಬೊಟ್ಟು ಮಾಡುವುದನ್ನು ಬಿಡಬೇಕು. ಬದಲಿಗೆ, ಬಿಜೆಪಿ ಆಡಳಿತದ ಅವಧಿಯಲ್ಲಿ, ಭ್ರಷ್ಟಾಚಾರ ಸೂಚ್ಯಂಕದಲ್ಲಿ ಭಾರತವು 96ನೇ ಸ್ಥಾನಕ್ಕೆ ಕುಸಿದಿರುವುದು ಏಕೆ ಎಂಬುದನ್ನು ವಿವರಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ಕಾಂಗ್ರೆಸ್ ಅವಧಿಯ ವರದಿ'


ಆರ್. ಅಶೋಕ

'ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಉಲ್ಲೇಖಿಸಿರುವ 'ಟ್ರಾನ್ಸ್‌ಪರೆನ್ಸಿ ಇಂಡಿಯಾ ಇಂಟರ್‌ನ್ಯಾಶನಲ್' ವರದಿ 2019ರಲ್ಲಿ ಬಿಡುಗಡೆಯಾಗಿದ್ದು, ವರದಿಯ ದತ್ತಾಂಶವು 2018ರ ಅವಧಿಯದ್ದು. ಹಾಗಾಗಿ, ಅಂದು ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವಧಿಯಲ್ಲೇ ಶೇ 63ರಷ್ಟು ಭ್ರಷ್ಟಾಚಾರ ಇತ್ತು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ವರದಿಯು 2019ಕ್ಕೂ ಹಿಂದಿನ ವರ್ಷದ ಭ್ರಷ್ಟಾಚಾರದ ಕುರಿತು ನಡೆಸಿದ ಸಮೀಕ್ಷೆಯ ಅಂಶಗಳನ್ನು ಒಳಗೊಂಡಿತ್ತು. ನ್ಯಾ.ವೀರಪ್ಪ ಅವರು ಆಗಿನ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಮಾತನಾಡಿದ್ದಾರೆ. ಬಿಜೆಪಿ ಆಡಳಿತದ ಬಗ್ಗೆ ಹೇಳಿಲ್ಲ' ಎಂದರು.

'ಇದೊಂದೇ ವರದಿ ಕಾಂಗ್ರೆಸ್ ನೇತೃತ್ವದ ಸರ್ಕಾರದ ಭ್ರಷ್ಟಾಚಾರವನ್ನು ಬಯಲಿಗೆಳೆದಿಲ್ಲ. 2017ರ ಮತ್ತೊಂದು ರಾಷ್ಟ್ರೀಯ ಸಮೀಕ್ಷೆಯೂ ಕರ್ನಾಟಕವನ್ನು ಭಾರತದ ಅತ್ಯಂತ ಭ್ರಷ್ಟ ರಾಜ್ಯ ಎಂದು ಘೋಷಿಸಿತ್ತು. ಈ ವರದಿಗಳ ಅರಿವಿಲ್ಲದೆ ಲೋಕಾಯುಕ್ತ ವರದಿ ಎಂದು ತಪ್ಪು ಮಾಹಿತಿ ನೀಡಿ, ನಂತರ ತಿದ್ದಿಕೊಂಡಿದ್ದಾರೆ' ಎಂದು ದೂರಿದರು.

ಸುದ್ದಿ 2 ನಿಮಿಷ

ರಾಜ್ಯದಲ್ಲಿ ಎರಡು ದಿನ ಒಣ ಹವೆ

ಬೆಂಗಳೂರು: ಕರ್ನಾಟಕದ ಉತ್ತರ, ದಕ್ಷಿಣ ಒಳನಾಡು ಹಾಗೂ ಕರಾವಳಿ ಭಾಗದಲ್ಲಿ ಮುಂದಿನ ಎರಡು ದಿನ ಒಣ ಹವೆ ಮುಂದುವರಿಯಲಿದೆ. ಆನಂತರ ಕೆಲವು ಕಡೆ ಕನಿಷ್ಠ ತಾಪಮಾನದಲ್ಲಿ 2ರಿಂದ 3 ಡಿಗ್ರಿ ಸೆಲ್ಸಿಯಸ್ ಇಳಿಕೆಯಾಗಬಹುದು ಎಂದು ಭಾರತೀಯ ಹವಾಮಾನ ಕೇಂದ್ರ ಮುನ್ಸೂಚನೆ ನೀಡಿದೆ.

ಬೀದರ್ ಹಾಗೂ ದಾವಣಗೆರೆಯಲ್ಲಿ ಶುಕ್ರವಾರ ಕನಿಷ್ಠ ಉಷ್ಣಾಂಶ 15 ಡಿಗ್ರಿ ಸೆಲ್ಸಿಯಸ್‌ನಷ್ಟು ದಾಖಲಾಗಿದೆ ಎಂದು ಕೇಂದ್ರದ ಬೆಂಗಳೂರು ಮುಖ್ಯಸ್ಥ ಎನ್.ಪುವಿಯರಸನ್ ತಿಳಿಸಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಕೊಟ್ಟಿಗೆಹಾರ, ಕಳಸ, ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ, ಹಾಸನ ಜಿಲ್ಲೆಯ ಅರಕಲಗೂಡು, ಉಡುಪಿ ಜಿಲ್ಲೆಯ ಕೋಟ ಭಾಗದಲ್ಲಿ ಶುಕ್ರವಾರ ಸಾಧಾರಣ ಮಳೆಯಾಗಿದೆ. ಬೆಂಗಳೂರು ನಗರ, ಗ್ರಾಮಾಂತರ, ಚಿಕ್ಕಬಳ್ಳಾಪುರ, ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ತುಂತುರು ಮಳೆಯಾಗಿದೆ ಎಂದು ತಿಳಿಸಿದ್ದಾರೆ.

ತುಂಗಭದ್ರಾ: ಗೇಟ್ ಅಳವಡಿಕೆ ಪೂರ್ವಭಾವಿ ಕೆಲಸ ಆರಂಭ



ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಯಲ್ಲಿ ಕ್ರಸ್ಟ್‌ಗೇಟ್‌ಗಳನ್ನು ಬದಲಿಸುವ ಕೆಲಸ ಶುಕ್ರವಾರ ಚಾಲನೆ ನೀಡಿದ್ದು, ಗೇಟ್‌ಗಳ ಕವಚ ತೆರವುಗೊಳಿಸುವ ಕೆಲಸ ನಡೆಯಿತು. ಇದಕ್ಕೆ ಮುನ್ನಹೋಮ ನಡೆಯಿತು.

₹52 ಕೋಟಿ ವೆಚ್ಚದಲ್ಲಿ 33 ಕ್ರಸ್ಟ್‌ಗೇಟ್‌ಗಳನ್ನು ತೆರವುಗೊಳಿಸಿ, ಹೊಸ ಗೇಟ್ ಅಳವಡಿಸುವ ಗುತ್ತಿಗೆಯನ್ನು ಗುಜರಾತ್ ಮೂಲದ ಹಾರ್ಡ್‌ವೇರ್ ಟೂಲ್ಸ್ ಆ್ಯಂಡ್ ಮೆಷಿನರಿ ಪ್ರೊಜೆಕ್ಟ್ ಕಂಪನಿ ಪಡೆದುಕೊಂಡಿದೆ. ಅಣೆಕಟ್ಟೆಯಲ್ಲಿ ಸದ್ಯ ನೀರಿನ ಸಂಗ್ರಹ 67 ಟಿಎಂಸಿ ಅಡಿಯಿದೆ. 40 ಟಿಎಂಸಿ ಅಡಿಗೆ ಇಳಿದಾಗ ಗೇಟ್‌ಗಿಂತ ಕೆಳಮಟ್ಟದಲ್ಲಿ ನೀರು ಇರುತ್ತದೆ. ಆಗ, ಬಹುತೇಕ ತಿಂಗಳಾಂತ್ಯಕ್ಕೆ ಗೇಟ್ ಅಳವಡಿಕೆ ಕಾರ್ಯ ನಡೆಯಲಿದೆ. ಸದ್ಯ 15 ಗೇಟ್‌ಗಳು ಸಿದ್ಧವಾಗಿವೆ. ಮೂರರಿಂದ ನಾಲ್ಕು ತಿಂಗಳಲ್ಲಿ ಎಲ್ಲಾ 33 ಗೇಟ್‌ಗಳು ಸಿದ್ಧವಾಗಲಿವೆ' ಎಂದು ತುಂಗಭದ್ರಾ ಅಣೆಕಟ್ಟು ಮಂಡಳಿಯ ಅಧಿಕಾರಿಗಳು ವ್ಯಕ್ತಪಡಿಸಿದ್ದಾರೆ.

'ಹಳೆಯ ಒಂದು ಗೇಟ್ ತೆರವುಗೊಳಿಸಿ, ಅದೇ ಜಾಗದಲ್ಲಿ ಹೊಸ ಗೇಟ್ ಅಳವಡಿಸುವ ಕಾರ್ಯ 14 ದಿನದಲ್ಲಿ ಮುಗಿಯಲಿದೆ. 6 ತಿಂಗಳಲ್ಲಿ ಎಲ್ಲ ಗೇಟ್‌ಗಳನ್ನು ಬದಲಿಸುವ ವಿಶ್ವಾಸ ಇದೆ' ಎಂದಿದ್ದಾರೆ.

ಚಿಟಿಕೆ ಸುದ್ದಿ

ದ್ವೇಷ ಭಾಷಣ ಮಸೂದೆಗೆ ವಿರೋಧ

ದಾವಣಗೆರೆ: 'ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷಾಪರಾಧಗಳ (ಪ್ರತಿಬಂಧಕ) ಮಸೂದೆ–2025' ರಚನೆ ಕುರಿತು ಸರ್ಕಾರದ ವಿರುದ್ಧ ಶ್ರೀರಾಮ ಸೇನೆ ಸಂಸ್ಥಾಪಕ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಕಿಡಿಕಾರಿದ್ದಾರೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಸೂದೆಯ ಪ್ರತಿಯನ್ನು ಹರಿದುಹಾಕಿದ ಪ್ರಮೋದ್ ಮುತಾಲಿಕ್, 'ಮಸೂದೆ ಜಾರಿಗೊಳಿಸಿದರೆ ರಾಜ್ಯದಾದ್ಯಂತ ಹೋರಾಟ ನಡೆಸಲಾಗುವುದು' ಎಂದು ಎಚ್ಚರಿಸಿದರು.

ಬೆಳಗಾವಿ ಅಧಿವೇಶನದಲ್ಲಿ ಈ ಮಸೂದೆಗೆ ಅನುಮೋದನೆ ದೊರೆಯದಂತೆ ನೋಡಿಕೊಳ್ಳುವಂತೆ ಬಿಜೆಪಿ ಹಾಗೂ ಜೆಡಿಎಸ್ ನಾಯಕರನ್ನು ಭೇಟಿ ಮಾಡಿ ಮನವಿ ಮಾಡುತ್ತೇವೆ' ಎಂದರು.

ಹನೂರು: ಚಿನ್ನದ ನಿಕ್ಷೇಪ ಪತ್ತೆ?

ಚಾಮರಾಜನಗರ: ಜಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ ಅಧಿಕಾರಿಗಳ ತಂಡ ಈಚೆಗೆ ಜಿಲ್ಲೆಯಲ್ಲಿ ಖನಿಜ ನಿಕ್ಷೇಪಗಳ ಲಭ್ಯತೆ ಕುರಿತು ನಡೆಸಿದ ಪ್ರಾಥಮಿಕ ಹಂತದ ಸರ್ವೆಯಲ್ಲಿ, ಹನೂರು ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಚಿನ್ನದ ನಿಕ್ಷೇಪ ಲಭ್ಯವಾಗಬಹುದು ಎಂಬ ಸುಳಿವು ದೊರಕಿದೆ.

'ತಾಲ್ಲೂಕಿನ ಅಜ್ಜೀಪುರ, ಕೌದಳ್ಳಿ, ಆಲತ್ತೂರು ಸೇರಿ ಹಲವು ಗ್ರಾಮಗಳಲ್ಲಿ ಚಿನ್ನ ಸಹಿತ ಹಲವು ಉಪಯುಕ್ತ ಖನಿಜಗಳು ಸಿಗುವ ಸಾಧ್ಯತೆ' ಕುರಿತು ಹೆಚ್ಚಿನ ಸಂಶೋಧನೆ ನಡೆಸಲು ಅಧಿಕಾರಿಗಳು ನಿರ್ಧರಿಸಿದ್ದಾರೆ.

'6 ತಿಂಗಳು ಸಂಶೋಧನೆ ನಡೆಯಲಿದ್ದು, ಆ ಅವಧಿಯಲ್ಲಿ ಚಿನ್ನದ ಲಭ್ಯತೆಯ ಬಗ್ಗೆ ಖಚಿತವಾದರೆ ಮಾತ್ರ ಮುಂದಿನ ಪ್ರಕ್ರಿಯೆಗಳು ನಡೆಯಲಿವೆ' ಎಂದು ತಿಳಿಸಿದರು.

ಹೇಳಿಕೆ ದುರುಪಯೋಗ ಸಲ್ಲ: ನ್ಯಾ.ವೀರಪ್ಪ ಗುಡುಗು

'2019ರ ಸರ್ವೇಕ್ಷಣಾ ವರದಿಯ ಅಂಕಿ–ಅಂಶ • ಯಾವುದೇ ಸರ್ಕಾರವನ್ನು ಬೊಟ್ಟು ಮಾಡಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭ್ರಷ್ಟಾಚಾರದಲ್ಲಿ ಕರ್ನಾಟಕ ಐದನೇ ಸ್ಥಾನದಲ್ಲಿ ಇದೆ ಎಂಬುದು ಇಂಡಿಯಾ ಕರಪ್ಶನ್ ಸರ್ವೆ–2019ರ ಸರ್ವೇಕ್ಷಣಾ ವರದಿಯ ಅಂಕಿ ಅಂಶ ಆಧರಿಸಿದ ನನ್ನ ಹೇಳಿಕೆಯನ್ನು ರಾಜಕಾರಣಿಗಳು ದುರುಪಯೋಗ ಮಾಡಿಕೊಂಡರೆ ಸಹಿಸುವುದಿಲ್ಲ' ಎಂದು ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಗುಡುಗಿದರು.

'ಹೈಕೋರ್ಟ್ ವಕೀಲ ತುಳವನೂರು ಶಂಕರಪ್ಪ ಅವರು ಬರೆದಿರುವ 'ಓವರ್‌ಸೀಸ್ ಟ್ರಾವೆಲಾಗ್' ಪ್ರವಾಸ ಕಥನ ಬಿಡುಗಡೆ ಕಾರ್ಯಕ್ರಮದಲ್ಲಿನ ನನ್ನ ಉಕ್ತ ಅಂಶಗಳು ವರದಿಯಲ್ಲಿ ಪೂರ್ಣಪ್ರಮಾಣದಲ್ಲಿ ವ್ಯಕ್ತವಾಗಿಲ್ಲ.



ಲೋಕಾಯುಕ್ತನಾಗಿ ನನಗೆ ನನ್ನ ಜವಾಬ್ದಾರಿಯ ಅರಿವಿದೆ. ನಾನು ಭ್ರಷ್ಟಾಚಾರದ ವಿರುದ್ಧ ಯಾವತ್ತೂ ಸ್ಪಂದನಶೀಲ ಮನೋಭಾವ ಹೊಂದಿರುವ ವ್ಯಕ್ತಿ

ನ್ಯಾ. ಬಿ. ವೀರಪ್ಪ, ಉಪಲೋಕಾಯುಕ್ತ

ವಾಸ್ತವದಲ್ಲಿ ನಾನು ಯಾವುದೇ ಸರ್ಕಾರ ಎಂದು ನಿರ್ದಿಷ್ಟವಾಗಿ ಬೊಟ್ಟು ಮಾಡಿಲ್ಲ. ಅಂಕಿ ಅಂಶಗಳನ್ನು ಆಧರಿಸಿ, ಕೇರಳದಲ್ಲಿ ಅತಿ ಕಡಿಮೆ ಭ್ರಷ್ಟಾಚಾರ ಇದೆ ಮತ್ತು ಕರ್ನಾಟಕ 5ನೇ ಸ್ಥಾನದಲ್ಲಿದೆ ಎಂಬ 2019ರ ಸರ್ವೆ ವರದಿಯನ್ನು ಉಲ್ಲೇಖಿಸಿದ್ದೇನೆ' ಅವರು ವಿವರಿಸಿದರು.

ತಮ್ಮ ಕಚೇರಿಯಲ್ಲಿ ಶುಕ್ರವಾರ ಈ ಕುರಿತು ಮಾಧ್ಯಮ ಪ್ರತಿನಿಧಿಗಳಿಗೆ ವಿಶದಪಡಿಸಿದ ಅವರು, 'ಯಾವುದೇ ಪಕ್ಷಕ್ಕೂ ನನಗೂ ಸಂಬಂಧವಿಲ್ಲ. ನಾನು ಅತ್ಯಂತ ಪ್ರಾಮಾಣಿಕವಾಗಿ ನನ್ನ ಕರ್ತವ್ಯಗಳನ್ನು ಸರ್ಕಾರಿ ವಕೀಲನಾಗಿ, ಹೈಕೋರ್ಟ್ ನ್ಯಾಯಮೂರ್ತಿಯಾಗಿ ಮತ್ತು ಈಗ ಉಪ ಲೋಕಾಯುಕ್ತನಾಗಿ ಪಾರದರ್ಶಕವಾಗಿ ನಿಭಾಯಿಸುತ್ತಾ ಬಂದಿದ್ದೇನೆ' ಎಂದರು.

'ಇಂದು ನಮ್ಮ ವ್ಯವಸ್ಥೆಯ ನಾಲ್ಕೂ ಅಂಗಗಳು ಬಲಹೀನವಾಗಿವೆ. ಅದರಲ್ಲಿ ನ್ಯಾಯಾಂಗ ಮತ್ತು ಪತ್ರಿಕಾ ರಂಗ ಒಳ್ಳೆ ಕೆಲಸ ಮಾಡುತ್ತಿವೆ. ಕಾರ್ಯಕ್ರಮದಲ್ಲಿ ಮಾತನಾಡುವಾಗ ನಾನು, ಸರ್ವೆ ವರದಿಯಲ್ಲಿದ್ದ ಅಂಶಗಳನ್ನು ಪ್ರಸ್ತಾಪಿಸಿದ್ದೇನೆಯಷ್ಟೇ ಹೊರತು, ಇದು ನನ್ನ ವೈಯಕ್ತಿಕ ಹೇಳಿಕೆಯಲ್ಲ' ಎಂದು ಸ್ಪಷ್ಟಪಡಿಸಿದರು.

'ನಮಗೆ ಸ್ವಾತಂತ್ರ್ಯ ಬಂದು 78 ವರ್ಷಗಳು ಹೇಗೆ ಆಗಿವೆಯೋ ಹಾಗೆಯೇ ದೇಶದಲ್ಲಿನ ಭ್ರಷ್ಟಾಚಾರಕ್ಕೂ ಅಷ್ಟೇ ವಯಸ್ಸಾಗಿದೆ. ಭ್ರಷ್ಟಾಚಾರ ಇಂದು ಕ್ಯಾನ್ಸರ್ ರೀತಿ ಹಬ್ಬಿದೆ. ಈ ಪಿಡುಗಿಗೆ ನಾವೆಲ್ಲರೂ ಕಾರಣ. ದುಡ್ಡು ತೆಗೆದುಕೊಂಡು ಮತ ಹಾಕುವ ಮತದಾರರನ್ನು ನಾವು ಪೋಷಿಸಿದ್ದೇವೆ. ಯಾವ ಸರ್ಕಾರವೂ ಭ್ರಷ್ಟಾಚಾರ ನಿರ್ಮೂಲನೆ ಮಾಡಲಿಲ್ಲ' ಎಂದು ವಿಷಾದಿಸಿದರು.

ಘಟನೆ ಹಿನ್ನೆಲೆ

ಇದೇ 3ರಂದು ಮಧ್ಯಾಹ್ನ ತುಳವನೂರು ಶಂಕರಪ್ಪ ಅವರ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ್ದ ನ್ಯಾ.ವೀರಪ್ಪ ಅವರು, 'ರಾಜ್ಯದ ಪ್ರತಿಯೊಂದು ಇಲಾಖೆಯಲ್ಲೂ ಭ್ರಷ್ಟಾಚಾರ ತುಂಬಿ ತುಳುಕಾಡುತ್ತಿದ್ದು, ಕರ್ನಾಟಕ ಭ್ರಷ್ಟಾಚಾರದ ಅಗ್ರಪಟ್ಟಿಯಲ್ಲಿ ಐದನೆಯ ಸ್ಥಾನ ಪಡೆದಿದೆ. ಈ ಪಿಡುಗನ್ನು ಕೂಡಲೇ ತಡೆಯದೇ ಹೋದರೆ ಭವಿಷ್ಯದಲ್ಲಿ ಭೀಕರ ಅಪಾಯ ಕಟ್ಟಿಟ್ಟ ಬುತ್ತಿ' ಎಂದು ಎಚ್ಚರಿಸಿದ್ದರು.

ವಾಚ್ ಕುರಿತ ಆರೋಪಕ್ಕೆ ಡಿಸಿಎಂ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯೆ

'ಛಲವಾದಿ ಹೊಣೆಯರಿತು ಮಾತನಾಡಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಬಹಳ ಘನತೆ ಇದೆ. ಆ ಸ್ಥಾನದಲ್ಲಿ ಇರುವ ಛಲವಾದಿ ನಾರಾಯಣಸ್ವಾಮಿ ಅವರು ಜವಾಬ್ದಾರಿಯುತವಾಗಿ ಮಾತನಾಡುವುದನ್ನು ಕಲಿತುಕೊಳ್ಳಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಿ.ಕೆ.ಶಿವಕುಮಾರ್ ಅವರ ಮನೆಗೆ ಉಪಹಾರ ಕೂಟಕ್ಕೆ ಹೋಗಿದ್ದಾಗ ಇಬ್ಬರು ನಾಯಕರೂ ಕಟ್ಟಿಕೊಂಡಿದ್ದ ಕೈಗಡಿಯಾರಗಳ ಬಗ್ಗೆ ಹೇಳಿಕೆ ನೀಡಿದ್ದ ನಾರಾಯಣಸ್ವಾಮಿ, 'ಈ ಕೈಗಡಿಯಾರಗಳ ಬಗ್ಗೆ ಶಿವಕುಮಾರ್ ಅವರು ಮಾಹಿತಿ ನೀಡಿರಲಿಲ್ಲ' ಎಂದಿದ್ದರು.

ಈ ಬಗ್ಗೆ ಪ್ರತಿಕ್ರಿಯಿಸಿರುವ ಶಿವಕುಮಾರ್ ಅವರು, 'ಕೈಗಡಿಯಾರದ ಬಗ್ಗೆ ನಾನು ಮಾತನಾಡುವುದಿಲ್ಲ. ನಾನು ಲೋಕಾಯುಕ್ತಕ್ಕೆ ಮಾಹಿತಿ ಸಲ್ಲಿಸಿದ್ದೇನೋ ಇಲ್ಲವೋ ಎಂಬುದನ್ನು ನಾರಾಯಣಸ್ವಾಮಿ ಅವರು ಪರಿಶೀಲಿಸಿಕೊಳ್ಳಬಹುದು. ಲೋಕಾಯುಕ್ತ ಸಂಸ್ಥೆಗೆ ಮನವಿ ಸಲ್ಲಿಸಿದರೆ, ನನ್ನೆಲ್ಲಾ ದಾಖಲೆಗಳನ್ನು ನೀಡುತ್ತೇನೆ' ಎಂದರು.

ನಂತರ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ಲೋಕಾಯುಕ್ತಕ್ಕೆ ನಾನು ಸಲ್ಲಿಸಿರುವ ಪ್ರಮಾಣ ಪತ್ರವನ್ನು ಇಲ್ಲಿಯೇ ಹಾಕುತ್ತಿದ್ದೇನೆ. ಒಮ್ಮೆ ನೋಡಿಕೊಳ್ಳಿ. ಬೇಕಿದ್ದರೆ ಲೋಕಾಯುಕ್ತಕ್ಕೆ ಹೋಗಿ ಪರಿಶೀಲಿಸಿಕೊಳ್ಳಿ' ಎಂದು ಪ್ರತಿಕ್ರಿಯೆ ನೀಡಿದ್ದಾರೆ. ಲೋಕಾಯುಕ್ತಕ್ಕೆ ತಾವು ಸಲ್ಲಿಸಿದ್ದ ಪ್ರಮಾಣಪತ್ರಗಳ ಚಿತ್ರಗಳನ್ನು ಪೋಸ್ಟ್‌ನಲ್ಲಿ ಲಗತ್ತಿಸಿದ್ದಾರೆ.

ಛಲವಾದಿ ನಾರಾಯಣಸ್ವಾಮಿ ಅವರೇ, ನನಗೆ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನಮಗೆ ಇಷ್ಟವಾದ ಕೈಗಡಿಯಾರ ಕಟ್ಟಿಕೊಳ್ಳುವ ಯೋಗ್ಯತೆ ಇಲ್ಲವೇ? ಹಕ್ಕು ಇಲ್ಲವೇ?

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

'ಕದ್ದ ಕೈಗಡಿಯಾರವಾ?'


ಛಲವಾದಿ ನಾರಾಯಣ ಸ್ವಾಮಿ

'ಡಿ.ಕೆ.ಶಿವಕುಮಾರ್ ಅವರೇ ಹೇಳಿಕೊಂಡಿರುವಂತೆ ಅವರ 'ಕಾರ್ಟಿಯರ್' ಕೈಗಡಿಯಾರ 7–8 ವರ್ಷ ಹಳೆಯದು. ಆದರೆ, 2018 ಮತ್ತು 2023ರ ಚುನಾವಣಾ ಅಫಿಡವಿಟ್‌ನಲ್ಲಿ ಅದರ ಉಲ್ಲೇಖವಿಲ್ಲ. 7 ವರ್ಷದ ಹಿಂದಿನಿಂದಲೂ ಇರುವ, ಈಗ ಕೈಯಲ್ಲಿ ಕಟ್ಟಿರುವ ಕಾರ್ಟಿಯರ್ ವಾಚ್ ಕುರಿತು ಅಫಿಡವಿಟ್‌ನಲ್ಲಿ ತಿಳಿಸಿಲ್ಲವೇಕೆ? ಅದು ಕದ್ದ ಕೈಗಡಿಯಾರವಾ' ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಿಮ್ಮ ಅಫಿಡವಿಟ್‌ನಲ್ಲಿ ದುಬಾರಿ ಬೆಲೆಯ ರೋಲೆಕ್ಸ್ ಮತ್ತು ಹ್ಯೂಬ್ಲೊ ಗಡಿಯಾರಗಳನ್ನು ಉಲ್ಲೇಖಿಸಿದ್ದೀರಿ. ಅಫಿಡವಿಟ್‌ನಲ್ಲಿ ಇಲ್ಲದ ಕಾರ್ಟಿಯರ್, ಈಗ ನಿಮ್ಮ ಮಣಿಕಟ್ಟಿನಲ್ಲಿ ದಿಢೀರ್ ಎಂದು ಪ್ರತ್ಯಕ್ಷವಾದದ್ದಾದರೂ ಹೇಗೆ' ಎಂದು ಕೇಳಿದರು.

ವಾಣಿಜ್ಯ ತೆರಿಗೆ ಗುರಿ: ಶೇ 10ರಷ್ಟು ಕೊರತೆ

ಜಿಎಸ್‌ಟಿ ದರ ಬದಲಾವಣೆ: ಬೆಳವಣಿಗೆ ದರ ಶೇ 3ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ತೆರಿಗೆ ಸಂಗ್ರಹಕ್ಕೆ ನೀಡಲಾಗಿದ್ದ ಗುರಿಯಲ್ಲಿ ಶೇ 10ರಷ್ಟು ಕೊರತೆಯಾಗಿದ್ದು, ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಶೇ 100ರಷ್ಟು ಗುರಿಯನ್ನು ಸಾಧಿಸಲೇಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಾಕೀತು ಮಾಡಿದ್ದಾರೆ.

ವಾಣಿಜ್ಯ ತೆರಿಗೆ ಇಲಾಖೆ ಮತ್ತು ಅಬಕಾರಿ ಇಲಾಖೆ ಅಧಿಕಾರಿಗಳ ಜತೆಗೆ ವಿಧಾನಸೌಧದಲ್ಲಿ ಶುಕ್ರವಾರ ಅವರು ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಈ ವೇಳೆ ಅಧಿಕಾರಿಗಳು ನೀಡಿದ ಅಂಕಿ–ಅಂಶಗಳನ್ನು ಪರಿಶೀಲಿಸಿದ ಅವರು, ಅಸಮಾಧಾನ ವ್ಯಕ್ತಪಡಿಸಿದರು ಎಂದು ಗೊತ್ತಾಗಿದೆ.

2025–26ನೇ ಆರ್ಥಿಕ ವರ್ಷದಲ್ಲಿ ₹1.20 ಲಕ್ಷ ಕೋಟಿ ವಾಣಿಜ್ಯ ತೆರಿಗೆ ಸಂಗ್ರಹ ಗುರಿ ನೀಡಲಾಗಿದೆ. ನವೆಂಬರ್ ಅಂತ್ಯದ ವೇಳೆಗೆ ₹80,000 ಕೋಟಿ ಸಂಗ್ರಹಿಸಬೇಕಿತ್ತು. ಆದರೆ ನವೆಂಬರ್ ಅಂತ್ಯದವರೆಗೆ ₹72,131 ಕೋಟಿ ಮಾತ್ರ ಸಂಗ್ರಹವಾಗಿದೆ ಎಂದು ಅಧಿಕಾರಿಗಳು ಸಭೆಯಲ್ಲಿ ಮಾಹಿತಿ ನೀಡಿದರು. ಈ ಪ್ರಕಾರ, ನಿಗದಿತ ಗುರಿಯಲ್ಲಿ ₹7,869 ಕೋಟಿ ಕೊರತೆಯಾಗಿದೆ.

ಏಪ್ರಿಲ್‌ನಿಂದ ಆಗಸ್ಟ್‌ವರೆಗೆ ವಾಣಿಜ್ಯ ತೆರಿಗೆ ಸಂಗ್ರಹದಲ್ಲಿ ಶೇ 12ರಷ್ಟು ಪ್ರಗತಿ ಸಾಧಿಸಲಾಗಿತ್ತು. ಆದರೆ, ಕೇಂದ್ರ ಸರ್ಕಾರವು ಜಿಎಸ್‌ಟಿ ದರಗಳಲ್ಲಿ ಬದಲಾವಣೆ ಮಾಡಿದ್ದರಿಂದ ನಂತರದ ತಿಂಗಳುಗಳಲ್ಲಿ ತೆರಿಗೆ ಸಂಗ್ರಹ ಇಳಿಮುಖವಾಗಿದೆ. ಶೇ 12ರಷ್ಟು ಇದ್ದ ಬೆಳವಣಿಗೆ ದರವು ಸೆಪ್ಟೆಂಬರ್‌ನಿಂದ ನವೆಂಬರ್ ಅವಧಿಯಲ್ಲಿ ಶೇ 3ರಷ್ಟಕ್ಕೆ ಕುಸಿದಿದೆ. ಪರಿಣಾಮವಾಗಿ ಒಟ್ಟು ತೆರಿಗೆ ಸಂಗ್ರಹ ಗುರಿಯಲ್ಲಿ ಶೇ 10ರಷ್ಟು ಕೊರತೆಯಾಗಿದೆ ಎಂದು ಅಧಿಕಾರಿಗಳು ಸಭೆಯಲ್ಲಿ ವಿವರಣೆ ನೀಡಿದ್ದಾರೆ.

ತೆರಿಗೆ ವಂಚನೆ ಪ್ರಕರಣಗಳು ಮತ್ತು ನಕಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ಕ್ಲೇಮುಗಳ ಕಾರಣ ದಿಂದ ತೆರಿಗೆ ಸಂಗ್ರಹ ಕೊರತೆ ಯಾಗಿದೆ. ಇದನ್ನು ತಡೆಯಲು ತಪಾಸಣಾ ಕಾರ್ಯಾಚರಣೆಗಳನ್ನು ನಡೆಸಲಾಗುತ್ತಿದೆ. ಈ ಅವಧಿಯಲ್ಲಿ ಒಟ್ಟು 13,000 ತಪಾಸಣೆಗಳನ್ನು ನಡೆಸಿ, ₹3,183 ಕೋಟಿ ತೆರಿಗೆ ಸಂಗ್ರಹಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತೆರಿಗೆ ವಂಚನೆಯ ಮಾರ್ಗಗಳನ್ನು ಪತ್ತೆ ಮಾಡಿ, ಇದನ್ನು ತಡೆಯಲು ತಂತ್ರಜ್ಞಾನ ಬಳಕೆ ಮಾಡಿಕೊಳ್ಳಿ. ನಕಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಕ್ಲೇಮುಗಳನ್ನು ಮಾಡುತ್ತಿರುವವರ ವಿರುದ್ಧ ಅಪರಾಧ ಪ್ರಕರಣ ದಾಖಲಿಸಿ. ತೆರಿಗೆ ವಂಚನೆಯನ್ನು ಗರಿಷ್ಠ ಪ್ರಮಾಣದಲ್ಲಿ ತಡೆಗಟ್ಟಿ ಎಂದು ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಅಬಕಾರಿ ತೆರಿಗೆ: ಶೇ 61ರಷ್ಟು ಸಾಧನೆ

2025–26ನೇ ಸಾಲಿನಲ್ಲಿ ಅಬಕಾರಿ ಇಲಾಖೆಗೆ ನೀಡಲಾಗಿದ್ದ ತೆರಿಗೆ ಸಂಗ್ರಹ ಗುರಿಯಲ್ಲಿ, ಈವರೆಗೆ ಶೇ 61ರಷ್ಟು ಮಾತ್ರ ಪ್ರಗತಿ ಸಾಧಿಸಲಾಗಿದೆ. ಹಿಂದಿನ ಆರ್ಥಿಕ ವರ್ಷಕ್ಕೆ ಹೋಲಿಸಿದರೆ, ಶೇ 10.46ರಷ್ಟು ಬೆಳವಣಿಗೆ ದಾಖಲಾಗಿದೆ.

ಈ ಸಾಲಿನಲ್ಲಿ ಒಟ್ಟು ₹43,000 ಕೋಟಿ ಅಬಕಾರಿ ತೆರಿಗೆ ಸಂಗ್ರಹ ಗುರಿ ನೀಡಲಾಗಿತ್ತು. ಆದರೆ ನವೆಂಬರ್ ಅಂತ್ಯದವರೆಗೆ ₹26,215 ಕೋಟಿ ಮಾತ್ರ ಸಂಗ್ರಹವಾಗಿದೆ. ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಶೇ100 ರಷ್ಟು ಗುರಿ ಸಾಧಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಿ ಎಂದು ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.



ತುಮಕೂರು ಜಿಲ್ಲೆ ಗುಬ್ಬಿಯಲ್ಲಿ ಶುಕ್ರವಾರ ಕರ್ನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ ಗೌರವ ಪ್ರಶಸ್ತಿ, ಸಾಹಿತ್ಯಶ್ರೀ ಹಾಗೂ ಪುಸ್ತಕ ಬಹುಮಾನ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಸಾಹಿತಿ ಚಂದ್ರಶೇಖರ ಕಂಬಾರ, ಅಕಾಡೆಮಿ ಅಧ್ಯಕ್ಷ ಎಲ್‌.ಎನ್‌.ಮುಕುಂದರಾಜ್, ಕೆಎಸ್‌ಆರ್‌ಟಿಸಿ ನಿಗಮದ ಅಧ್ಯಕ್ಷ ಎಸ್‌.ಆರ್‌.ಶ್ರೀನಿವಾಸ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ.ಗಾಯಿತ್ರಿ ಇತರರು ಉಪಸ್ಥಿತರಿದ್ದರು

ಆರ್ಯನ್ ಖಾನ್ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ


ಆರ್ಯನ್ ಖಾನ್

ಬೆಂಗಳೂರು: ಬಾಲಿವುಡ್ ನಟ ಶಾರುಖ್ ಖಾನ್ ಪುತ್ರ ಆರ್ಯನ್ ಖಾನ್ ಅವರು ನಗರದ ಪಬ್‌ವೊಂದರ ಬಾಲ್ಕನಿಯಲ್ಲಿ ನಿಂತು ಅಸಭ್ಯವಾಗಿ ಕೈ ಬೆರಳು ತೋರಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ವಕೀಲ ಹುಸೇನ್ ಓವೈಸಿ ಅವರು ಪೊಲೀಸರಿಗೆ ದೂರು ನೀಡಿದ್ದಾರೆ.

ಆರ್ಯನ್ ಖಾನ್ ಅವರು ಅಸಭ್ಯವಾಗಿ ವರ್ತನೆ ಮಾಡಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಅದನ್ನು ಆಧರಿಸಿ ಹುಸೇನ್ ಅವರು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್, ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ಹಾಗೂ ಮಹಿಳಾ ಆಯೋಗಕ್ಕೆ ಶುಕ್ರವಾರ ದೂರು ನೀಡಿದ್ದಾರೆ. ಕಬ್ಬನ್ ಪಾರ್ಕ್ ಹಾಗೂ ಅಶೋಕ ನಗರ ಠಾಣೆಯ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊ ಸಹ ಪರಿಶೀಲನೆ ನಡೆಸಲಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ. ಆರ್ಯನ್ ಖಾನ್ ಅವರು ನಡೆದುಕೊಂಡ ರೀತಿ ಮಹಿಳೆಯರ ಗೌರವಕ್ಕೆ ಧಕ್ಕೆ ತರುವಂತಿದೆ. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಹುಸೇನ್ ದೂರಿನಲ್ಲಿ ಕೋರಿದ್ದಾರೆ.

ನ.28ರಂದು ಆರ್ಯನ್ ಖಾನ್ ಅವರು ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ನಗರಕ್ಕೆ ಬಂದಿದ್ದರು. ಆರ್ಯನ್ ಖಾನ್ ನೋಡಲು ಪಬ್ ಬಳಿಗೆ ಅಭಿಮಾನಿಗಳು ಬಂದಿದ್ದರು. ಆ ವೇಳೆ ಆರ್ಯನ್ ಪಬ್‌ನ ಬಾಲ್ಕನಿಯಲ್ಲಿ ನಿಂತು, ಅಲ್ಲಿದ್ದ ಸಾರ್ವಜನಿಕರತ್ತ ಮಧ್ಯದ ಬೆರಳು ತೋರಿಸಿದ್ದರು. ನಂತರ, ಅಭಿಮಾನಗಳತ್ತ ಕೈಬೀಸಿ ತೆರಳಿದ್ದರು. ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರ ಮಗ, ಚಿತ್ರನಟ ಝೈದ್ ಖಾನ್ ಹಾಗೂ ಕಾಂಗ್ರೆಸ್ ಶಾಸಕ ಎನ್.ಎ. ಹ್ಯಾರಿಸ್ ಅವರ ಮಗ ಮೊಹಮ್ಮದ್ ನಲಪಾಡ್ ಅವರು ಜತೆಗಿರುವುದು ವಿಡಿಯೊದಲ್ಲಿ ಸೆರೆಯಾಗಿದೆ.

'ಕೈಬೆರಳು ತೋರಿದ್ದು ಸ್ನೇಹಿತನಿಗೆ'


ಝೈದ್ ಖಾನ್

ಹೊಸಪೇಟೆ (ವಿಜಯನಗರ): 'ಶಾರುಖ್ ಖಾನ್ ಪುತ್ರ ಆರ್ಯನ್ ಖಾನ್ ಬೆಂಗಳೂರಿನಲ್ಲಿ ಅಸಭ್ಯವಾಗಿ ಕೈಬೆರಳು ತೋರಿಸಿದ್ದು ಸ್ನೇಹಿತನಿಗೆ ಹೊರತು ಜನರಿಗಲ್ಲ' ಎಂದು ನಟ ಝೈದ್ ಖಾನ್ ಶುಕ್ರವಾರ ಹೇಳಿದರು.

'ಕಲ್ಟ್' ಚಲನಚಿತ್ರದ ಪ್ರಚಾರಕ್ಕಾಗಿ ಇಲ್ಲಿಗೆ ಬಂದಿದ್ದ ಅವರು ಸುದ್ದಿಗಾರರ ಜೊತೆ ಮಾತನಾಡಿ, 'ಜನರಿಗೆ ಹಾಗೆ ಕೈ ತೋರಿಸಿದರೆ ಖಂಡಿತ ಆರ್ಯನ್ ಕೂಡಾ ಸುಮ್ಮನಿರಲ್ಲ. ಜನಜಂಗುಳಿ ನಿವಾರಿಸಲು ಕಳುಹಿಸಿದ್ದ ಸ್ನೇಹಿತ ಇನ್ನೂ ಬಂದಿರಲಿಲ್ಲ. ಬಾಲ್ಕನಿಯಲ್ಲಿ ನಿಂತ ವೇಳೆ ಆತ ಕಂಡಾಗ, ಕೈಬೆರಳು ತೋರಿದರು' ಎಂದರು.

ನಾಯಕತ್ವ ಬದಲಾವಣೆ • ಚರ್ಚೆಗೆ ಗ್ರಾಸವಾದ ನಾಯಕರ ಭೇಟಿ

ಕಾಂಗ್ರೆಸ್: ಗೋಪ್ಯ ಸಭೆ ಮತ್ತೆ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ನಾಯಕತ್ವ ಬದಲಾವಣೆ ಕುರಿತ ಚರ್ಚೆಗಳು ತಣ್ಣಗಾಗಿದ್ದರೂ ಕಾಂಗ್ರೆಸ್ ನಾಯಕರ ಗೋಪ್ಯ ಸಭೆಗಳು ಮತ್ತೆ ಮುಂದುವರಿದಿವೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಚಿವರಾದ ಸತೀಶ ಜಾರಕಿಹೊಳಿ ಮತ್ತು ಪ್ರಿಯಾಂಕ್ ಖರ್ಗೆ ಜತೆಗೆ ಅನೌಪಚಾರಿಕ ಸಭೆ ನಡೆಸಿರುವುದು ಚರ್ಚೆಗೆ ಗ್ರಾಸವಾಗಿದೆ..

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಬೆಂಗಳೂರಿನಲ್ಲಿ ಗುರುವಾರ ರಾತ್ರಿ ಮದುವೆಯೊಂದರಲ್ಲಿ ಭಾಗಿಯಾಗಿದ್ದರು. ಅದೇ ಮದುವೆ ಕಾರ್ಯಕ್ರಮಕ್ಕೆ ಡಿ.ಕೆ.ಶಿವಕುಮಾರ್ ಸಹ ಬಂದರು. ಪರಸ್ಪರ ಎದುರಾದ ಇಬ್ಬರು ನಾಯಕರೂ, ಪ್ರತ್ಯೇಕವಾಗಿ ಕುಳಿತು ಒಂದು ತಾಸಿಗೂ ಹೆಚ್ಚು ಮಾತುಕತೆ ನಡಸಿದ್ದಾರೆ ಎಂದು ಮೂಲಗಳು ಹೇಳಿವೆ.

ಮದುವೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದನ್ನು ಇಬ್ಬರು ನಾಯಕರೂ ಖಚಿತಪಡಿಸಿದ್ದು, ಅದು ಆಕಸ್ಮಿಕ ಭೇಟಿ ಎಂದಷ್ಟೇ ಹೇಳಿದ್ದಾರೆ. ಈ ವೇಳೆ ಕೆಪಿಸಿಸಿ ಅಧ್ಯಕ್ಷ ಹುದ್ದೆ ಬದಲಾವಣೆ ಬಗ್ಗೆ ಚರ್ಚೆಯಾಗಿದೆ ಎಂದು ಮೂಲಗಳು ಹೇಳಿವೆ. ಆದರೆ ಇಬ್ಬರೂ, ಅಂತಹ ಚರ್ಚೆ ನಡೆದಿಲ್ಲ ಎಂದಿದ್ದಾರೆ.

ಇದರ ಬೆನ್ನಲ್ಲೇ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಡಿ.ಕೆ.ಶಿವಕುಮಾರ್ ಅವರ ಮನೆಗೆ ಶುಕ್ರವಾರ ಬೆಳಿಗ್ಗೆ ಭೇಟಿ ನೀಡಿದ್ದರು. ಅಲ್ಲಿ ಇಬ್ಬರು ನಾಯಕರೂ ಒಂದು ತಾಸು ಮಾತುಕತೆ ನಡೆಸಿದರು. ಈ ವೇಳೆ ಯಾವೆಲ್ಲಾ ವಿಚಾರಗಳನ್ನು ಚರ್ಚಿಸಲಾಗಿದೆ ಎಂಬುದರ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ.

'ವಿಶೇಷ ಅರ್ಥ ಕಲ್ಪಿಸಬೇಡಿ'

'ಮದುವೆಯೊಂದರಲ್ಲಿ ನಾನು ಮತ್ತು ಸತೀಶ ಜಾರಕಿಹೊಳಿ ಅವರು ಬೇಟಿಯಾಗಿದ್ದು ನಿಜ. ರಾಜ್ಯ ಮತ್ತು ಪಕ್ಷದ ವಿಚಾರ ಮಾತನಾಡಿದ್ದೇವೆ. ನಾನು ಮತ್ತು ಸತೀಶ್ ಸಹೋದ್ಯೋಗಿಗಳು. ನಮ್ಮನ್ನು ವೈರಿಗಳಂತೆ ಏಕೆ ನೋಡುತ್ತೀರಿ' ಎಂದು ಡಿ.ಕೆ.ಶಿವಕುಮಾರ್ ಅವರು ಪ್ರಶ್ನಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಾವು ಮಧ್ಯಾಹ್ನ ಸಚಿವ ಸಂಪುಟ ಸಭೆಯಲ್ಲಿ ಇರುತ್ತೇವೆ, ರಾತ್ರಿ ಊಟಕ್ಕೆ ಸೇರುತ್ತೇವೆ. ಬೆಳಿಗ್ಗೆ ತಿಂಡಿಗೆ ಸೇರುತ್ತೇವೆ. ಇವೆಲ್ಲ ಇದ್ದೇ ಇರುತ್ತದೆ. ರಾಜಕೀಯದಲ್ಲಿ ಸ್ನೇಹ, ಬಾಂಧವ್ಯ, ನೆಂಟಸ್ಥನ ಇದ್ದೇ ಇರುತ್ತದೆ. ಇದಕ್ಕೆ ವಿಶೇಷ ಅರ್ಥ ಕಲ್ಪಿಸುವುದು ಬೇಡ' ಎಂದರು.

'ಕೆಪಿಸಿಸಿ ಅಧ್ಯಕ್ಷಗಿರಿ ಚರ್ಚೆಯಾಗಿಲ್ಲ'

'ನಾನು ಒಂದು ಮದುವೆ ಕಾರ್ಯಕ್ರಮಕ್ಕೆ ಹೋಗಿದ್ದೆ. ಡಿ.ಕೆ.ಶಿವಕುಮಾರ್ ಅವರೂ ಆ ಮದುವೆಗೆ ಬಂದಿದ್ದರು. ಅದೊಂದು ಆಕಸ್ಮಿಕ ಭೇಟಿ ಅಷ್ಟೆ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಅದು ಪೂರ್ವನಿಗದಿತ ಭೇಟಿ ಆಗಿರಲಿಲ್ಲ. ಅಚಾನಕ್ಕಾಗಿ ಸಿಕ್ಕಾಗ ಕೆಲಹೊತ್ತು ಮಾತನಾಡಿದೆವು ಅಷ್ಟೆ. ಸ್ವಲ್ಪ ಜಾಸ್ತಿಯೇ ಮಾತನಾಡಿರಬಹುದು. ಕೆಪಿಸಿಸಿ ಅಧ್ಯಕ್ಷ ಹುದ್ದೆ, ಬದಲಾವಣೆ ಬಗ್ಗೆ ಯಾವುದೇ ಮಾತು ಆಡಿಲ್ಲ' ಎಂದರು.

ಪಠ್ಯದಲ್ಲಿ ಭಗವದ್ಗೀತೆ ಪ್ರಧಾನ್‌ಗೆ ಪತ್ರ

ನವದೆಹಲಿ: 'ಕಾಲಾತೀತ, ಮೌಲ್ಯಾಧಾರಿತ ಆದರ್ಶಗಳನ್ನು ಒಳಗೊಂಡಿರುವ ಭಗವದ್ಗೀತೆಯನ್ನು ಶಾಲಾ ಪಠ್ಯದಲ್ಲಿ ಸೇರಿಸಬೇಕು' ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಕೇಂದ್ರದ ಶಿಕ್ಷಣ ಮಂತ್ರಿ ಧರ್ಮೇಂದ್ರ ಪ್ರಧಾನ್ ಅವರಿಗೆ ಪತ್ರ ಬರೆದಿದ್ದಾರೆ.

'ಮೌಲ್ಯಾಧಾರಿತ ಶಿಕ್ಷಣಕ್ಕೆ ಬಲವಾದ ಒತ್ತು ನೀಡುವ ನಿಟ್ಟಿನಲ್ಲಿ ಭಗವದ್ಗೀತೆ ಬೋಧನೆ ಅತ್ಯಗತ್ಯ' ಎಂದು ಪ್ರತಿಪಾದಿಸಿದ್ದಾರೆ.

ಬೇಡಿಕೆ ಈಡೇರಿಸದಿದ್ದರೆ ಮತ್ತೆ ಪ್ರತಿಭಟನೆ: ಸಿಐಟಿಯು ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಂಗನವಾಡಿ, ಬಿಸಿಯೂಟ, ಆಶಾ ಕಾರ್ಯಕರ್ತೆಯರ ವಿವಿಧ ಬೇಡಿಕೆಗಳನ್ನು 2026ರ ಫೆಬ್ರುವರಿಯಲ್ಲಿ ಮಂಡಿಸುವ ಕೇಂದ್ರ ಬಜೆಟ್‌ನಲ್ಲಿ ಈಡೇರಿಸಬೇಕು. ಇಲ್ಲದಿದ್ದರೆ ಮತ್ತೆ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು' ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಸ್. ವರಲಕ್ಷ್ಮಿ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, 'ರಾಜ್ಯದಲ್ಲಿರುವ ಕೇಂದ್ರ ಸಚಿವರ ಮನೆಗಳ ಮುಂಭಾಗದಲ್ಲಿ ಅಂಗನವಾಡಿ, ಬಿಸಿಯೂಟ, ಆಶಾ ಕಾರ್ಯಕರ್ತೆಯರು ಡಿ. 1ರಂದು ಅನಿರ್ದಿಷ್ಟಾವಧಿ ಪ್ರತಿಭಟನೆ ಕೈಗೊಂಡಿದ್ದರು. ಇದಕ್ಕೆ ಸ್ಪಂದಿಸಿದ್ದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು, ನವದೆಹಲಿಯಲ್ಲಿ ಡಿ.3ರ ಸಭೆಗೆ ಆಹ್ವಾನಿಸಿದ್ದರು. ಕೇಂದ್ರ ಸಚಿವರಾದ ಅನ್ನಪೂರ್ಣದೇವಿ ಹಾಗೂ ಧರ್ಮೇಂದ್ರ ಪ್ರಧಾನ್ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಸಿಐಟಿಯು ಮುಖಂಡರು ಭಾಗವಹಿಸಿದ್ದರು' ಎಂದು ತಿಳಿಸಿದರು.

'ಸಭೆಯಲ್ಲಿ ಬಿಸಿಯೂಟ ನೌಕರರಿಗೆ, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರ ಗೌರವ ಧನ ಹೆಚ್ಚಿಸಬೇಕು. ಅಂಗನವಾಡಿಗಳಲ್ಲಿ ಮುಖ ಚಹರೆ ಗುರುತಿಸುವಿಕೆ (ಎಫ್‌ಆರ್‌ಎಸ್) ವ್ಯವಸ್ಥೆಯನ್ನು ಸ್ಥಗಿತಗೊಳಿಸುವುದು. ಅಂಗನವಾಡಿ ಫಲಾನುಭವಿಗಳ ಘಟಕ ವೆಚ್ಚ ಹೆಚ್ಚಿಸುವುದು, ಸ್ಥಳೀಯ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಬೇಕು. ಬಿಸಿಯೂಟ ಯೋಜನೆಯನ್ನು ಸರ್ಕಾರೇತರ ಸಂಸ್ಥೆಗಳಿಗೆ ನೀಡದಂತೆ ಮನವಿ ಸಲ್ಲಿಸಲಾಯಿತು. ಇದಕ್ಕೆ ಸ್ಪಂದಿಸಿದ ಅನ್ನಪೂರ್ಣ ದೇವಿ ಅವರು ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದ್ದಾರೆ' ಎಂದರು.



prajavani.net prajavani | ಶನಿವಾರ, ಡಿಸೆಂಬರ್ 6, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 336 | ಪುಟ 20 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ರಸ್ತೆ ಅಪಘಾತ: ಸಾವು ಹೆಚ್ಚಳ

2024ನೇ ಸಾಲಿನಲ್ಲಿ ದೇಶದಲ್ಲಿ ರಸ್ತೆ ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ 1.77 ಲಕ್ಷ (ಶೇ 2.3 ಏರಿಕೆ) ದಾಟಿತ್ತು, ಪ್ರತಿದಿನ 485 ಜನ ಸಾವೀಗೀಡಾಗಿದ್ದರು ಎಂದು ಕೇಂದ್ರ ಸರ್ಕಾರ ತಿಳಿಸಿದೆ



ಸೆನ್ಸೆಕ್ಸ್ 85,712 | ನಿಫ್ಟಿ 26,186 | $/₹ 89.95 | ಚಿನ್ನ (Std. 10g) ₹1,33,530 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,90,500 (ಬೆಂಗಳೂರು)

ಹಾರದ ವಿಮಾನ, ಜನ ಹೈರಾಣ

ಶುಕ್ರವಾರ 1,000 ಮಾರ್ಗಗಳಲ್ಲಿ ಇಂಡಿಗೊ ವಿಮಾನ ಸಂಚಾರ ರದ್ದು • ಇಂದು ಸಾವಿರ ಮಾರ್ಗಗಳಲ್ಲಿ ಸಂಚಾರ ವ್ಯತ್ಯಯ



ನವದೆಹಲಿ (ಪಿಟಿಐ): ಇಂಡಿಗೊ ಏರ್‌ಲೈನ್ಸ್‌ಗೆ ಸೇರಿದ ವಿಮಾನಗಳ ಹಾರಾಟದಲ್ಲಿ ನಾಲ್ಕನೇ ದಿನವಾದ ಶುಕ್ರವಾರವೂ ತೀವ್ರ ವ್ಯತ್ಯಯ ವಾಗಿದ್ದು, ದೇಶದಾದ್ಯಂತ ವಿಮಾನ ನಿಲ್ದಾಣಗಳಲ್ಲಿ ಪ್ರಯಾಣಿಕರು ಪರದಾಡಿದರು.

1,000 ಮಾರ್ಗಗಳಲ್ಲಿ ವಿಮಾನಗಳ ಹಾರಾಟ ಸಂಪೂರ್ಣ ಸ್ಥಗಿತಗೊಂಡಿದ್ದು, ದೆಹಲಿ, ಚೆನ್ನೈನಿಂದ ಶುಕ್ರವಾರ ಸಂಸ್ಥೆಯ ಎಲ್ಲ ವಿಮಾನಗಳ ಹಾರಾಟ ರದ್ದುಗೊಳಿಸಲಾಯಿತು ಎಂದು ಇಂಡಿಗೊ ಸಂಸ್ಥೆಯು ತಿಳಿಸಿದೆ.

ನವದೆಹಲಿಯಿಂದ ಶುಕ್ರವಾರ ಮಧ್ಯರಾತ್ರಿ ವರೆಗೂ 235 ಮಾರ್ಗಗಳ ವಿಮಾನಗಳ ಹಾರಾಟ ರದ್ದುಗೊಳಿಸಲಾಗಿತ್ತು. ಚೆನ್ನೈ, ಗೋವಾದಿಂದ ತಲಾ 30 ವಿಮಾನಗಳು ಹಾರಾಟ ನಡೆಸಲಿಲ್ಲ. ಬೆಂಗಳೂರಿನಿಂದ ನವದೆಹಲಿ, ಮುಂಬೈಗೆ ನಿಗದಿಯಾಗಿದ್ದ ಸಂಸ್ಥೆಯ ಎಲ್ಲ ವಿಮಾನಗಳ ಹಾರಾಟವನ್ನೂ ದಿನದ ಮಟ್ಟಿಗೆ ತಡೆಹಿಡಿಯಲಾಯಿತು.

ದೇಶದ ಪ್ರಮುಖ ವಿಮಾನ ನಿಲ್ದಾಣಗಳಾದ ಮುಂಬೈ, ಕೋಲ್ಕತ್ತ, ಸೂರತ್, ಚೆನ್ನೈ, ಜೈಪುರ, ದೆಹಲಿ, ಇಂದೋರ್, ಭೋಪಾಲ್ ವಿಮಾನ ನಿಲ್ದಾಣಗಳಲ್ಲಿ ಶುಕ್ರವಾರ ಬೆಳಿಗ್ಗೆಯಿಂದಲೇ ಇಂಡಿಗೊ ವಿಮಾನಗಳು ಹಾರಾಟ ನಡೆಸಲಿಲ್ಲ. ಹೀಗಾಗಿ ದೇಶದ ಪ್ರಮುಖ ವಿಮಾನ ನಿಲ್ದಾಣಗಳಲ್ಲಿ ಪ್ರಯಾಣಿಕರು ಕಿಕ್ಕಿರಿದು ಸೇರಿದ್ದರು.

▸7



ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತಮ್ಮ ಲಗೇಜ್‌ಗಳನ್ನು ಹಿಡಿದುಕೊಂಡು ವಿಮಾನಕ್ಕಾಗಿ ಪ್ರಯಾಣಿಕರು ಕಾದು ಕೂತ ದೃಶ್ಯ ಶುಕ್ರವಾರ ಕಂಡುಬಂದಿದ್ದು ಹೀಗೆ —ಪಿಟಿಐ ಚಿತ್ರ

ಶುಕ್ರವಾರದ ಬೆಳವಣಿಗೆ

- ಇಂಡಿಗೊ ಇತಿಹಾಸದಲ್ಲೇ ಗರಿಷ್ಠ ವಿಮಾನಗಳ ಹಾರಾಟ ರದ್ದು
- ಡಿ.5ರಿಂದ 15ರವರೆಗೆ ಪ್ರಯಾಣ ರದ್ದು ಮಾಡಿದ ಎಲ್ಲ ಟಿಕೆಟ್ ಹಣ ವಾಪಸ್
- ಪ್ರಯಾಣದ ಮರುಹೊಂದಾಣಿಕೆಗೂ ಅವಕಾಶ ಕಲ್ಪಿಸಿದ ಸಂಸ್ಥೆ
- ಸತತ ಮೂರನೇ ಸಲ ಪ್ರಯಾಣಿಕರ ಕ್ಷಮೆಯಾಚಿಸಿದ ಇಂಡಿಗೊ ಸಂಸ್ಥೆ
- ಇತರೆ ವಿಮಾನಯಾನ ಸಂಸ್ಥೆಗಳಿಂದ ಪ್ರಯಾಣ ದರ ಏರಿಕೆ
- ಸಾವಿರಾರು ಪ್ರಯಾಣಿಕರು ಉಳಿದುಕೊಳ್ಳಲು ದೇಶದಾದ್ಯಂತ ಹೋಟೆಲ್‌ಗಳ ಸಾವಿರಾರು ಕೊಠಡಿ ಬುಕ್ಕಿಂಗ್

ಫೆ. 10ರವರೆಗೆ ವಿಶ್ರಾಂತಿ ನೀತಿಗೆ ತಡೆ

'ವಿಮಾನಗಳ ಹಾರಾಟ ಕಾರ್ಯಾಚರಣೆಯನ್ನು ಸಹಜಸ್ಥಿತಿಗೆ ತರುವ ನಿಟ್ಟಿನಲ್ಲಿ ವಿಮಾನ ಕರ್ತವ್ಯದ ಸಮಯದ ನೀತಿ (ಎಫ್‌ಡಿಟಿಎಲ್) ಅನುಷ್ಠಾನವನ್ನು ತಕ್ಷಣದಿಂದಲೇ ತಡೆ ಹಿಡಿಯಲಾಗಿದೆ' ಎಂದು ನಾಗರಿಕ ವಿಮಾನಯಾನ ಸಚಿವ ಕೆ.ರಾಮ್‌ಮೋಹನ್ ನಾಯ್ಡು ತಿಳಿಸಿದ್ದಾರೆ.

ರಾತ್ರಿ ಕಾರ್ಯಾಚರಣೆಯ ನಿಯಮಾವಳಿಗೆ ಮಾಡಲಾಗಿರುವ ಕೆಲವು ಬದಲಾವಣೆಗಳಿಗೆ 'ಇಂಡಿಗೊ' ಸಂಸ್ಥೆಗೆ ಫೆ.10ರವರೆಗೆ ಒಂದು ಸಲದ ವಿನಾಯಿತಿ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

▸7

₹8 ಲಕ್ಷ ದಾಟಿದರೆ ಮೀಸಲು ಅಲಭ್ಯ

ಬೆಂಗಳೂರು: 'ಪ್ರವರ್ಗ 2-ಎ (ಹಿಂದುಳಿದ ವರ್ಗ) ಅಡಿಯಲ್ಲಿ ಪೋಷಕರ ವಾರ್ಷಿಕ ಆದಾಯ ನಿಗದಿತ ಮಿತಿಯನ್ನು ದಾಟಿದ್ದರೆ ಅಭ್ಯರ್ಥಿಯು ಮೀಸಲಾತಿ ಪತ್ರ ಪಡೆಯಲು ಅನರ್ಹರಾಗುತ್ತಾರೆ' ಎಂದು ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

▸7

ಚಿನಕುರುಳಿ — ಪ್ರಕಾಶ್ ಶೆಟ್ಟಿ



ಆರ್ಥಿಕ 'ಸ್ನೇಹ': ಹಲವು ಒಪ್ಪಂದ

ಐದು ವರ್ಷಗಳ ಯೋಜನೆಗಳಿಗೆ ಭಾರತ–ರಷ್ಯಾ ಅಂಕಿತ

ಪ್ರಜಾವಾಣಿ ವಾರ್ತೆ/ಪಿಟಿಐ/ಎಎಫ್‌ಪಿ

ನವದೆಹಲಿ: 'ಭಾರತಕ್ಕೆ ತಡೆರಹಿತ ಇಂಧನ ಪೂರೈಕೆಯಾಗುವುದನ್ನು ಖಾತ್ರಿಪಡಿಸಲಾಗವುದು' ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಶುಕ್ರವಾರ ಅಭಯ ನೀಡಿದ್ದಾರೆ.

'ತೈಲ, ಅನಿಲ, ಕಲ್ಲಿದ್ದಲು ಸೇರಿದಂತೆ ಇಂಧನ ಪೂರೈಕೆಗೆ ಸಂಬಂಧಿಸಿ ರಷ್ಯಾ ನಂಬಲರ್ಹ ರಾಷ್ಟ್ರ. ಭಾರತದ ಆರ್ಥಿಕತೆ ಪ್ರಗತಿಗೆ ಈ ಇಂಧನಗಳನ್ನು ತಡೆರಹಿತವಾಗಿ ಪೂರೈಸಲು ರಷ್ಯಾ ಸಿದ್ಧವಿದೆ' ಎಂದೂ ಪುಟಿನ್ ಹೇಳಿದ್ದಾರೆ.

ರಷ್ಯಾದಿಂದ ತೈಲ ಆಮದನ್ನು ಕಡಿಮೆ ಮಾಡುವಂತೆ ಭಾರತವನ್ನು ಮನವೊಲಿಸುವಲ್ಲಿ ತಾನು ಯಶಸ್ವಿಯಾಗಿದ್ದಾಗಿ ಅಮೆರಿಕ ಹೇಳಿಕೊಳ್ಳುತ್ತಿರುವ ಸಂದರ್ಭದಲ್ಲಿಯೇ ಪುಟಿನ್ ಅವರ ಈ ಮಾತಿಗೆ ಮಹತ್ವ ಬಂದಿದೆ.

▸7

> ಭದ್ರತೆ, ಆರ್ಥಿಕತೆ, ವ್ಯಾಪಾರ ಮತ್ತು ಸಂಸ್ಕೃತಿ ಕ್ಷೇತ್ರದಲ್ಲಿ ಸಹಕಾರ ಹೆಚ್ಚಿಸುವುದಕ್ಕೆ ಹಾಗೂ ಹೂಡಿಕೆಗೆ ಉತ್ತೇಜನ ನೀಡಲು ರಷ್ಯಾ ಮತ್ತು ಭಾರತ ನಿರ್ಧರಿಸಿವೆ
>
> **ವ್ಲಾದಿಮಿರ್ ಪುಟಿನ್,** ರಷ್ಯಾ ಅಧ್ಯಕ್ಷ

> ಪುಟಿನ್ ಎರಡೂವರೆ ದಶಕಗಳಿಂದ ಹಲವು ಒಪ್ಪಂದಗಳಿಗೆ ಸ್ಪಂದಿಸಿದ್ದಾರೆ. ಎಂಥದೇ ಪರಿಸ್ಥಿತಿ ಇದ್ದರೂ ಅವರ ನಾಯಕತ್ವದಿಂದಾಗಿ ನಮ್ಮ ಸಂಬಂಧ ಹೊಸ ಎತ್ತರಕ್ಕೇರಿದೆ
>
> **ನರೇಂದ್ರ ಮೋದಿ,** ಪ್ರಧಾನಿ

ರೆಪೊ ಇಳಿಕೆ: ಸಾಲ ಅಗ್ಗ?

ಮುಂಬೈ (ಪಿಟಿಐ): ರೆಪೊ ದರವನ್ನು ಆರ್‌ಬಿಐ ಶೇ 0.25ರಷ್ಟು ಕಡಿಮೆ ಮಾಡಿದೆ. ಇದರಿಂದಾಗಿ ಗೃಹಸಾಲ ಸೇರಿದಂತೆ ವಿವಿಧ ಬಗೆಯ ಸಾಲಗಳ ಮೇಲಿನ ಬಡ್ಡಿ ಹೊರೆ ತುಸು ಇಳಿಕೆಯಾಗುವ ನಿರೀಕ್ಷೆ ಇದೆ.

ರೆಪೊ ದರವನ್ನು ತೀರ್ಮಾನಿಸುವ, ಆರು ಜನ ಸದಸ್ಯರ ಹಣಕಾಸು ನೀತಿ ಸಮಿತಿಯು (ಎಂಪಿಸಿ) ದರ ಇಳಿಕೆಗೆ ಸರ್ವಾನುಮತದಿಂದ ಒಪ್ಪಿಗೆ ನೀಡಿದೆ. ಈ ಇಳಿಕೆಯೊಂದಿಗೆ ರೆಪೊ ದರವು ಶೇ 5.25ರಷ್ಟು ಆಗಿದೆ. ಆರ್‌ಬಿಐ 'ತಟಸ್ಥ' ಹಣಕಾಸು ನಿಲುವನ್ನು ಕಾಯ್ದುಕೊಂಡಿದೆ, ಮುಂದೆಯೂ ರೆಪೊ ದರ ಇಳಿಕೆಗೆ ಅವಕಾಶ ಉಳಿಸಿಕೊಂಡಿದೆ.

▸10

ಹವಾಮಾನ ಮುನ್ಸೂಚನೆ: ನಗರದಲ್ಲಿ ಮುಂಜಾನೆ ಮಂಜು ಮುಸುಕಿದ ವಾತಾವರಣ ಇರಲಿದೆ. ರಾತ್ರಿ ಚಳಿಯ ಅನುಭವ ಆಗಲಿದೆ

ಟೆಕಿ ಮೃತದೇಹ ಪತ್ತೆ, ಆತ್ಮಹತ್ಯೆ ಶಂಕೆ

ಬೆಂಗಳೂರು: ಬಸವೇಶ್ವರನಗರ ಪೊಲೀಸ್ ಠಾಣಾ ವ್ಯಾಪ್ತಿಯ ಮಂಜುನಾಥ ನಗರದ ಮೂರನೇ ಕ್ರಾಸ್‌ನ ಬಾಡಿಗೆ ಮನೆಯಲ್ಲಿ ಟೆಕಿ ಮೃತದೇಹ ಪತ್ತೆ ಆಗಿದ್ದು, ಆತ್ಮಹತ್ಯೆಯ ಶಂಕೆ ವ್ಯಕ್ತವಾಗಿದೆ.

ಯುವರಾಜ್ (48) ಮೃತ ಟೆಕಿ. ಕೊಳೆತ ಸ್ಥಿತಿಯಲ್ಲಿ ಶವ ಪತ್ತೆ ಆಗಿದೆ. ಅವರ ಸಹೋದರಿಗೆ ಮಾಹಿತಿ ನೀಡಲಾಗಿದೆ ಎಂದು ಪೊಲೀಸರು ಹೇಳಿದರು.

'ಕೆಲವು ದಿನಗಳಿಂದ ದುರ್ವಾಸನೆ ಬರುತ್ತಿತ್ತು. ಹೆಗ್ಗಣ ಸತ್ತಿರಬಹುದೆಂದು ಆ ರಸ್ತೆಯಲ್ಲಿ ಓಡಾಡುತ್ತಿದ್ದ ಜನರು ಭಾವಿಸಿದ್ದರು. ನೀರು ತಂದು ಚರಂಡಿಗೆ ಸುರಿಯುತ್ತಿದ್ದರು. ಆದರೆ, ದುರ್ವಾಸನೆ ಹೆಚ್ಚಾದ ಬಳಿಕ ಪೊಲೀಸರಿಗೆ ಮಾಹಿತಿ ನೀಡಿದ್ದರು. ಬಸವೇಶ್ವರನಗರ ಠಾಣೆಯ ಪೊಲೀಸರು, ಮನೆಯ ಬಾಗಿಲು ಒಡೆದು ಪರಿಶೀಲಿಸಿದಾಗ ಮೃತದೇಹ ಪತ್ತೆಯಾಗಿದೆ' ಎಂದು ಮೂಲಗಳು ತಿಳಿಸಿವೆ.

ಕಾರ್ಯಗತಗೊಳ್ಳದ ಪಿಎಸ್‌ಡಿ, ಪಿಎಸ್‌ಜಿ

ಎರಡು ವರ್ಷದಲ್ಲಿ ಮೆಟ್ರೊ ಹಳಿಗೆ ಬಿದ್ದ 15 ಪ್ರಯಾಣಿಕರು ಪ್ರಾಣ ಕಳೆದುಕೊಂಡ ಮೂವರು



● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನಮ್ಮ ಮೆಟ್ರೊ ನಿಲ್ದಾಣಗಳಲ್ಲಿ ಆಕಸ್ಮಿಕವಾಗಿ ಇಲ್ಲವೇ ಉದ್ದೇಶ ಪೂರ್ವಕವಾಗಿ ಹಳಿಗೆ ಪ್ರಯಾಣಿಕರು ಬೀಳುವ ಪ್ರಕರಣಗಳು ಹೆಚ್ಚುತ್ತಿವೆ. ಇದನ್ನು ತಪ್ಪಿಸುವ ಪ್ಲಾಟ್‌ಫಾರ್ಮ್ ಸ್ಕ್ರೀನ್ ಡೋರ್ (ಪಿಎಸ್‌ಡಿ) ಇಲ್ಲವೇ ಪ್ಲಾಟ್‌ಫಾರ್ಮ್ ಸ್ಕ್ರೀನ್ ಗೇಟ್ (ಪಿಎಸ್‌ಜಿ) ಅಳವಡಿಸುವ ಯೋಜನೆ ಇನ್ನೂ ಕಾರ್ಯಗತಗೊಂಡಿಲ್ಲ.

ಎರಡು ವರ್ಷಗಳಲ್ಲಿ, ಆಯತಪ್ಪಿ ನಾಲ್ಕು ಮಂದಿ ಬಿದ್ದಿದ್ದೂ ಸೇರಿದಂತೆ 15 ಪ್ರಕರಣಗಳು ನಡೆದಿವೆ. ಉದ್ದೇಶ ಪೂರ್ವಕವಾಗಿ ಹಳಿಗೆ ಬಿದ್ದಿದ್ದ 11 ಮಂದಿಯಲ್ಲಿ ಮೂವರು ಮೃತಪಟ್ಟಿದ್ದರು.

ಹಳಿ ಕಡೆಗೆ ಯಾರೂ ನುಗ್ಗದಂತೆ ಮೆಟ್ರೊ ನಿಲ್ದಾಣಗಳಲ್ಲಿ ಗ್ಲಾಸ್ ಡೋರ್/ಗೇಟ್‌ಗಳು ಇರುತ್ತವೆ. ರೈಲು ಬಂದು ನಿಂತ ಮೇಲೆ ಇವು ಸ್ವಯಂಚಾಲಿತವಾಗಿ ತೆರೆದುಕೊಳ್ಳುತ್ತವೆ. ಪ್ರಯಾಣಿಕರು ಇಳಿದು ಹತ್ತುವ ಪ್ರಕ್ರಿಯೆ ಮುಗಿದು ರೈಲಿನ ಬಾಗಿಲು ಮುಚ್ಚಿಕೊಳ್ಳುವ ಹೊತ್ತಿಗೆ ಪ್ಲಾಟ್‌ಫಾರ್ಮ್‌ನಲ್ಲಿರುವ ಡೋರ್/ಗೇಟ್‌ಗಳೂ ಮುಚ್ಚಿಕೊಳ್ಳುತ್ತವೆ. ಈ ತಂತ್ರಜ್ಞಾನವು ಜಪಾನ್ ಸಹಿತ ಹಲವು ದೇಶಗಳಲ್ಲಿವೆ. ಭಾರತದಲ್ಲಿಯೂ ಚೆನ್ನೈ, ದೆಹಲಿ ಮತ್ತು ಮುಂಬೈನ ಕೆಲವು ಮೆಟ್ರೊ ನಿಲ್ದಾಣಗಳಲ್ಲಿ ಈ ತಂತ್ರಜ್ಞಾನ ಅಳವಡಿಸಲಾಗಿದೆ.

ಹಳದಿ ಮಾರ್ಗದಲ್ಲಿ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಕೋನಪ್ಪನ ಅಗ್ರಹಾರ ನಿಲ್ದಾಣದಲ್ಲಿ ಮೊದಲ ಪಿಎಸ್‌ಜಿ ಬರಲಿದೆ ಎಂದು ಎರಡು ವರ್ಷಗಳ ಹಿಂದೆ ಅಧಿಕಾರಿಗಳು ಹೇಳಿಕೊಂಡಿದ್ದರು. ಹಳದಿ ಮಾರ್ಗದಲ್ಲಿ ಮೆಟ್ರೊ ಸಂಚಾರ ಆರಂಭಗೊಂಡಿದ್ದರೂ ಪಿಎಸ್‌ಜಿ ಅಳವಡಿಕೆಯಾಗಿಲ್ಲ.

'ಪ್ರತಿ ಬಾರಿ ಯಾರಾದರೂ ಹಳಿಗೆ ಬಿದ್ದಾಗ ಪಿಎಸ್‌ಡಿ ಮತ್ತು ಪಿಎಸ್‌ಜಿ ಅಳವಡಿಕೆ ಬಗ್ಗೆ ಚರ್ಚೆಗಳಾಗುತ್ತವೆ. 'ಸುರಕ್ಷತೆಗಾಗಿ ಕ್ರಮ ಕೈಗೊಳ್ಳಬೇಕು' ಎಂಬ ಕೂಗು ಪ್ರಯಾಣಿಕರಿಂದ ಬರುತ್ತದೆ. ಪಿಎಸ್‌ಡಿ ಹಾಗೂ ಪಿಎಸ್‌ಜಿ ನಿರ್ಮಿಸುವ ಯೋಜನೆ ಇದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳುತ್ತಾರೆ. ದಿನ ಕಳೆದಂತೆ, ಪ್ರಯಾಣಿಕರು ಘಟನೆಯನ್ನು ಮರೆಯುತ್ತಾರೆ. ಅಧಿಕಾರಿಗಳಿಗೂ ಯೋಜನೆ ಮರೆತು ಹೋಗುತ್ತದೆ' ಎಂದು ಮೆಟ್ರೊ ಪ್ರಯಾಣಿಕ ಪ್ರಮೋದ್ ದೂರಿದರು.

'ಚೀನಾದ ಪ್ಯಾನಾಸೋನಿಕ್ ಉಪ ಗುತ್ತಿಗೆ ಸಂಸ್ಥೆಯು ಗುಲಾಬಿ ಮಾರ್ಗದ ಎಂ.ಜಿ. ರಸ್ತೆಯಲ್ಲಿ ಮೊದಲ ಪಿಎಸ್‌ಡಿಯನ್ನು ನಿರ್ಮಿಸಲಿದೆ. ಕಾಳೇನ ಅಗ್ರಹಾರದಿಂದ ನಾಗವಾರ ಸಂಪರ್ಕಿಸುವ ಗುಲಾಬಿ ಮಾರ್ಗ ಮತ್ತು ಕೇಂದ್ರ ರೇಷ್ಮೆ ಮಂಡಳಿಯಿಂದ ದೇವನಹಳ್ಳಿಯ ಕೆಂಪೇಗೌಡ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ನೀಲಿ ಮಾರ್ಗದಲ್ಲಿ 12 ಭೂಗತ ನಿಲ್ದಾಣಗಳಲ್ಲಿ ಮತ್ತು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪಿಎಸ್‌ಡಿ ನಿರ್ಮಾಣಗೊಳ್ಳಲಿದೆ' ಎಂದು ಬಿಎಂಆರ್‌ಸಿಎಲ್ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

'ಹಳದಿ ಮಾರ್ಗದ ಕೋನಪ್ಪನ ಅಗ್ರಹಾರ ನಿಲ್ದಾಣದಲ್ಲಿ ಯೋಜನೆಯಂತೆ ಪಿಎಸ್‌ಜಿ ನಿರ್ಮಾಣಗೊಳ್ಳಲಿದೆ. ವೈಟ್‌ಫೀಲ್ಡ್–ಚಲ್ಲಘಟ್ಟ ಸಂಪರ್ಕಿಸುವ ನೇರಳೆ ಮಾರ್ಗ ಮತ್ತು ರೇಷ್ಮೆ ಸಂಸ್ಥೆ–ಮಾದಾವರ ಸಂಪರ್ಕಿಸುವ ಹಸಿರು ಮಾರ್ಗದಲ್ಲಿರುವ ಕೆಲವು ನಿಲ್ದಾಣಗಳಲ್ಲಿ ಕೂಡ ಅಳವಡಿಸುವ ಯೋಜನೆ ಇದೆ' ಎಂದು ಮಾಹಿತಿ ನೀಡಿದರು.

'ಪಿಎಸ್‌ಡಿ, ಪಿಎಸ್‌ಜಿ ಅಳವಡಿಕೆ ಉತ್ತಮ ಕಾರ್ಯವಾದರೂ ವೆಚ್ಚದಾಯಕ. ರೈಲು ಸಂಚಾರವಿರುವ ನಿಲ್ದಾಣಗಳಲ್ಲಿ ಈ ತಂತ್ರಜ್ಞಾನ ಅಳವಡಿಕೆ ಕಷ್ಟ. ರಾತ್ರಿ ವೇಳೆ ಮಾತ್ರ ಕೆಲಸ ಮಾಡಬೇಕಾಗುತ್ತದೆ. ತಂತ್ರಜ್ಞಾನ, ಸಾಫ್ಟ್‌ವೇರ್‌ಗಳು ಬದಲಾಗಬೇಕಾಗುತ್ತದೆ. ಮೆಟ್ರೊ ಮಾರ್ಗ–ನಿಲ್ದಾಣಗಳ ಕಾಮಗಾರಿಗೆ ಮುನ್ನ, ವಿನ್ಯಾಸದಲ್ಲಿಯೇ ಈ ತಂತ್ರಜ್ಞಾನ ಅಳವಡಿಸಿಕೊಂಡರೆ ಸುಲಭವಾಗಲಿದೆ' ಎಂದು ತಾಂತ್ರಿಕ ವಿಭಾಗದ ಎಂಜಿನಿಯರ್ ಒಬ್ಬರು ತಿಳಿಸಿದರು.

ಪ್ರಕರಣಗಳು

2024

- ಜನವರಿಯಲ್ಲಿ ಇಂದಿರಾನಗರ ಮೆಟ್ರೊ ನಿಲ್ದಾಣದಲ್ಲಿ ಕೆಳಗೆ ಬಿದ್ದ ಮೊಬೈಲ್ ಎತ್ತಿಕೊಳ್ಳಲು ಮಹಿಳೆ ಹಾರಿದ್ದರು. ಜಾಲಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ಕೇರಳದ ಯುವಕ ಹಳಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ್ದರು.
- ಮಾರ್ಚ್‌ನಲ್ಲಿ ಅತ್ತಿಗುಪ್ಪೆ ಮೆಟ್ರೊ ನಿಲ್ದಾಣದಲ್ಲಿ ಕಾನೂನು ವಿದ್ಯಾರ್ಥಿ ಹಾರಿ ಜೀವ ಕಳೆದುಕೊಂಡಿದ್ದರು. ಜ್ಞಾನಭಾರತಿ ನಿಲ್ದಾಣದಿಂದ ಪಟ್ಟಣಗೆರೆ ನಿಲ್ದಾಣ ನಡುವಿನ ಹಳಿ ಮೇಲೆ ಯುವಕರೊಬ್ಬರು ಓಡಾಡಿದ್ದರು.
- ಜೂನ್‌ನಲ್ಲಿ ಹೊಸಹಳ್ಳಿ ನಿಲ್ದಾಣದಲ್ಲಿ ಯುವಕರೊಬ್ಬರು ಆತ್ಮಹತ್ಯೆಗೆ ಯತ್ನಿಸಿದ್ದರು.
- ಆಗಸ್ಟ್‌ನಲ್ಲಿ ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ಆಯತಪ್ಪಿ ಹಳಿಗೆ ಬಿದ್ದಿದ್ದ ನಾಲ್ಕು ವರ್ಷದ ಬಾಲಕನನ್ನು ರಕ್ಷಿಸಲಾಗಿತ್ತು. ದೊಡ್ಡಕಲ್ಲಸಂದ್ರ ನಿಲ್ದಾಣದಲ್ಲಿ 57 ವರ್ಷದ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಮೆಜೆಸ್ಟಿಕ್‌ನಲ್ಲಿ ಅಂಧ ಪ್ರಯಾಣಿಕರಿಬ್ಬರು ಆಯತಪ್ಪಿ ಹಳಿಗೆ ಬಿದ್ದಿದ್ದರು.
- ಸೆಪ್ಟೆಂಬರ್‌ನಲ್ಲಿ ಬಿಹಾರದ ಯುವಕ ಜ್ಞಾನಭಾರತಿ ಮೆಟ್ರೊ ನಿಲ್ದಾಣದಲ್ಲಿ ಹಾರಿ ಆತ್ಮಹತ್ಯೆಗೆ ಯತ್ನಿಸಿದ್ದರು.

2025

- ಜನವರಿಯಲ್ಲಿ ನಿವೃತ್ತ ಸೇನಾಧಿಕಾರಿಯೊಬ್ಬರು ಜಾಲಹಳ್ಳಿ ನಿಲ್ದಾಣದಲ್ಲಿ ಆತ್ಮಹತ್ಯೆಗೆ ಯತ್ನಿಸಿದ್ದರು.
- ಆಗಸ್ಟ್‌ನಲ್ಲಿ ಮೆಜೆಸ್ಟಿಕ್ ನಿಲ್ದಾಣದಲ್ಲಿ ವ್ಯಕ್ತಿಯೊಬ್ಬರು ಹಾರಿದ್ದರು. ಮೆಟ್ರೊ ಭದ್ರತಾ ಸಿಬ್ಬಂದಿಯಾಗಿದ್ದ ರಾಗಿಗುಡ್ಡ ನಿಲ್ದಾಣದಲ್ಲಿ ಆತ್ಮಹತ್ಯೆಗಾಗಿ ಹಳಿಗೆ ಬಿದ್ದಿದ್ದರು.
- ಸೆಪ್ಟೆಂಬರ್‌ನಲ್ಲಿ ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ನಿಲ್ದಾಣದಲ್ಲಿ ವ್ಯಕ್ತಿಯೊಬ್ಬರು ಹಳಿಗೆ ಹಾರಿದ್ದರು.
- ಡಿಸೆಂಬರ್‌ನಲ್ಲಿ ಕೆಂಗೇರಿ ನಿಲ್ದಾಣದಲ್ಲಿ ವಿಜಯಪುರ ಜಿಲ್ಲೆಯ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮೆಟ್ರೊ ರೈಲಿನಡಿಗೆ ಹಾರಿ ಯುವಕ ಆತ್ಮಹತ್ಯೆ

'ನಮ್ಮ ಮೆಟ್ರೊ' ನೇರಳೆ ಮಾರ್ಗದ ಕೆಂಗೇರಿ ನಿಲ್ದಾಣದಲ್ಲಿ ಶುಕ್ರವಾರ ವ್ಯಕ್ತಿಯೊಬ್ಬರು ಮೆಟ್ರೊ ರೈಲು ಬರುವಾಗ ಹಳಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ವಿಜಯಪುರ ಜಿಲ್ಲೆ ದೇವರಹಿಪ್ಪರಗಿಯ ಶಾಂತನಗೌಡ ಪೊಲೀಸ ಪಾಟೀಲ (39) ಆತ್ಮಹತ್ಯೆ ಮಾಡಿಕೊಂಡವರು.

ಅವರಿಗೆ ಏಳು ವರ್ಷದ ಹಿಂದೆ ಮದುವೆಯಾಗಿತ್ತು. ಎಂಜಿನಿಯರಿಂಗ್ ಪದವೀಧರರಾದ ಅವರು ಒಂದು ವರ್ಷದಿಂದ ಕೆಲಸ ಇಲ್ಲದೇ ಆರ್ಥಿಕ ಸಮಸ್ಯೆ ಉಂಟಾಗಿ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದರು. ಇತ್ತೀಚೆಗೆ ಬಿಡದಿಯಲ್ಲಿ ಇರುವ ಕಂಪನಿಯೊಂದಕ್ಕೆ ಸೇರಿದ್ದರು ಎಂದು ಪೊಲೀಸ್ ಮೂಲಗಳು ಹೇಳಿವೆ.



ಶಾಂತನಗೌಡ

ಶಾಂತನಗೌಡ ಅವರು ಶುಕ್ರವಾರ ಬೆಳಿಗ್ಗೆ ದ್ವಿಚಕ್ರ ವಾಹನದಲ್ಲಿ ಬಂದು ಕೆಂಗೇರಿ ಮೆಟ್ರೊ ನಿಲ್ದಾಣದ ಪಾರ್ಕಿಂಗ್‌ನಲ್ಲಿ ವಾಹನ ನಿಲ್ಲಿಸಿ ಬಂದಿದ್ದರು. ಬೆಳಿಗ್ಗೆ 8.15ಕ್ಕೆ ರೈಲು ಬರುತ್ತಿರುವುದನ್ನು ಕಂಡು ಹಾರಿದ್ದರು. ಹಳಿಯ ನಡುವೆ ಸಿಲುಕಿಕೊಂಡು ಮೃತಪಟ್ಟಿದ್ದು, ಪೊಲೀಸರು ಬಂದ ಬಳಿಕ ಮೃತದೇಹವನ್ನು ಮೇಲಕ್ಕೆತ್ತಲಾಯಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಇದರಿಂದಾಗಿ ನೇರಳೆ ಮಾರ್ಗದಲ್ಲಿ ಒಂದೂವರೆ ತಾಸು ಸಂಚಾರ ವ್ಯತ್ಯಯ ಉಂಟಾಯಿತು.

ಮೈಸೂರು ರಸ್ತೆಯಿಂದ ಚಲ್ಲಘಟ್ಟವರೆಗೆ ರೈಲು ಸಂಚಾರ ಸ್ಥಗಿತಗೊಂಡಿತು. ವೈಟ್‌ಫೀಲ್ಡ್‌ನಿಂದ ಮೈಸೂರು ರಸ್ತೆವರೆಗೆ ಮಾತ್ರ ಎಂದಿನಂತೆ ಸಂಚಾರ ಮುಂದುವರಿದಿತ್ತು. ಬೆಳಿಗ್ಗೆ ಕೆಲಸಕ್ಕೆ ತೆರಳುವ ಧಾವಂತದಲ್ಲಿದ್ದ ಪ್ರಯಾಣಿಕರು ಪರದಾಡುವಂತಾಯಿತು.

ಬೆಳಿಗ್ಗೆ 9.45ರ ಬಳಿಕ ಮೆಟ್ರೊ ಸಂಚಾರ ವ್ಯವಸ್ಥೆ ಸರಿಯಾಯಿತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ವೃತ್ತಿಪರತೆ ಕುರಿತು ಕಾರ್ಯಾಗಾರ

ಒಮೆಗಾ ಸಂಸ್ಥೆಯಿಂದ ಕ್ಯಾಬ್ ಚಾಲಕರಿಗೆ ಪುರಸ್ಕಾರ



ಒಮೆಗಾ ಸಂಸ್ಥೆಯಿಂದ ಚಾಲಕರ ಕುಟುಂಬಗಳಿಗೆ ಹೊಲಿಗೆ ಯಂತ್ರ ವಿತರಿಸಲಾಯಿತು.

ಬೆಂಗಳೂರು: ಕಾರ್ಪೊರೇಟ್ ಸಂಸ್ಥೆಗಳಿಗೆ ಕ್ಯಾಬ್ ಸೇವೆಗಳನ್ನು ಒದಗಿಸುತ್ತಿರುವ ಒಮೆಗಾ ಸಂಸ್ಥೆ, ನ.29ರಂದು ಬೆಂಗಳೂರಿನ ಹಲಸೂರಿನಲ್ಲಿ ವಿಸ್ತೃತ ಉಚಿತ ತರಬೇತಿ ಕಾರ್ಯಾಗಾರವನ್ನು ಆಯೋಜಿಸಿತ್ತು.

ಕಾರ್ಯಾಗಾರದಲ್ಲಿ ಕ್ಯಾಬ್ ಚಾಲಕರಿಗೆ ಶಿಸ್ತು, ಸಂಯಮ, ಸ್ವಚ್ಛತೆ, ಸಮಯಪಾಲನೆ, ನಿಯಮಪಾಲನೆ ಮತ್ತು ವೃತ್ತಿಪರತೆಯ ಮಹತ್ವವನ್ನು ನಿದರ್ಶನಗಳ ಸಹಿತ ವಿವರಿಸಲಾಯಿತು. ಅಲ್ಲದೆ, ಉತ್ತಮ ಕಾರ್ಯಕ್ಷಮತೆ ತೋರಿದ ಚಾಲಕರನ್ನು ಗೌರವಿಸಲಾಯಿತು. ವಿದ್ಯಾರ್ಥಿಗಳ ಸಾಧನೆಯನ್ನು ಗುರುತಿಸಿ ಅವರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಎಸ್ಸೆಸ್ಸೆಲ್ಸಿ ವಿಭಾಗದಲ್ಲಿ ಲಿಷಿತ ಮುದ್ದುರಾಜ್(97%), ಡಿಂಪಲ್ ಸುರೇಶ ಮಾನೆ (93%), ಉನ್ನತಿ ರವೀಂದ್ರ(89%), ನಿವೇದಿತಾ ರಾಮಕೃಷ್ಣ(80%), ಪಿಯು ವಿಭಾಗದಲ್ಲಿ ಮ್ಯಾಥಿಯೂ(92%), ಧ್ರುವ ರಮೇಶ್ (89%), ಪೃಥ್ವಿ ರಾಜೇಶ್(82%), ಬಿಕಾಂನಲ್ಲಿ ಶ್ವೇತಾ ರಾಘಣ್ಣ(91%), ಮಹಿಮಾ ಶ್ಯಾಮ್(89%) ಮತ್ತು 2ನೇ ವರ್ಷದ ಎಂಬಿಬಿಎಸ್‌ನಲ್ಲಿ ಧಿಯಾ ಸುರೇಶ ಮಾನೆ(71%).

ಹೊಲಿಗೆ ಯಂತ್ರ ವಿತರಣೆ! ಬಸವಣ್ಣ, ರವೀಶ್, ಮಲ್ಲೇಶ್, ನಿರಂಜನ್, ಸಂತೋಷ್ ಕುಟುಂಬಗಳು ಹೊಲಿಗೆ ಯಂತ್ರ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಪರಿಣತಿ ತರಬೇತುದಾರರಾದ ಡಾ.ಉಷಾ ಮೋಹನ್, ಹಲಸೂರು ಟ್ರಾಫಿಕ್ ಎ.ಎಸ್.ಐ. ಶ್ರೀನಾಥ್.ಎನ್, ಟ್ರಾಫಿಕ್ ಪೋಲಿಸ್ ರಮೇಶ್, ಮತ್ತು ಒಮೆಗಾ ಸಂಸ್ಥೆಯ ಗಣಪತಿ, ನವೀನ, ಚೇತನ್, ಲವೇಶ, ಕಾಸಿಫ್, ರಘುರಾಜ್, ಪ್ರಜ್ವಲ್ ಇದ್ದರು. ಕಾರ್ಯಾಗಾರದಲ್ಲಿ ಭಾಗವಹಿಸಿದ ಎಲ್ಲಾ ಚಾಲಕರಿಗೆ ಮೊಬೈಲ್ ಹೋಲ್ಡರ್ ಅನ್ನು ವಿತರಿಸಲಾಯಿತು.

ಪ್ರಸ್ತುತಿ : ಪಿವಿ ಬ್ರ್ಯಾಂಡ್ ಸ್ಪಾಟ್

'ನೀಲಿ ಮೆಟ್ರೊ ನಿಗದಿತ ಸಮಯದಲ್ಲಿ ಪೂರ್ಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಗದಿತ ಸಮಯದೊಳಗೆ ನೀಲಿ ಮೆಟ್ರೊ ಮಾರ್ಗ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಸೂಚಿಸಲಾಗಿದ್ದು, ಕೆ.ಆರ್ ಪುರ–ಸಿಲ್ಕ್ ಬೋರ್ಡ್ ನಡುವೆ 2026ರ ಡಿಸೆಂಬರ್‌ನಲ್ಲಿ ಸಂಚಾರ ಆರಂಭಿಸಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕೊಡಿಗೆಹಳ್ಳಿಯಲ್ಲಿ ಮೆಟ್ರೊ ಕಾಮಗಾರಿ ಪರಿಶೀಲಿಸಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಹೆಬ್ಬಾಳದಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 2027ರ ಜೂನ್‌ಗೆ ಹಾಗೂ ಕೆ.ಆರ್ ಪುರದಿಂದ ಹೆಬ್ಬಾಳದವರೆಗೆ 2027 ಡಿಸೆಂಬರ್ ವೇಳೆಗೆ ಕಾಮಗಾರಿ ಪೂರ್ಣಗೊಳಿಸುವುದಾಗಿ ಗುತ್ತಿಗೆದಾರರು ತಿಳಿಸಿದ್ದಾರೆ. ಅದರಂತೆ ಪೂರ್ಣಗೊಳಿಸದೇ ಇದ್ದರೆ ಗುತ್ತಿಗೆದಾರರಿಗೆ ಮುಂದೆ ಯಾವುದೇ ಕಾಮಗಾರಿ ನೀಡುವುದಿಲ್ಲ' ಎಂದು ಎಚ್ಚರಿಸಿದರು.

ಕೆಲಸ ಪೂರ್ಣವಾಗುವವರೆಗೂ ಇಲ್ಲಿರುವ ಪ್ರಮುಖ ಯಂತ್ರವನ್ನು ಬೆಂಗಳೂರಿನಿಂದಾಚೆಗೆ ಸ್ಥಳಾಂತರಿಸಲು ಅವಕಾಶ ನೀಡುವುದಿಲ್ಲ. ಇದರ ಉಸ್ತುವಾರಿಯನ್ನು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಅವರಿಗೆ ನೀಡಲಾಗಿದೆ ಎಂದರು.

ಬಿಸಿನೆಸ್ ಕಾರಿಡಾರ್: 'ಬಿಎಂಆರ್‌ಡಿಎ, ಬಿಡಿಎ, ಬೆಂಗಳೂರು ಬಿಸಿನೆಸ್ ಕಾರಿಡಾರ್ ಯೋಜನೆಗಳಲ್ಲಿ ಏನೆಲ್ಲ ಆಗಬೇಕಿದೆ ಎಂದು ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಬೆಂಗಳೂರು ಬಿಸಿನೆಸ್ ಕಾರಿಡಾರ್ ವಿಚಾರದಲ್ಲಿ ಸರ್ಕಾರದ ಪರಿಹಾರಕ್ಕೆ ಒಪ್ಪಿ ಭೂಮಿ ನೀಡುವ ರೈತರಿಗೆ ತೀರ್ಮಾನ ಮಾಡಲಾಗಿರುವ ಪರಿಹಾರವನ್ನು ನೀಡುತ್ತೇವೆ. ಯಾರು ಒಪ್ಪುವುದಿಲ್ಲವೋ ಅವರಿಗೆ ನ್ಯಾಯಾಲಯದಲ್ಲಿ ಹಳೆಯ ದರದಲ್ಲಿ ಡೆಪಾಸಿಟ್ ಮಾಡಿ ಎಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ತಿಳಿಸಿದರು.



ನಗರದ ಡಾ. ರಾಜ್‌ಕುಮಾರ್ ರಸ್ತೆಯಲ್ಲಿ ಅದ್ವೈತ್ ಹೋಂಡಾ ಕಂಪನಿಯ ಹೊಸ ಮಳಿಗೆಯನ್ನು ರಾಜಾಜಿನಗರ ಶಾಸಕ ಎಸ್. ಸುರೇಶ್ ಕುಮಾರ್ ಶುಕ್ರವಾರ ಉದ್ಘಾಟಿಸಿದರು. ಸಂಸದ ತೇಜಸ್ವಿ ಸೂರ್ಯ, ಅದ್ವೈತ್ ಸಮೂಹದ ಅಧ್ಯಕ್ಷ ಡಾ.ಎಸ್.ವಿ.ಎಸ್. ಸುಬ್ರಮಣ್ಯ ಗುಪ್ತ, ಅನುಪಮಾ ಗುಪ್ತ ಇದ್ದರು

‘ಒಆರ್‌ಆರ್ ಕಾರಿಡಾರ್: ಮೂಲಸೌಕರ್ಯ ವೃದ್ಧಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಆರ್‌ಆರ್ ಕಾರಿಡಾರ್ ಜಾಗತಿಕ ತಂತ್ರಜ್ಞಾನ ಆರ್ಥಿಕತೆಯ ಕೇಂದ್ರ ಬಿಂದುವಾಗಿದೆ. ಇಲ್ಲಿನ ಸಮಸ್ಯೆಗಳನ್ನು ಸರಿಪಡಿಸಿ, ಮೂಲಸೌಕರ್ಯ ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ’ ಎಂದು ಐಟಿಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಬೆಂಗಳೂರಿನ ಹೊರ ವರ್ತುಲ ರಸ್ತೆ ಕಂಪನಿಗಳ ಸಂಘವು (ಒಆರ್‌ಆರ್‌ಸಿಎ) ಶುಕ್ರವಾರ ಆಯೋಜಿಸಿದ್ದ ಸಭೆಯಲ್ಲಿ ಅವರು ಮಾತನಾಡಿದರು.

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರರಾವ್ ಮಾತನಾಡಿ, ‘ಜಿಬಿಎ ರಚನೆಯಿಂದ ಈಗಾಗಲೇ ವಿವಿಧ ಇಲಾಖೆಗಳಲ್ಲಿ ಸಮನ್ವಯತೆ ಹೆಚ್ಚಿದೆ. ಮೂಲಸೌಕರ್ಯ ಯೋಜನೆಗಳ ಅಭಿವೃದ್ಧಿಗೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ. ವಿಶೇಷವಾಗಿ ಕಾಡುಬೀಸನಹಳ್ಳಿ, ಬೆಳ್ಳಂದೂರು ಮತ್ತು ಮಾರತ್‌ಹಳ್ಳಿ ಪ್ರದೇಶದಲ್ಲಿ ಉಂಟಾಗುತ್ತಿದ್ದ ಸಂಚಾರ ದಟ್ಟಣೆಯ ನಿಯಂತ್ರಿಸಲು ಯೋಜನೆ ರೂಪಿಸಿ, ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಮಾಹಿತಿ ನೀಡಿದರು.

> ‘ಈ ಪ್ರದೇಶದ ಮೂಲಸೌಕರ್ಯ ಸಮಸ್ಯೆಗೆ ದೀರ್ಘಕಾಲದ ಪರಿಹಾರ ಒದಗಿಸಲು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಲಾಗಿದೆ’
> **ಪ್ರಿಯಾಂಕ್ ಖರ್ಗೆ** ಐಟಿಬಿಟಿ ಸಚಿವ

ಉದ್ಯಮದ ಪ್ರತಿನಿಧಿಗಳು ಮಾತನಾಡಿ, ‘ಮೆಟ್ರೊ ನಿಲ್ದಾಣಗಳಿಗೆ ಕೊನೆಯ ಹಂತದ ಸಂಪರ್ಕ, ಸರ್ವೀಸ್ ರಸ್ತೆಗಳು ಮತ್ತು ಪಾದಚಾರಿ ಮಾರ್ಗಗಳ ದುಃಸ್ಥಿತಿ, ಪ್ರಮುಖ ಜಂಕ್ಷನ್‌ಗಳಲ್ಲಿನ ಸಂಚಾರ ದಟ್ಟಣೆ, ಹೆಚ್ಚಿನ ಜನಸಾಂದ್ರತೆಯ ಪ್ರದೇಶಗಳಲ್ಲಿ ಕಸ ಸಂಗ್ರಹ, ನಿರಂತರ ನಿರ್ಮಾಣ ಚಟುವಟಿಕೆಗಳಿಂದ ಉದ್ಭವಿಸಿರುವ ದೂರಸಂಪರ್ಕ ಸಮಸ್ಯೆಗಳು ಮತ್ತು ವಿವಿಧ ಸಮೂಹ ಸಾರಿಗೆ ಸೌಲಭ್ಯಗಳ ಮಧ್ಯೆ ಸಮನ್ವಯತೆ ಸಾಧಿಸುವ ಕೆಲಸವಾಗಬೇಕು’ ಎಂದು ಮನವಿ ಮಾಡಿದರು.

ಐಟಿ-ಬಿಟಿ ಇಲಾಖೆಯ ಕಾರ್ಯದರ್ಶಿ ಮಂಜುಳಾ ಎನ್., ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ರವಿಶಂಕರ್ ಮತ್ತಿತರರು ಸಭೆಯಲ್ಲಿ ಭಾಗವಹಿಸಿದ್ದರು.



ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಷನ್ಸ್ (ಐಸಿಸಿಆರ್) ವತಿಯಿಂದ ಕೋರಮಂಗಲದಲ್ಲಿರುವ ವಿದೇಶಾಂಗ ಇಲಾಖೆಯ ಬೆಂಗಳೂರು ಪ್ರಾದೇಶಿಕ ಪಾಸ್‌ಪೋರ್ಟ್ ಕಚೇರಿಯಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕರ್ನಾಟಕ ಕಲಾದರ್ಶಿನಿ ತಂಡದ ಸದಸ್ಯರು ‘ದೇವಿ ಮಹಾತ್ಮೆ’ ಯಕ್ಷಗಾನ ಪ್ರದರ್ಶಿಸಿದರು.ಐಸಿಸಿಆರ್ ಪ್ರಾದೇಶಿಕ ನಿರ್ದೇಶಕ ಪ್ರದೀಪ್ ಕುಮಾರ್, ಕರ್ನಾಟಕ ಕಲಾದರ್ಶಿನಿ ತಂಡದ ಮುಖ್ಯಸ್ಥ ಶ್ರೀನಿವಾಸ ಸಾಸ್ತಾನ ಹಾಗೂ ಪ್ರಾದೇಶಿಕ ಪಾಸ್‌ಪೋರ್ಟ್ ಕಚೇರಿಯ ಅಧಿಕಾರಿಗಳು ಭಾಗವಹಿಸಿದ್ದರು

‘ಪ್ರಜಾವಾಣಿ’ ವಲಯ ಮಟ್ಟದ ಕ್ವಿಜ್ 15ಕ್ಕೆ

ಪ್ರಜಾವಾಣಿ ವಾರ್ತೆ

ORCHIDS The International School Presents ಪ್ರಜಾವಾಣಿ QUIZ CHAMPIONSHIP 2025

ಕ್ಯೂ ಆರ್ ಕೋಡ್

ಬೆಂಗಳೂರು: ಬೆಂಗಳೂರು ವಲಯ ಮಟ್ಟದ ‘ಪ್ರಜಾವಾಣಿ– ರಸಪ್ರಶ್ನೆ ಚಾಂಪಿಯನ್ ಶಿಪ್’ ಡಿಸೆಂಬರ್ 15ರಂದು ಜಯನಗರದಲ್ಲಿರುವ ರಾಷ್ಟ್ರೀಯ ವಿದ್ಯಾಲಯದ ಆರ್.ವಿ. ಆಡಿಟೋರಿಯಂನಲ್ಲಿ ನಡೆಯಲಿದೆ. ಈ ಸ್ಪರ್ಧೆಯಲ್ಲಿ ಭಾಗವಹಿಸಲು ವಿದ್ಯಾರ್ಥಿಗಳು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ಹೆಸರು ನೋಂದಾಯಿಸಿಕೊಳ್ಳಬಹುದು.

ಬೆಂಗಳೂರು ನಗರ, ಗ್ರಾಮಾಂತರ, ಬೆಂಗಳೂರು ದಕ್ಷಿಣ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಜಿಲ್ಲೆಗಳ 7ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ಭಾಗವಹಿಸಬಹುದು.

ಇದು ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ರಸಪ್ರಶ್ನೆ ಸ್ಪರ್ಧೆಯಾಗಿದ್ದು, ವಿದ್ಯಾರ್ಥಿಗಳು ಶಾಲೆಗಳ ಮೂಲಕ ತಂಡವಾಗಿ ನೋಂದಾಯಿಸಿಕೊಳ್ಳಬೇಕು. ಪ್ರತಿ ತಂಡದಲ್ಲಿ ಕಡ್ಡಾಯವಾಗಿ ಇಬ್ಬರು ವಿದ್ಯಾರ್ಥಿಗಳು ಇರಬೇಕು. ಬೇರೆ ಬೇರೆ ತರಗತಿಯ ವಿದ್ಯಾರ್ಥಿಗಳೂ ತಂಡವಾಗಿ ಭಾಗವಹಿಸಬಹುದು. ಒಂದು ಶಾಲೆಯಿಂದ ಎಷ್ಟು ತಂಡಗಳು ಬೇಕಾದರೂ ಇರಬಹುದು.

ಕ್ವಿಜ್‌ಗೆ ಎಲ್ಲರಿಗೂ ಉಚಿತ ಪ್ರವೇಶವಿದೆ. ಸ್ಪರ್ಧೆ ನಡೆಯುವ ಸ್ಥಳದಲ್ಲೂ ಹೆಸರನ್ನು ನೋಂದಾಯಿಸಲು ಅವಕಾಶವಿದೆ. ಈ ವಲಯದಲ್ಲಿ ವಿಜೇತರಾದವರು ಬೆಂಗಳೂರಿನಲ್ಲಿ ನಡೆಯುವ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಅರ್ಹರಾಗುತ್ತಾರೆ. ತಂಡಗಳಿಗೆ ಪ್ರಾಥಮಿಕ ಹಂತದ ಪರೀಕ್ಷೆ ನಡೆಯುತ್ತದೆ.

ಹೆಚ್ಚಿನ ಮಾಹಿತಿಗೆ ಬೆಳಿಗ್ಗೆ 10ರಿಂದ ಸಂಜೆ 5ರೊಳಗೆ ಸಂಪರ್ಕಿಸಬೇಕಾದ ದೂರವಾಣಿ: 7338018541.


ಬಿಡಿಎ ಫ್ಲಾಟ್, ವಿಲ್ಲಾ ಮೇಳ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) 2 ಮತ್ತು 3 ಬಿ.ಎಚ್.ಕೆ. ಪ್ರೀಮಿಯಂ ಫ್ಲಾಟ್ ಹಾಗೂ ವಿಲ್ಲಾಗಳ ಮಾರಾಟಕ್ಕೆ ಕಣಿಮಿಣಿಕೆ ಮತ್ತು ಹುಣ್ಣಿಗೆರೆಯಲ್ಲಿ ಡಿಸೆಂಬರ್ 6 ಮತ್ತು 7ರಂದು ಮೇಳ ಹಮ್ಮಿಕೊಂಡಿದೆ.









ಚಿಟಿಕೆ ಸುದ್ದಿ

3 ಕಡೆ ಬೀದಿ ನಾಯಿ ಆಶ್ರಯತಾಣ

ಬೆಂಗಳೂರು: ಬೀದಿ ನಾಯಿಗಳಿಗೆ ಆಶ್ರಯತಾಣ ನಿರ್ಮಿಸಲು ಕೇಂದ್ರ ನಿರಾಶ್ರಿತ ಸಮಿತಿ, ಜ್ಞಾನಭಾರತಿ ಆವರಣ, ಮೈಸೂರು ಲ್ಯಾಂಪ್ಸ್ ಕಾರ್ಖಾನೆ ಆವರಣದಲ್ಲಿ ಸ್ಥಳ ಗುರುತಿಸಲಾಗಿದೆ. ಈ ಸ್ಥಳಗಳನ್ನು ಹಸ್ತಾಂತರಿಸಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಪಶ್ಚಿಮ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಕೆ.ವಿ. ತಿಳಿಸಿದರು.

ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರಾಣಿ ಕಲ್ಯಾಣ ಸಂಸ್ಥೆಗಳ ಜೊತೆಗೆ ನಡೆದ ಸಭೆಯಲ್ಲಿ ಅವರು ಮಾತನಾಡಿದರು.



ಸುಪ್ರೀಂ ಕೋರ್ಟ್ ಆದೇಶದ ಅನ್ವಯ, ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ 1,352 ಸಂಸ್ಥೆಗಳನ್ನು ಗುರುತಿಸಿದ್ದು, ಅದರಲ್ಲಿ ಈಗಾಗಲೇ 209 ಸಂಸ್ಥೆಗಳು ತಮ್ಮ ಮಾಹಿತಿಗಳನ್ನು ನೀಡಿವೆ. ನಗರದಲ್ಲಿ ಮಾನವ – ಪ್ರಾಣಿ ಸಂಘರ್ಷ ತಡೆಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಹೇಳಿದ ಅವರು, ಪ್ರಾಣಿ ಕಲ್ಯಾಣ ಸಂಸ್ಥೆಗಳ ಸಹಕಾರವನ್ನು ಪಡೆಯಬೇಕು ಎಂದು ತಿಳಿಸಿದರು.

13 ಪ್ರಾಣಿ ಕಲ್ಯಾಣ ಸಂಸ್ಥೆಗಳು, 3 ಎವಿಸಿ – ಎಬಿಸಿ ಸೇವಾದಾರರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಸಲಹೆ ನೀಡಿದರು.

ಕಂದಾಯ ವಿಭಾಗದ ಹೆಚ್ಚುವರಿ ಆಯುಕ್ತ ಮಂಜುನಾಥ ಸ್ವಾಮಿ, ಜಂಟಿ ಆಯುಕ್ತ ಸಂಗಪ್ಪ, ಆರತಿ ಆನಂದ್, ಮುಖ್ಯ ಎಂಜಿನಿಯರ್ ಸ್ವಯಂಪ್ರಭ ಉಪಸ್ಥಿತರಿದ್ದರು.

ನಗರದಲ್ಲಿ 9 ಸಾವಿರ ಎ.ಐ ಕ್ಯಾಮೆರಾ

ಯಾವುದೇ ಘಟನೆ ನಡೆದರೆ ಕಂಟ್ರೋಲ್ ರೂಮ್‌ಗೆ ಮಾಹಿತಿ: ಪರಮೇಶ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ 160 ಪ್ರಮುಖ ಜಂಕ್ಷನ್‌ಗಳಲ್ಲಿ ಒಂಬತ್ತು ಸಾವಿರ ಎ.ಐ (ಕೃತಕ ಬುದ್ಧಿಮತ್ತೆ) ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಯಾವುದೇ ರೀತಿಯ ಘಟನೆ ನಡೆದರೆ ಕಂಟ್ರೋಲ್ ರೂಮ್‌ಗೆ ಅದರ ನೇರ ದೃಶ್ಯಾವಳಿ ಲಭಿಸುತ್ತದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

'ಎ.ಐ ಅಲ್ಲದೇ ಇತರ ಐದು ಲಕ್ಷ ಕ್ಯಾಮೆರಾಗಳನ್ನೂ ಅಳವಡಿಸಲಾಗಿದೆ. ವಿಧಿ ವಿಜ್ಞಾನ ಪ್ರಯೋಗಾಲಯವನ್ನು ಆಧುನೀಕರಣಗೊಳಿಸಲಾಗಿದ್ದು, ಎರಡು ತಿಂಗಳಲ್ಲಿ ವರದಿ ಲಭ್ಯವಾಗುತ್ತಿದೆ. ಇಡೀ ದೇಶದಲ್ಲಿ ನಮ್ಮಲ್ಲಿ ಉತ್ತಮ ವಿಧಿವಿಜ್ಞಾನ ಪ್ರಯೋಗಾಲಯವಿದೆ' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

112 ಸಹಾಯವಾಣಿಗೆ ರಾಜ್ಯಾದ್ಯಂತ ನಿತ್ಯ 24 ಸಾವಿರ ಕರೆಗಳು ಬರುತ್ತಿವೆ. 1,400 ದೂರುಗಳಿಗೆ ಸಿಬ್ಬಂದಿ ಸ್ಪಂದಿಸಿ ಕ್ರಮ ಕೈಗೊಳ್ಳುತ್ತಿದ್ದಾರೆ. 112 ಸಹಾಯವಾಣಿ ದೂರುಗಳಿಗೆ ನಗರದಲ್ಲಿ 6.59 ನಿಮಿಷದಲ್ಲಿ ಸ್ಪಂದಿಸುತ್ತಿದ್ದು, ಗ್ರಾಮೀಣ ಭಾಗದಲ್ಲಿ 13.58 ನಿಮಿಷದಲ್ಲಿ ಘಟನಾ ಸ್ಥಳಗಳಿಗೆ ಭೇಟಿ ನೀಡುತ್ತಿದ್ದಾರೆ ಎಂದರು.

ರಾಜ್ಯದಲ್ಲಿ ಸೈಬರ್ ಅಪರಾಧಗಳನ್ನು ನಿಯಂತ್ರಿಸಲು ಜಿಲ್ಲೆಗೊಂದು ಸೈಬರ್ ಕ್ರೈಂ ಪೊಲೀಸ್ ಠಾಣೆಗಳನ್ನು ಸ್ಥಾಪಿಸಿದ ಬಳಿಕ ಹೆಚ್ಚು ಪ್ರಕರಣಗಳು ದಾಖಲಾಗುತ್ತಿವೆ. ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ವಂಚನೆ ಮಾಡುತ್ತಿದ್ದ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ.

1930 ಸಹಾಯವಾಣಿಯಲ್ಲಿ 66 ಮಂದಿ ದಿನದ 24 ಗಂಟೆ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು.

ಮಾದಕ ವಸ್ತುಗಳ ವಿರುದ್ಧ ಕಾರ್ಯಾಚರಣೆ ನಡೆಸುತ್ತಿರುವ ಪೊಲೀಸರು ಪ್ರಸಕ್ತ ವರ್ಷದಲ್ಲಿ (2025) 1,078 ಎನ್‌ಡಿಪಿಎಸ್ ಪ್ರಕರಣಗಳನ್ನು ದಾಖಲಿಸಿ, 1,491 ಭಾರತೀಯ ಪ್ರಜೆಗಳು ಹಾಗೂ 52 ವಿದೇಶಿ ಪ್ರಜೆಗಳನ್ನು ಬಂಧಿಸಿದ್ದಾರೆ. ನಗರ ಪೊಲೀಸ್ ಹಾಗೂ ಕೇಂದ್ರ ಅಪರಾಧ ವಿಭಾಗ (ಸಿಸಿಬಿ) ಜಂಟಿ ಕಾರ್ಯಾಚರಣೆ ನಡೆಸಿ ₹160 ಕೋಟಿ ಮೌಲ್ಯದ 1,446 ಕೆ.ಜಿಯಷ್ಟು ಮಾದಕ ವಸ್ತು ಜಪ್ತಿ ಮಾಡಿದೆ. ಈ ಪೈಕಿ ಸಿಸಿಬಿ 61 ಪ್ರಕರಣಗಳನ್ನು ದಾಖಲಿಸಿ, ಸುಮಾರು ₹120.14 ಕೋಟಿ ಮೌಲ್ಯದ 147 ಕೆ.ಜಿ. ಡ್ರಗ್ಸ್ ವಶಪಡಿಸಿಕೊಂಡಿದೆ. 2024ರಲ್ಲಿ ₹98 ಕೋಟಿ, 2023ರಲ್ಲಿ ₹103 ಕೋಟಿ ಮೌಲ್ಯದ ಡ್ರಗ್ ಪತ್ತೆ ಹಚ್ಚಲಾಗಿದೆ ಎಂದು ಮಾಹಿತಿ ನೀಡಿದರು.

ವೀಸಾ ಅವಧಿ ಮುಕ್ತಾಯಗೊಂಡಿದ್ದರೂ ನಗರದಲ್ಲಿ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿದ್ದ 302 ವಿದೇಶಿ ಪ್ರಜೆಗಳನ್ನು ಪತ್ತೆ ಹಚ್ಚಿ, ವಿದೇಶಿ ಪ್ರಾದೇಶಿಕ ನೋಂದಣಿ ಅಧಿಕಾರಿಯ (ಎಫ್‌ಆರ್‌ಆರ್‌ಒ) ನೆರವಿನೊಂದಿಗೆ, ದಾಖಲೆಗಳನ್ನು ಪರಿಶೀಲಿಸಿ, ಆಯಾ ದೇಶಗಳಿಗೆ ಗಡಿಪಾರು ಮಾಡಲಾಗಿದೆ ಎಂದರು.

ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಾ.ಎಂ.ಎ.ಸಲೀಂ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಡಿಜಿಪಿ ಪ್ರಶಾಂತ್ ಕುಮಾರ್ ಠಾಕೂರ್, ಆಂತರಿಕ ಭದ್ರತಾ ವಿಭಾಗದ ಡಿಜಿಪಿ ಪ್ರಣಬ್ ಮೊಹಾಂತಿ, ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್, ಎಡಿಜಿಪಿಗಳಾದ ಆರ್.ಹಿತೇಂದ್ರ, ಪಿ.ಹರಿಶೇಖರನ್, ಬಿ.ದಯಾನಂದ, ಸೌಮೇಂದು ಮುಖರ್ಜಿ, ಆರ್‌ಎನ್‌ಟಿಬಿಸಿಐ ವ್ಯವಸ್ಥಾಪಕ ನಿರ್ದೇಶಕ ದೇಬಶಿಶ್ ನಿಯೋಗಿ, ಹ್ಯಾಂಡ್ ಇನ್ ಹ್ಯಾಂಡ್ ಇಂಡಿಯಾ ಸಂಸ್ಥೆಯ ಕಾರ್ಯ ನಿರ್ವಾಹಕ ಅಧ್ಯಕ್ಷೆ ಡಾ.ಕಲ್ಪನಾ ಶಂಕರ್ ಹಾಜರಿದ್ದರು.



'ಹೈಜೀನ್ ಆನ್ ಗೋ' ಸಂಚಾರಿ ಶೌಚಾಲಯ ವಾಹನಗಳಿಗೆ ಜಿ.ಪರಮೇಶ್ವರ ಶುಕ್ರವಾರ ಹಸಿರು ನಿಶಾನೆ ತೋರಿದರು. ಡಾ.ಎಂ.ಎ.ಸಲೀಂ, ಸೀಮಾಂತ್ ಕುಮಾರ್ ಸಿಂಗ್, ಪ್ರಣಬ್ ಮೊಹಂತಿ ಉಪಸ್ಥಿತರಿದ್ದರು

ಸೈಬರ್ ವಂಚನೆ ಪ್ರಕರಣಗಳ ವಿವರ

ವರ್ಷ	ಪ್ರಕರಣಗಳು
2022	12,550
2023	21,903
2024	21,995
2025	13,000



ಪೊಲೀಸರಿಗೆ ಸಂಚಾರಿ ಶೌಚಾಲಯ

ಸಂಚಾರ ಪೊಲೀಸರ ಅನುಕೂಲಕ್ಕಾಗಿ ರೆನಾಲ್ಟ್ ನಿಸಾನ್ ಟೆಕ್ನಾಲಜಿ ಆ್ಯಂಡ್ ಬಿಸಿನೆಸ್ ಸೆಂಟರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (ಆರ್‌ಎನ್‌ಟಿಬಿಸಿಐ) ತನ್ನ ಸಿಎಸ್‌ಆರ್ ನೆರವಿನಡಿ ನೀಡಿರುವ 'ಹೈಜೀನ್ ಆನ್ ಗೋ' ಸಂಚಾರಿ ಶೌಚಾಲಯ ವಾಹನಗಳಿಗೆ ಜಿ.ಪರಮೇಶ್ವರ ಶುಕ್ರವಾರ ಹಸಿರು ನಿಶಾನೆ ತೋರಿದರು.

ಹ್ಯಾಂಡ್ ಇನ್ ಹ್ಯಾಂಡ್ ಇಂಡಿಯಾ ಸಂಸ್ಥೆಯು 'ಹೈಜೀನ್ ಆನ್ ಗೋ' ಸಂಚಾರ ಶೌಚಾಲಯ ವಾಹನಗಳನ್ನು ರೂಪಿಸಿದೆ. ನಗರದ ತೀವ್ರ ವಾಹನ ದಟ್ಟಣೆಯ ವಿವಿಧ ರಸ್ತೆಗಳಲ್ಲಿ ಕರ್ತವ್ಯ ನಿರ್ವಹಿಸುವ ಸಂಚಾರ ಪೊಲೀಸರಿಗೆ ಈ ವಾಹನಗಳ ಸೇವೆ ಲಭ್ಯವಿರಲಿದೆ. ಸಂಚಾರ ನಿರ್ವಹಣೆ ವೇಳೆ ಪೊಲೀಸರಿಗೆ ಶೌಚಾಲಯಕ್ಕೆ ಹೋಗುವುದಕ್ಕೂ ಬಿಡುವು ಸಿಗುವುದಿಲ್ಲ. ಶೌಚಬಾಧೆ ತೀರಿಸಿಕೊಳ್ಳಲು ಸಾಧ್ಯವಾಗದೆ ಸಂಚಾರ ಪೊಲೀಸರು ನಿರ್ಜಲೀಕರಣ, ಮೂತ್ರನಾಳದ ಸೋಂಕು ಸೇರಿದಂತೆ ಅನೇಕ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುತ್ತಾರೆ. ಮಹಿಳಾ ಸಿಬ್ಬಂದಿಯ ಜನನಿಬಿಡ ರಸ್ತೆಗಳಲ್ಲಿ ಕಾರ್ಯ ನಿರ್ವಹಿಸುವಾಗ ಇನ್ನೂ ಹೆಚ್ಚು ಕಷ್ಟ ಅನುಭವಿಸುತ್ತಾರೆ.

ಈ ಸಮಸ್ಯೆಯ ಪರಿಹಾರಕ್ಕಾಗಿ 'ಹೈಜೀನ್ ಆನ್ ಗೋ' ವಾಹನಗಳನ್ನು ಸಿದ್ಧಪಡಿಸಲಾಗಿದೆ. ಮೂರು ವಾಹನಗಳ ಮರುವಿನ್ಯಾಸಕ್ಕೆ ಸುಮಾರು ₹80 ಲಕ್ಷ ವ್ಯಯಿಸಲಾಗಿದೆ. ಒಟ್ಟಾರೆ ₹2.06 ಕೋಟಿ ವೆಚ್ಚದಲ್ಲಿ ಯೋಜನೆ ರೂಪಿಸಲಾಗಿದೆ. 2028ರ ಮಾರ್ಚ್‌ವರೆಗೆ ಈ ವಾಹನಗಳು ಕಾರ್ಯಾಚರಣೆ ಮಾಡಲಿವೆ.

ವಾಹನ ದಟ್ಟಣೆಯ ಮಾರ್ಗಗಳಾದ ಥಣಿಸಂದ್ರ, ಆಡುಗೋಡಿ ಮತ್ತು ಮೈಸೂರು ರಸ್ತೆಯ 91 ಪೂರ್ವ ನಿಗದಿತ ಸ್ಥಳಗಳಲ್ಲಿ ಇವು ಕಾಲಕಾಲಕ್ಕೆ ಬಂದು ನಿಲ್ಲುತ್ತವೆ. ಈ ವಾಹನಗಳು ನಿತ್ಯ ಬೆಳಗ್ಗೆ 8.30ರಿಂದ ಸಂಜೆ 7ರವರೆಗೆ ಕಾರ್ಯ ನಿರ್ವಹಿಸುತ್ತವೆ.

ಸುದ್ದಿ 2 ನಿಮಿಷ

'ದೇವನಹಳ್ಳಿಯ 1,777 ಎಕರೆ ಶಾಶ್ವತ ವಿಶೇಷ ಕೃಷಿ ವಲಯ'

ಬೆಂಗಳೂರು: 'ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳ ವ್ಯಾಪ್ತಿಯಲ್ಲಿನ 1,777 ಎಕರೆ ಭೂಮಿಯನ್ನು 'ಶಾಶ್ವತ ವಿಶೇಷ ಕೃಷಿ ವಲಯ' ಎಂದು ಘೋಷಿಸಲು ಸಚಿವ ಸಂಪುಟ ಸಭೆಯು ಒಪ್ಪಿಗೆ ನೀಡಿದೆ' ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರೈತರ ಹಿತವನ್ನು ಪರಿಗಣಿಸಿ ಅವರಿಗೆ ಪೂರಕವಾಗಿ ಸ್ಪಂದಿಸಲಾಗಿದೆ. 1996ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯ ಕಲಂ 4ರ ಅಡಿಯಲ್ಲಿರುವ ಅಧಿಕಾರವನ್ನು ಬಳಸಿ, 1,777 ಎಕರೆಯನ್ನು ಪ್ರಾಥಮಿಕ ಅಧಿಸೂಚನೆಯಿಂದ ಹೊರಗಿಡುವ ನಿರ್ಧಾರ ಕೈಗೊಳ್ಳಲಾಗಿದೆ' ಎಂದರು.

'ಇಷ್ಟು ಭೂಮಿಯನ್ನು ಶಾಶ್ವತ ವಿಶೇಷ ಕೃಷಿ ವಲಯವೆಂದು ಘೋಷಿಸಲು ಅಗತ್ಯವಿರುವ ರೂಪುರೇಷೆ ಸಿದ್ಧಪಡಿಸಲು ತಜ್ಞರ ಸಮಿತಿ ರಚಿಸಲಾಗುತ್ತದೆ. ನಗರಾಭಿವೃದ್ಧಿ ಇಲಾಖೆಯಿಂದ ಸಂಬಂಧಿತ ಸಮವರ್ತಿ ಅಧಿಸೂಚನೆ ಹೊರಡಿಸಲಾಗುವುದು. ಈ ಜಮೀನಿನ ಪಹಣಿಗಳಲ್ಲಿನ ಕಾಲಂ 11ರಲ್ಲಿ 'ಶಾಶ್ವತ ವಿಶೇಷ ಕೃಷಿ ವಲಯ'ವೆಂದು ನಮೂದಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಅವರು ವಿವರಿಸಿದರು.

'ಒಂದು ವೇಳೆ, ಈ 13 ಗ್ರಾಮಗಳ ರೈತರೇ ಸ್ವಯಂಪ್ರೇರಿತವಾಗಿ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ತಮ್ಮ ಜಮೀನುಗಳನ್ನು ಬಿಟ್ಟು ಕೊಡಲು ಮುಂದೆ ಬಂದಲ್ಲಿ, ಅಂತಹ ಜಮೀನುಗಳನ್ನು ಅಗತ್ಯಾನುಸಾರ ಮತ್ತು ನಿಯಮಾನುಸಾರ ಸ್ವಾಧೀನ ಪಡಿಸಿಕೊಳ್ಳಲಾಗುವುದು. ಇದಕ್ಕಾಗಿ ರೈತರಿಗೆ ಮೂರು ತಿಂಗಳ ಕಾಲಾವಕಾಶ ನೀಡಲಾಗುವುದು. ಇಂತಹ ಪ್ರಕರಣಗಳಲ್ಲಿ ಭೂದರ ನಿರ್ಧರಣಾ ಸಮಿತಿಯ ತೀರ್ಮಾನದಂತೆ ಸೂಕ್ತ ಪರಿಹಾರವನ್ನೂ ನೀಡಲಾಗುವುದು' ಎಂದು ಅವರು ಸ್ಪಷ್ಟಪಡಿಸಿದರು.



ಸಿಒಪಿ ಸಲ್ಲಿಕೆ: ಇಂದು ಕಡೆ ದಿನ

ಬೆಂಗಳೂರು: ಸರ್ಟಿಫಿಕೇಟ್ ಆಫ್ ಪ್ರ್ಯಾಕ್ಟೀಸ್‌ಗೆ (ಸಿಒಪಿ) ಅರ್ಜಿ ಸಲ್ಲಿಸದೇ ಇರುವ ವಕೀಲರು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಶನಿವಾರ (ಡಿ.6) ಕೊನೆಯ ಅವಕಾಶ ಕಲ್ಪಿಸಲಾಗಿದೆ.

'2026 ಮಾರ್ಚ್‌ನಲ್ಲಿ ರಾಜ್ಯ ವಕೀಲರ ಪರಿಷತ್‌ಗೆ ಚುನಾವಣೆ ನಡೆಯುವ ಸಂಭವ ಇದ್ದು, ಸಿಒಪಿ ಸಲ್ಲಿಸದೇ ಇರುವ ವಕೀಲರು ksbc.org.in ಮೂಲಕ ಅರ್ಜಿ ಸಲ್ಲಿಸುವ ಈ ಅವಕಾಶ ಬಳಸಿಕೊಳ್ಳಬೇಕು' ಎಂದು ಪರಿಷತ್ ಮಾಜಿ ಅಧ್ಯಕ್ಷ ಎಸ್.ಎಸ್.ಮಿಟ್ಟಲಕೋಡ್ ತಿಳಿಸಿದ್ದಾರೆ.

'ಕೋಮುಹಿಂಸೆ ಮಂಡ್ಯಕ್ಕೂ ಕಾರ್ಯಪಡೆ'

ಬೆಂಗಳೂರು: ರಾಜ್ಯದ ದಕ್ಷಿಣ ಕನ್ನಡ, ಉಡುಪಿ ಹಾಗೂ ಶಿವಮೊಗ್ಗ ಜಿಲ್ಲೆಗಳ ವ್ಯಾಪ್ತಿಯಲ್ಲಿ ಕೋಮುಹಿಂಸೆ ನಿಗ್ರಹಿಸಲು ರಚಿಸಿರುವ ವಿಶೇಷ ಕಾರ್ಯಪಡೆಯನ್ನು ಮಂಡ್ಯ ಜಿಲ್ಲೆಗೂ ವಿಸ್ತರಿಸಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರಾವಳಿ ಭಾಗದಲ್ಲಿ ಕೊಲೆ, ಕೋಮು ಗಲಭೆಯಿಂದಾಗಿ ಶಾಂತಿ ಇಲ್ಲದಂತಾಗಿತ್ತು. ವಿಶೇಷ ಕಾರ್ಯಪಡೆ ರಚನೆ ಬಳಿಕ ಕರಾವಳಿ ಭಾಗದಲ್ಲಿ ಕೊಲೆ, ಗಲಭೆಗಳು ಆಗಿಲ್ಲ. 300ಕ್ಕೂ ಹೆಚ್ಚು ಸಿಬ್ಬಂದಿಗೆ ವಿಶೇಷ ತರಬೇತಿ ನೀಡಲಾಗಿದೆ. ಮೂರು ದಿನದ ಹಿಂದೆ ಮಂಗಳೂರಿಗೆ ಭೇಟಿ ನೀಡಿದ್ದ ವೇಳೆ ಸರ್ಕಾರದ ಕಾರ್ಯವೈಖರಿ ಬಗ್ಗೆ ಸ್ಥಳೀಯರಿಂದ ಪ್ರಶಂಸೆ ವ್ಯಕ್ತವಾಯಿತು ಎಂದು ಅವರು ತಿಳಿಸಿದರು.

ಸಿಐಡಿಯಲ್ಲಿ ಠೇವಣಿ ವಂಚನೆ ಮತ್ತು ಕ್ರಿಮಿನಲ್ ಗುಪ್ತಚರ ಘಟಕವನ್ನು ತೆರೆಯಲಾಗಿದೆ. ಬೆಳ್ತಂಗಡಿಯಲ್ಲಿ ಸಿಐಡಿ ಉಪ ವಿಭಾಗವನ್ನು ಸ್ಥಾಪನೆ ಮಾಡಲಾಗಿದೆ ಎಂದು ಹೇಳಿದರು.

'ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಅಪರಾಧ ಪ್ರಕರಣದ ತನಿಖೆ ಪೂರ್ಣಗೊಂಡಿಲ್ಲ. ಪ್ರಕರಣಕ್ಕೆ ಸಂಬಂಧಿಸಿದ ವರದಿಗಳನ್ನು ಮಾತ್ರ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ತನಿಖಾ ಹಂತದಲ್ಲಿರುವ ಪ್ರಕರಣದ ಬಗ್ಗೆ ಹೆಚ್ಚು ಚರ್ಚೆ ಮಾಡಲು ಆಗುವುದಿಲ್ಲ. ನಾನಾಗಲಿ, ಮುಖ್ಯಮಂತ್ರಿಯಾಗಲಿ ಎಸ್‌ಐಟಿ ಅಧಿಕಾರಿಗಳಿಗೆ ಕರೆ ಮಾಡಿ ಮಾತನಾಡಿಲ್ಲ' ಎಂದರು.

ಪ್ರತಿಭೆಗೆ ವೇದಿಕೆಯಾದ 'ಡಿಎಚ್‌ಇಇ ಎಕ್ಸ್‌ಪ್ರೆಷನ್ಸ್'

ಮಕ್ಕಳ 40ಕ್ಕೂ ಅಧಿಕ ತಂಡಗಳಿಂದ ನೃತ್ಯ ಪ್ರದರ್ಶನ • 3 ದಿನಗಳ ಅಂತರ ಶಾಲಾ ಸ್ಪರ್ಧೆ ಸಂಪನ್ನ





'ಡಿಎಚ್‌ಇಇ ಎಕ್ಸ್‌ಪ್ರೆಷನ್ಸ್' ಅಂತರ ಶಾಲಾ ನೃತ್ಯ ಸ್ಪರ್ಧೆಯ ಹಿರಿಯ ವಿಭಾಗದ ವಿಜೇತ ತಂಡಗಳು (ಎಡ ಚಿತ್ರ) ಮತ್ತು ಕಿರಿಯ ವಿಭಾಗದ ವಿಜೇತ ತಂಡಗಳಿಗೆ ಬಹುಮಾನ ವಿತರಿಸಲಾಯಿತು ಪ್ರಜಾವಾಣಿ ಚಿತ್ರಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸ್ತ್ರೀಯ, ಪಾಶ್ಚಾತ್ಯ ಸೇರಿ ವಿವಿಧ ಪ್ರಕಾರಗಳಲ್ಲಿ ಮಕ್ಕಳು ನೃತ್ಯ ಪ್ರದರ್ಶಿಸಿ ಗಮನ ಸೆಳೆದರೆ, ಪ್ರೇಕ್ಷಕರ ಸಾಲಿನಲ್ಲಿ ಕುಳಿತ ಸಹ ಸ್ಪರ್ಧಿಗಳು, ಪೋಷಕರು ಹಾಗೂ ಶಿಕ್ಷಕರು ಚಪ್ಪಾಳೆಯ ಪ್ರೋತ್ಸಾಹ ನೀಡಿದರು. ಈ ಪ್ರದರ್ಶನಕ್ಕೆ ವೇದಿಕೆ ಕಲ್ಪಿಸಿದ್ದು ಡೆಕ್ಕನ್ ಹೆರಾಲ್ಡ್ ಇನ್ ಎಜುಕೇಶನ್ (ಡಿಎಚ್‌ಇಇ) ವತಿಯಿಂದ ಹಮ್ಮಿಕೊಂಡಿದ್ದ 'ಡಿಎಚ್‌ಇಇ ಎಕ್ಸ್‌ಪ್ರೆಷನ್ಸ್' ಅಂತರ ಶಾಲಾ ಸ್ಪರ್ಧೆ.

ಬಾಲಭವನದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಮೂರು ದಿನಗಳ ಈ ಸ್ಪರ್ಧೆಯು ಶುಕ್ರವಾರ ಸಂಪನ್ನವಾಯಿತು. ಕೊನೆಯ ದಿನ ನಡೆದ ನೃತ್ಯ ಸ್ಪರ್ಧೆಯಲ್ಲಿ ನಗರದ ವಿವಿಧ ಶಾಲೆಗಳಿಂದ 40ಕ್ಕೂ ಅಧಿಕ ತಂಡಗಳು ಭಾಗವಹಿಸಿದ್ದವು. ವಿಭಿನ್ನ ವೇಷಭೂಷಣದ ಮೂಲಕ ಗಮನ ಸೆಳೆದ ಮಕ್ಕಳು, ವಿವಿಧ ಗೀತೆಗಳಿಗೆ ಹೆಜ್ಜೆ ಹಾಕುವ ಮೂಲಕ ಪ್ರತಿಭೆ ಅನಾವರಣ ಮಾಡಿದರು. ಕಿರಿಯರ ವಿಭಾಗದಲ್ಲಿ 22 ತಂಡಗಳು ಭಾಗವಹಿಸಿದರೆ, ಹಿರಿಯರ ವಿಭಾಗದಲ್ಲಿ 23 ತಂಡಗಳು ಪಾಲ್ಗೊಂಡಿದ್ದವು.

'ಕಾಂತಾರ' ಸೇರಿ ವಿವಿಧ ಕನ್ನಡ ಹಾಗೂ ಹಿಂದಿ ಚಿತ್ರಗೀತೆಗಳಿಗೆ ವಿದ್ಯಾರ್ಥಿಗಳು ನೃತ್ಯ ಪ್ರದರ್ಶಿಸಿದರು. ಎರಡು ವಿಭಾಗದಲ್ಲಿ ತಲಾ ಆರು ಬಹುಮಾನಗಳನ್ನು ನೀಡಿ, ಪ್ರೋತ್ಸಾಹಿಸಲಾಯಿತು. ಮಧುಲಿತಾ ಮೊಹಪಾತ್ರ, ಮನೋಜ್ ತ್ರಿಪಾಠಿ ಹಾಗೂ ನಾನ್ಸಿ ಅಬ್ರಹಾಂ ಅವರು ಸ್ಪರ್ಧೆಯ ತೀರ್ಪುಗಾರರಾಗಿದ್ದರು.

ಬಾಲಭವನದ ಮೇಲ್ವಿಚಾರಕಿ ಪುಷ್ಪವತಿ ಆರ್., 'ಮಕ್ಕಳಿಗಾಗಿಯೇ ಬಾಲಭವನವನ್ನು ರೂಪಿಸಲಾಗಿದೆ. ಸರ್ಕಾರಿ ಶಾಲಾ ಮಕ್ಕಳಿಗೆ ಪ್ರವೇಶ ಉಚಿತ ಇರಲಿದೆ. ಅಂಗವಿಕಲ ಮಕ್ಕಳಿಗೆ ಪ್ರತ್ಯೇಕ ಪಾರ್ಕ್ ಇದ್ದು, ಯುಡಿಐಡಿ ಕಾರ್ಡ್ ಹೊಂದಿದ್ದಲ್ಲಿ ಪ್ರವೇಶ ಶುಲ್ಕವಿಲ್ಲ' ಎಂದರು.

ಬಾಲಭವನ ಸೊಸೈಟಿ ಅಧ್ಯಕ್ಷ ಬಿ.ಆರ್. ನಾಯ್ಡು ಅವರನ್ನು ಸನ್ಮಾನಿಸಲಾಯಿತು. ಬಾಲಭವನ ಸೊಸೈಟಿಯ ಆಡಳಿತಾಧಿಕಾರಿ ಧನಲಕ್ಷ್ಮಿ ಎಲ್., ಟಿಪಿಎಂಎಲ್ ಪ್ರಸರಣ ವಿಭಾಗದ ಪ್ರಧಾನ ವ್ಯವಸ್ಥಾಪಕ ಬಿ.ಎ. ರವಿ, ಡಿಎಚ್‌ಇಇ ಸಂಪಾದಕಿ ಕ್ಯಾರೊಲಿನ್ ಡಯಾನಾ ಉಪಸ್ಥಿತರಿದ್ದರು.

ನೃತ್ಯ ಸ್ಪರ್ಧೆಯ ಕಿರಿಯರ ವಿಭಾಗದ ವಿಜೇತರು

- ಮೊದಲ ಸ್ಥಾನ; ಸಿಲಿಕಾನ್ ಸಿಟಿ ಅಕಾಡೆಮಿ ಆಫ್ ಸೆಕೆಂಡರಿ ಎಜುಕೇಷನ್
- ಎರಡನೆ ಸ್ಥಾನ; ಶ್ರೀ ವಿದ್ಯಾಮಂದಿರ ಎಜುಕೇಷನ್ ಸೊಸೈಟಿ
- ಮೂರನೆ ಸ್ಥಾನ; ಈಸ್ಟ್ ವೆಸ್ಟ್ ಪಬ್ಲಿಕ್ ಸ್ಕೂಲ್
- ನಾಲ್ಕನೆ ಸ್ಥಾನ; ದಿ ಸೌಥ್ ಸ್ಕೂಲ್
- ಐದನೆ ಸ್ಥಾನ; ಜುಬಿಲಿ ಇಂಗ್ಲಿಷ್ ಹೈಸ್ಕೂಲ್
- ಆರನೆ ಸ್ಥಾನ; ಗಂಗಾ ಇಂಟರ್‌ನ್ಯಾಷನಲ್ ಸ್ಕೂಲ್

ಹಿರಿಯರ ವಿಭಾಗದ ವಿಜೇತರು

- ಮೊದಲ ಸ್ಥಾನ; ಶ್ರೀ ಅಯ್ಯಪ್ಪ ಎಜುಕೇಷನ್ ಸೆಂಟರ್ ಸಿಬಿಎಸ್‌ಇ
- ಎರಡನೆ ಸ್ಥಾನ; ಸಿಲಿಕಾನ್ ಸಿಟಿ ಅಕಾಡೆಮಿ ಆಫ್ ಸೆಕೆಂಡರಿ ಎಜುಕೇಷನ್
- ಮೂರನೆ ಸ್ಥಾನ; ಜುಬಿಲಿ ಇಂಗ್ಲಿಷ್ ಸ್ಕೂಲ್ ಹೈಸ್ಕೂಲ್ ಎನ್‌ಆರ್‌ಐ ಲೇಔಟ್
- ನಾಲ್ಕನೆ ಸ್ಥಾನ; ಗಂಗಾ ಇಂಟರ್‌ನ್ಯಾಷನಲ್ ಸ್ಕೂಲ್
- ಐದನೆ ಸ್ಥಾನ; ಎಂಟಿಬಿ ಜ್ಞಾನಜ್ಯೋತಿ ವಿದ್ಯಾನಿಕೇತನ್
- ಆರನೆ ಸ್ಥಾನ; ದಿ ಸೌಥ್ ಸ್ಕೂಲ್

> ಸೋಲು–ಗೆಲುವಿಗಿಂತ ಸ್ಪರ್ಧೆಯಲ್ಲಿ ಭಾಗವಹಿಸುವಿಕೆ ಮುಖ್ಯ. ಮಕ್ಕಳು ಅತ್ಯುತ್ತಮವಾಗಿ ಪ್ರದರ್ಶನ ನೀಡಿದ್ದರಿಂದ ವಿಜೇತರ ಆಯ್ಕೆ ನಮಗೂ ಸವಾಲಾಗಿತ್ತು
> **ಮನೋಜ್ ತ್ರಿಪಾಠಿ,** ತೀರ್ಪುಗಾರ

ಕೇರಳ ಸ್ಥಳೀಯ ಚುನಾವಣೆ: ರಜೆಗೆ ಡಿಕೆಶಿ ಸೂಚನೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಕೇರಳದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಡಿ.9 ಹಾಗೂ 11ರಂದು ಚುನಾವಣೆ ನಡೆಯಲಿರುವುದರಿಂದ ಕರ್ನಾಟಕದಲ್ಲಿ ನೆಲಸಿರುವ ಅಲ್ಲಿನ ಮತದಾರರು ಮತ ಹಾಕಲು ಅನುವಾಗುವಂತೆ ಮೂರು ದಿನ ವೇತನ ಸಹಿತ ರಜೆ ನೀಡುವಂತೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚನೆ ನೀಡಿದ್ದಾರೆ.

ಕೇರಳದವರು ಬೆಂಗಳೂರು ಮಾತ್ರವಲ್ಲದೆ ಕರ್ನಾಟಕದ ವಿವಿಧ ಭಾಗಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಶಿಕ್ಷಣ ಸಂಸ್ಥೆಗಳು, ವಾಣಿಜ್ಯೋದ್ಯಮ, ಹೋಟೆಲ್‌ಗಳು, ಗುತ್ತಿಗೆದಾರರು, ಬಿಲ್ಡರ್‌ಗಳು, ಅಂಗಡಿಗಳ ಪ್ರಮುಖರು ರಜೆ ನೀಡುವುದರಿಂದ ತಮ್ಮಲ್ಲಿ ಕೆಲಸ ಮಾಡುತ್ತಿರುವವರು ಮತದಾನದಲ್ಲಿ ತೊಡಗಿಸಿಕೊಳ್ಳಲು ಸಹಕಾರಿಯಾಗಲಿದೆ ಎಂದು ತಿಳಿಸಿದ್ದಾರೆ.

ನಗರದಲ್ಲಿ ಇಂದು

'ಡಾನ್ಸ್ ಕರ್ಮಾ' ಭವ್ಯ ನೃತ್ಯೋತ್ಸವ: ನೇತೃತ್ವ: ನಿರುಪಮಾ ರಾಜೇಂದ್ರ, ಟಿ.ಡಿ. ರಾಜೇಂದ್ರ, ಸ್ಥಳ: ಡಾ. ಪ್ರೇಮಚಂದ್ರ ಸಾಗರ್ ಕಲಾಕ್ಷೇತ್ರ, ಕುಮಾರಸ್ವಾಮಿ ಲೇಔಟ್, ಬೆಳಿಗ್ಗೆ 10ರಿಂದ

ಜೈನ ಸಾಹಿತ್ಯ ಸಿರಿ 'ವಡ್ಡಾರಾಧನೆ ಕತೆಗಳ ವೈಶಿಷ್ಟ್ಯ' ಉಪನ್ಯಾಸ: ಬಸವರಾಜ ಕಲ್ಗುಡಿ, ಅಧ್ಯಕ್ಷತೆ: ಶಶಿರೇಖಾ, ಉಪಸ್ಥಿತಿ: ಮಮತಾ ಕಾಂತರಾಜ್, ನಾಗಶ್ರೀ ಮುಪ್ಪಾನೆ, ಆಯೋಜನೆ: ಜೈನ್ ಮಿಲನ್ ಬೆಂಗಳೂರು ಸೆಂಟ್ರಲ್, ಚಕ್ರೇಶ್ವರಿ ಮಹಿಳಾ ಸಮಾಜ, ಸ್ಥಳ: ಚಕ್ರೇಶ್ವರಿ ಮಹಿಳಾ ಸಮಾಜ, ಆನೆಬಂಡೆ ರಸ್ತೆ, ಮೂರನೇ ಬಡಾವಣೆ, ಜಯನಗರ, ಸಂಜೆ 4.30ರಿಂದ



ನಿರುಪಮಾ, ರಾಜೇಂದ್ರ

ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ 'ಮಕ್ಕಳ ರಂಗ ಉತ್ಸವ': ಉದ್ಘಾಟನೆ: ಹೇಮಲತಾ ಸೇಷ, ಅಧ್ಯಕ್ಷತೆ: ಮುರಳಿಕೃಷ್ಣ ಕೆ. ಮೈಸೂರು, ಪ್ರಾಸ್ತಾವಿಕ ನುಡಿ: ಓಹಿಲೇಶ ಲಕ್ಷ್ಮಣ, ಅತಿಥಿಗಳು: ಲಾವಣ್ಯ ಕಮಲೇಶ್, ವಿನೋದ್ ಕುಮಾರ್ ಜಿ., ಚಂದ್ರಶೇಖರ್, ಆಯೋಜನೆ: ರಂಗಕಹಳೆ, ಸ್ಥಳ: ಡಾ.ಆರ್.ಎನ್. ಶೆಟ್ಟಿ ಸಭಾಂಗಣ, ಆರ್‌ಎನ್‌ಎಸ್ ಆವರಣ, ಚನ್ನಸಂದ್ರ, ಬೆಳಿಗ್ಗೆ 9

ಬೆಂಗಳೂರು ಸಾಹಿತ್ಯ ಉತ್ಸವ: ಉದ್ಘಾಟನೆ: ಬಾನು ಮುಷ್ತಾಕ್, ಪ್ರತೀತ್ ಪುಂಜ ಬಲ್ಲಾಳ್, ಆಯೋಜನೆ: ಬೆಂಗಳೂರು ಸಾಹಿತ್ಯ ಉತ್ಸವ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 10ರಿಂದ

ಗ್ಲೋಬಲ್ ಯೋಗ ಸಮ್ಮಿಟ್, ವಿಶ್ವ ಆಹಾರ ಆರೋಗ್ಯ ಮೇಳ: ಸಾನ್ನಿಧ್ಯ: ನಿರಂಜನಾನಂದಪುರಿ ಸ್ವಾಮೀಜಿ, ಮಹಾಂತ ಶಿವಯೋಗಿ ಸ್ವಾಮೀಜಿ, ವಿನಯ್ ಗುರೂಜಿ, ಬಿ.ಕೆ. ಮೃತ್ಯುಂಜಯ, ಅರಳು ಮಲ್ಲಿಗೆ ಪಾರ್ಥಸಾರಥಿ, ಉದ್ಘಾಟನೆ: ಕೆ.ಎಚ್. ಮುನಿಯಪ್ಪ, ದಿನೇಶ್ ಗುಂಡೂರಾವ್, ಕೃಷ್ಣ ಬೈರೇಗೌಡ, ಬೈರತಿ ಸುರೇಶ್, ಆಯೋಜನೆ: ಗ್ಲೋಬಲ್ ಯೋಗಾ ಸಮ್ಮಿಟ್, ಸ್ಥಳ: ಡಾ. ಬಾಬು ರಾಜೇಂದ್ರಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣ, ಜಿಕೆವಿಕೆ ಆವರಣ, ಬೆಳಿಗ್ಗೆ 10

ನಿಮ್ಹಾನ್ಸ್ 28ನೇ ಘಟಿಕೋತ್ಸವ: ಅತಿಥಿಗಳು: ನಿರ್ಮಲಾ ಸೀತಾರಾಮನ್, ಡಾ. ಶರಣಪ್ರಕಾಶ ಪಾಟೀಲ, ಡಾ. ಪ್ರತಿಮಾ ಮೂರ್ತಿ, ಆಯೋಜನೆ: ನಿಮ್ಹಾನ್ಸ್, ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಸಂಜೆ 5

'ಚೂಡಾಮಣಿ' ಯಕ್ಷಗಾನ ಪ್ರದರ್ಶನ: ಹಿಮ್ಮೇಳದ ಭಾಗವತರು: ಬಾಲಕೃಷ್ಣ ಹಿಳ್ಳೋಡಿ, ನಂದನ್ ಹೆಗಡೆ ದಂಟಕಲ್, ಮದ್ದಳೆ: ರಾಘವೇಂದ್ರ ಹಂಡ್ರಮನೆ, ಚೆಂಡೆ: ಆಗ್ನೇಯ ಭಟ್ ಕ್ಯಾಸನೂರು, ಮುಮ್ಮೇಳ: ರಾವಣ: ರವಿ ಐತುಮನೆ, ದೂತ: ಸುಜಯ್ ಕೋಳಿಗಾರ್, ಹನುಮಂತ: ಚಂದನ್ ಕಲಾಹಂಸ, ಸೀತೆ: ಕೃಷ್ಣಕುಮಾರ್ ನೆಗಳಗುಳಿ, ಸರಮೆ: ಸ್ನೇಹಾ ಡಿ.ಎಸ್., ಲಂಕಿಣಿ: ಯಶಸ್ ನಗರ, ಜಾಂಬವ: ಮನೋಜ್ ಭಟ್ ಏಳಗದ್ದೆ, ಆಯೋಜನೆ: ಮಾರುತಿ ಮಂದಿರ ಭಕ್ತ ಮಂಡಳಿ, ನಿರ್ಮಾಣ್ ಯಕ್ಷಬಳಗ, ಸ್ಥಳ: ಮಾರುತಿ ದೇವಸ್ಥಾನ, ವಿಜಯನಗರ, ಸಂಜೆ 5

ಬುದ್ಧಜ್ಯೋತಿ ಬಡಾವಣೆಯ 14ನೇ ವರ್ಷದ ಕನ್ನಡ ಉತ್ಸವದ ಉದ್ಘಾಟನೆ: ಎಸ್.ಆರ್. ವಿಶ್ವನಾಥ್, ಅಧ್ಯಕ್ಷತೆ: ಬಿ. ನಟರಾಜ, ಅತಿಥಿಗಳು: ಗಿರಿಜಾಶಾಸ್ತ್ರಿ, ಆರ್. ಮಂಜುನಾಥ್, ಕೆ. ಮುರಳೀಧರ, ರಾಮಮೂರ್ತಿ, ಸ್ಥಳ: ಬುದ್ಧಜ್ಯೋತಿ ಬಡಾವಣೆ, ಚಿಕ್ಕಬಿದರಕಲ್ಲು, ಸಂಜೆ 6

'ನಾದ ಸಂಭ್ರಮ' ಸಂಗೀತ ಕಛೇರಿ: ಪ್ರಸ್ತುತಿ: ಟಿ.ಎಸ್. ಶ್ರೀಕೃಷ್ಣ ಮೋಹನ್, ಟಿ.ಎಸ್. ರಾಮ್ ಕುಮಾರ್ (ತ್ರಿಚೂರ್ ಸಹೋದರರು), ಆಯೋಜನೆ: ನಡತೂರ್ ಫೌಂಡೇಷನ್, ಸ್ಥಳ: ಮಂಗಲ ಮಂಟಪ ಸಭಾಂಗಣ, ಎನ್‌ಎಂಕೆಆರ್‌ವಿ ಆವರಣ, ಸಂಜೆ 6.30ರಿಂದ

ಹರಿದಾಸ ಮಂಜರಿ: ಗಾಯನ: ಬಿ. ಸಂಗೀತಾ, ಮೃದಂಗ: ಬಾಲಸುಬ್ರಹ್ಮಣ್ಯಂ, ಕೀ–ಬೋರ್ಡ್: ಕುಮಾರ್, ತಬಲಾ: ಅಭಿಜಿತ್, ಜಂಬೆ: ಕೃಷ್ಣಕುಮಾರ್, ಆಯೋಜನೆ ಮತ್ತು ಸ್ಥಳ: ಕಂಬದ ನರಸಿಂಹಸ್ವಾಮಿ ದೇವಸ್ಥಾನದ ಆವರಣ, ತ್ಯಾಗರಾಜನಗರ, ಸಂಜೆ 6.30

ಡಾ.ಬಿ.ಆರ್. ಅಂಬೇಡ್ಕರ್ ಪರಿನಿಬ್ಬಾಣ ದಿನ: ಅತಿಥಿಗಳು: ಸಿದ್ದರಾಮಯ್ಯ, ಜಿ. ಪರಮೇಶ್ವರ, ಎಚ್.ಸಿ. ಮಹದೇವಪ್ಪ, ಸತೀಶ್ ಜಾರಕಿಹೊಳಿ, ಆಯೋಜನೆ: ಕರ್ನಾಟಕ ರಾಜ್ಯ ಸಂವಿಧಾನ ಬಳಗ, ಸ್ಥಳ: ಶೃಂಗಾರ ಪ್ಯಾಲೇಸ್, ಎಂಟನೇ ಗೇಟ್, ಅರಮನೆ ಮೈದಾನ, ಬೆಳಿಗ್ಗೆ 10

ಡಾ.ಬಿ.ಆರ್. ಅಂಬೇಡ್ಕರ್ ಪರಿನಿಬ್ಬಾಣ ದಿನದ ಅಂಗವಾಗಿ ಬೃಹತ್ ಕಾಲ್ನಡಿಗೆ ಜಾಥಾ: ನೇತೃತ್ವ: ಎಚ್. ಮಾರಪ್ಪ, ಆಯೋಜನೆ: ದಲಿತ ಸಂಘರ್ಷ ಸಮಿತಿ, ಜಾಥಾ ಪ್ರಾರಂಭವಾಗುವ ಸ್ಥಳ: ಯಲಹಂಕ ಉಪನಗರ ಮದರ್ ಡೈರಿ ವೃತ್ತದಿಂದ, ಬೆಳಿಗ್ಗೆ 10.30

ಡಾ.ಬಿ.ಆರ್. ಅಂಬೇಡ್ಕರ್ ಮಹಾ ಪರಿನಿಬ್ಬಾಣ ದಿನ: ಉದ್ಘಾಟನೆ: ಕೆ. ಶಿವಕುಮಾರ್, ಅತಿಥಿ: ಚ.ಹ. ರಘುನಾಥ, ಅಧ್ಯಕ್ಷತೆ: ಬಿ. ರಮೇಶ್, ಆಯೋಜನೆ: ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 11

ಡಾ.ಬಿ.ಆರ್. ಅಂಬೇಡ್ಕರ್ ಮಹಾ ಪರಿನಿಬ್ಬಾಣ ದಿನ, ಡಾ. ಅಂಬೇಡ್ಕರ್ ಪ್ರಶಸ್ತಿ ಪ್ರದಾನ: ರಾಮಲಿಂಗಾರೆಡ್ಡಿ, ಪ್ರಶಸ್ತಿ ಸ್ವೀಕರಿಸುವವರು: ಎಂ. ವೆಂಕಟಸ್ವಾಮಿ, ಅತಿಥಿಗಳು: ಎನ್. ಮೂರ್ತಿ, ಕೆ.ವಿ. ಬಾಲಕೃಷ್ಣ, ಗೊಲ್ಲಹಳ್ಳಿ ಶಿವಪ್ರಸಾದ್, ವಡ್ಡಗೆರೆ ನಾಗರಾಜಯ್ಯ, ಆಯೋಜನೆ: ದಲಿತ ಸಂರಕ್ಷ ಸಮಿತಿ, ಸ್ಥಳ: ಪುರಭವನ, ಸಂಜೆ 4.30

ಡಾ.ಬಿ.ಆರ್. ಅಂಬೇಡ್ಕರ್ ಪರಿನಿಬ್ಬಾಣ ದಿನದ ಅಂಗವಾಗಿ 'ಸಂವಿಧಾನದ ಬೆಳಕು ಉಳಿಸಿ-ಅಸಮಾನತೆಯ ಕತ್ತಲನ್ನು ಅಳಿಸಿ': ಭಾಗವಹಿಸುವವರು: ಮಾವಳ್ಳಿ ಶಂಕರ್, ಇಂದಿರಾ ಕೃಷ್ಣಪ್ಪ, ಕಾರಳ್ಳಿ ಶ್ರೀನಿವಾಸ್, ಸುಬ್ಬು ಹೊಲೆಯಾರ್, ಜಿಗಳ ಶ್ರೀರಾಮ್, ಮಣಿಪಾಲ್ ರಾಜಪ್ಪ, ನಿರ್ಮಲಾ, ಸಂಪಂಗಿರಾಮ, ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿಯ ಮುಂಭಾಗ, ವಿಧಾನಸೌಧ, ಸಂಜೆ 6




ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಹೈಕೋರ್ಟ್ ನ್ಯಾಯಮೂರ್ತಿ ಎಂ.ಐ.ಅರುಣ್ ಮೌಖಿಕ ಅಭಿಮತ

ಧಾರ್ಮಿಕ ನಂಬಿಕೆ ಅಭಿವೃದ್ಧಿ ಅಳತೆಗೋಲಲ್ಲ...

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಜ್ಞಾನ, ತಂತ್ರಜ್ಞಾನ, ತರ್ಕ, ವೈಜ್ಞಾನಿಕ ಮನೋಭಾವಗಳು ದೇಶದ ಅಭಿವೃದ್ಧಿಗೆ ಕಾರಣ ಆಗಿವೆಯೇ ವಿನಃ ಧಾರ್ಮಿಕ ನಂಬಿಕೆಗಳಲ್ಲ' ಎಂದು ಹೈಕೋರ್ಟ್ ಪ್ರಕರಣವೊಂದರ ವಿಚಾರಣೆ ವೇಳೆ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿದೆ.



ನ್ಯಾಯಮೂರ್ತಿ ಎಂ.ಐ.ಅರುಣ್

'ನನ್ನ ವಿರುದ್ಧ ಶೇಷಾದ್ರಿಪುರಂ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ 'ಆಜ್ ತಕ್' ಹಿಂದಿ ಸುದ್ದಿವಾಹಿನಿ ಮತ್ತು ಅದರ ಮುಖ್ಯ ಸಂಪಾದಕ ಸುಧೀರ್ ಚೌಧರಿ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಕರಣದ ಪ್ರತಿವಾದಿಯಾಗಿರುವ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ಮಂಡಳಿಯ ಸಹಾಯಕ ಆಡಳಿತಾಧಿಕಾರಿ ಎಸ್.ಶಿವಕುಮಾರ್ ಪರ ಹೈಕೋರ್ಟ್ ವಕೀಲ ಎಸ್. ಬಾಲನ್, 'ಅಲ್ಪಸಂಖ್ಯಾತ ಸಮುದಾಯಕ್ಕೆ ಸರ್ಕಾರ ರೂಪಿಸಿರುವ ನೀತಿಯ ಮೇಲೆ ಚರ್ಚೆಯಾದರೆ ಆಕ್ಷೇಪವಿಲ್ಲ. ಆದರೆ, ಈ ಪ್ರಕರಣ ದಲ್ಲಿ ಸುದ್ದಿ ವಿಶ್ಲೇಷಣೆಯ ನೆಪದಲ್ಲಿ ಪ್ರಚೋದನೆ ನೀಡಲಾಗಿದೆ. ಒಂದು ಸಮುದಾಯವನ್ನು ರಾಕ್ಷಸೀಕರಿಸಲಾಗಿದ್ದು, ದ್ವೇಷ ಹರಡುವ ಪ್ರಯತ್ನ ಮಾಡಲಾಗಿದೆ' ಎಂದು ಆಕ್ಷೇಪಿಸಿದರು.

'ಇಡೀ ಕಾರ್ಯಕ್ರಮದಲ್ಲಿ ಒಂದು ನಿರ್ದಿಷ್ಟ ಸಮುದಾಯವನ್ನು ಹೇಗೆ ಬಿಂಬಿಸಲಾಗಿದೆ ಎಂಬುದನ್ನು ನ್ಯಾಯಾಲಯ ಪರಿಶೀಲಿಸಬೇಕು. ವಕ್ಫ್ ಮಂಡಳಿ... ಇತ್ಯಾದಿ ವಿಚಾರಗಳ ಬಗ್ಗೆ ಮಾತನಾಡಲಾಗಿದೆ. ಪ್ರಜಾಪ್ರಭುತ್ವದಲ್ಲಿ ಪ್ರಚೋದನೆ ಒಪ್ಪಿತವೇ? ಒಂದು ಸಮುದಾಯದ ವಿರುದ್ಧ ದ್ವೇಷ ಕಾರಬಹುದೇ' ಎಂದು ಪ್ರಶ್ನಿಸಿದರು.

ಇದಕ್ಕೆ ನ್ಯಾಯಪೀಠ, 'ಇಂದು ರಾಜಕೀಯ ಪಕ್ಷಗಳು ಓಲೈಕೆಯ ಧೋರಣೆ ಪ್ರದರ್ಶಿಸುತ್ತಿವೆ. ಸಾಮಾನ್ಯ ಜನರಿಗೆ ಅನ್ನ, ಆಹಾರ, ಬಟ್ಟೆ ಮುಖ್ಯವೇ ವಿನಃ ಧಾರ್ಮಿಕ ಮೂಲಭೂತವಾದವಲ್ಲ' ಎಂದು ಹೇಳಿತು.

'ಸಮುದಾಯದ ಆಧಾರದಲ್ಲಿ ತಾರತಮ್ಯ ಮಾಡಬೇಕು ಎಂಬುದೇ ನಮ್ಮ ಮಾನಸಿಕತೆಯಾಗಿದೆ. ಇದೇ ಕಾರಣಕ್ಕೆ, ಬೇರೆಲ್ಲವನ್ನೂ ಬಿಟ್ಟು ರಾಜಕಾರಣದಲ್ಲಿ ಜಾತಿ ನೋಡಿಕೊಂಡು ಸೀಟು ಹಂಚಿಕೆ ಮಾಡಲಾಗುತ್ತದೆ. ಸೀಟು ನೀಡುವಾಗ ಶೇ 50ಕ್ಕೂ ಹೆಚ್ಚಿನ ಪ್ರಮಾಣ ಜಾತಿ ಆಧಾರದಲ್ಲೇ ನೀಡಲಾಗುತ್ತದೆ' ಎಂದಿತು. 'ರಾಜಕಾರಣಿಗಳು ಭ್ರಷ್ಟರು, ಕ್ರಿಮಿನಲ್‌ಗಳು ಎನ್ನುತ್ತೇವೆ. ಆದರೆ, ಪ್ರಜಾಪ್ರಭುತ್ವದಲ್ಲಿ ನಮಗೆ ತಕ್ಕ ನಾಯಕರು ಸಿಗುತ್ತಾರೆ. ಇಲ್ಲಿ ಯಥಾ ಪ್ರಜಾ, ತಥಾ ರಾಜ. ಈಸ್ಟ್ ಇಂಡಿಯಾ ಕಂಪನಿಯ ಕೆಲವೇ ಕೆಲವು ಸಾವಿರದಷ್ಟು ಸಿಬ್ಬಂದಿ ನಮ್ಮನ್ನು ವಸಹಾತುಶಾಹಿ ವ್ಯವಸ್ಥೆಯಲ್ಲಿ ಆಳಿದರು. ಏಕೆಂದರೆ, ನಮಗೆ ಭಾರತೀಯತೆ ಎಂಬುದೇ ತಿಳಿದಿರಲಿಲ್ಲ. ಅದು ನಮ್ಮ ಅರಿವಿಗೆ ಬಂದಕೂಡಲೇ ಬ್ರಿಟಿಷರು ದೇಶದಿಂದ ಕಾಲ್ಕಿತ್ತರು. ಈಗ ನಾವು ಕಂಪನಿ, ಕಾರ್ಪೊರೇಟೀಕರಣದ ಆಧುನಿಕ ವಸಹಾತುಕರಣ ಶತಮಾನದಲ್ಲಿದ್ದೇವೆ. ಆದರೆ, ಪುನಃ ಹಳೆಯ ಹವ್ಯಾಸಗಳಿಗೆ ಮರಳುತ್ತಿದ್ದೇವೆ' ಎಂದು ಬೇಸರ ವ್ಯಕ್ತಪಡಿಸಿತು.

ಶಾಲೆಗೆ ಲೋಕಾಯುಕ್ತ ದಾಳಿಯ ವೇಳೆ ಅಕ್ರಮ ಪತ್ತೆ

‘ಲ್ಯಾಪ್‌ಟಾಪ್: ಭಾರಿ ಅಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ನಗರ ವ್ಯಾಪ್ತಿಯ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಲ್ಯಾಪ್‌ಟಾಪ್, ಸ್ಮಾರ್ಟ್ ಎಲ್‌ಇಡಿ ಬೋರ್ಡ್, ಎಲ್‌ಇಡಿ ಪ್ರೊಜೆಕ್ಟರ್ ಪೂರೈಕೆಯಲ್ಲಿ ಭಾರಿ ಅಕ್ರಮ ನಡೆದಿದೆ’ ಎಂದು ಲೋಕಾಯುಕ್ತ ಸಂಸ್ಥೆಯು ತಿಳಿಸಿದೆ.

ಸಾರ್ವಜನಿಕರು ಮತ್ತು ಶಿಕ್ಷಣ ಇಲಾಖೆಯ ಸಿಬ್ಬಂದಿಯಿಂದ ಬಂದಿದ್ದ ಹಲವು ದೂರುಗಳ ಆಧಾರದಲ್ಲಿ ಲೋಕಾಯುಕ್ತ ಸಂಸ್ಥೆಯು ಪ್ರಕರಣ ದಾಖಲಿಕೊಂಡಿತ್ತು. ತನಿಖೆಯ ಭಾಗವಾಗಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರ ನೇತೃತ್ವದಲ್ಲಿ ಲೋಕಾಯುಕ್ತ ಪೊಲೀಸರು, ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರು, ಇಬ್ಬರು ಉಪ ನಿರ್ದೇಶಕರು ಮತ್ತು 12 ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಮೇಲೆ ಸೋಮವಾರ ದಾಳಿ ನಡೆಸಿದ್ದರು.

‘ಮಾದರಿ ಪ್ರಾಥಮಿಕ ಶಾಲೆ ಮತ್ತು ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ (ಕೆಪಿಎಸ್) ಲ್ಯಾಪ್‌ಟಾಪ್, ಸ್ಮಾರ್ಟ್ ಎಲ್‌ಇಡಿ ಬೋರ್ಡ್, ಎಲ್‌ಇಡಿ ಪ್ರೊಜೆಕ್ಟರ್, ಯುಪಿಎಸ್ ಇನ್ವರ್ಟರ್ ಮತ್ತು ಬ್ಯಾಟರಿಗಳ ಪೂರೈಕೆಗೆ 2025ರ ಏಪ್ರಿಲ್‌ನಲ್ಲಿ ಟೆಂಡರ್ ಕರೆಯಲಾಗಿತ್ತು. ಈ ಸಾಮಗ್ರಿಗಳನ್ನು ಶಾಲೆಗಳಿಗೆ ಪೂರೈಕೆ ಮಾಡಲಾಗಿದೆ. ಆದರೆ ಟೆಂಡರ್ ದಾಖಲೆಗಳಲ್ಲಿರುವ ತಾಂತ್ರಿಕ ವಿವರಗಳಿಗೂ, ಶಾಲೆಗಳಿಗೆ ಪೂರೈಸಿರುವ ಸಾಮಗ್ರಿಗಳ ತಾಂತ್ರಿಕ ವಿವರಗಳು ಪರಸ್ಪರ ತಾಳೆಯಾಗುತ್ತಿಲ್ಲ’ ಎಂದು ಲೋಕಾಯುಕ್ತವು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

‘ಶಾಲೆಗಳಿಗೆ ಪೂರೈಸಲಾಗಿರುವ ಈ ಎಲ್ಲ ಸಾಮಗ್ರಿಗಳಿಗೆ ಪಾವತಿ ಮಾಡಲಾಗಿರುವ ಮೊತ್ತ ಮತ್ತು ಅದೇ ಸಾಮಗ್ರಿಗಳಿಗೆ ಮಾರುಕಟ್ಟೆಯಲ್ಲಿ ಈಗಿರುವ ಬೆಲೆಯನ್ನು ಪರಿಶೀಲಿಸಲಾಯಿತು. ಪ್ರತಿ ಲ್ಯಾಪ್‌ಟಾಪ್‌ಗೆ ಮಾರುಕಟ್ಟೆ ದರಕ್ಕಿಂತ ₹10,000, ಯುಪಿಎಸ್ ಸಿಸ್ಟಂಗೆ ₹30,000–₹40,000, ಎಲ್‌ಇಡಿ ಸ್ಮಾರ್ಟ್ ಟಿ.ವಿಗೆ ₹15,000 ಹೆಚ್ಚು ಪಾವತಿ ಮಾಡಲಾಗಿದೆ. ಬೆಂಗಳೂರು ಉತ್ತರ ಉಪ ನಿರ್ದೇಶಕರ ಕಚೇರಿ ವ್ಯಾಪ್ತಿಯಲ್ಲಿ 1,438 ಶಾಲೆಗಳಿವೆ’ ಎಂದು ವಿವರಿಸಿದೆ.

‘ಶಾಲೆಯಲ್ಲಿ ಲ್ಯಾಪ್‌ಟಾಪ್ ಇಲ್ಲ’

‘ಜಾಲಹಳ್ಳಿ ಕೆಪಿಎಸ್ ಶಾಲೆಗೆ ಪೂರೈಸಲಾದ ಲ್ಯಾಪ್‌ಟಾಪ್‌ಗಳು ಶಾಲೆಯಲ್ಲಿ ಇಲ್ಲವೇ ಇಲ್ಲ’ ಎಂದು ಲೋಕಾಯುಕ್ತವು ತಿಳಿಸಿದೆ.

ಶಾಲೆಗೆ ಪೂರೈಕೆಯಾಗಿರುವ ಎಲೆಕ್ಟ್ರಾನಿಕ್ಸ್ ಸಾಮಗ್ರಿಗಳನ್ನು ತೋರಿಸುವಂತೆ ಜಾಲಹಳ್ಳಿ ಕೆಪಿಎಸ್ ಶಾಲೆಯ ಮುಖ್ಯ ಶಿಕ್ಷಕಿ ಅವರಿಗೆ ಲೋಕಾಯುಕ್ತರು ಕರೆ ಮಾಡಿ ಸೂಚಿಸಿದ್ದರು. ಆದರೆ, ಆ ಶಿಕ್ಷಕಿ ಅವರು ಹಲವು ಗಂಟೆಗಳ ನಂತರ ವಿಡಿಯೊ ಕಾಲ್ ಸಂಪರ್ಕಕ್ಕೆ ಬಂದು ಯುಪಿಎಸ್, ಸ್ಮಾರ್ಟ್ ಎಲ್‌ಇಡಿ ಟಿವಿ ಮತ್ತು ಪ್ರೊಜೆಕ್ಟರ್‌ಗಳನ್ನು ಮಾತ್ರವೇ ತೋರಿಸಿದರು. ಹಲವು ಬಾರಿ ಸೂಚಿಸಿದ ನಂತರವೂ ಲ್ಯಾಪ್‌ಟಾಪ್‌ಗಳನ್ನು ತೋರಿಸಲಿಲ್ಲ ಎಂದು ಸಂಸ್ಥೆಯು ಮಾಹಿತಿ ನೀಡಿದೆ. ಬೇರೆ ಶಾಲೆಗಳಲ್ಲೂ ಇದೇ ಸ್ಥಿತಿ ಇರುವ ಸಾಧ್ಯತೆ ಇದೆ. ವಿಸ್ತೃತ ತನಿಖೆಯ ನಂತರ ಅಕ್ರಮದ ಪ್ರಮಾಣ ಗೊತ್ತಾಗಲಿದೆ ಎಂದು ಲೋಕಾಯುಕ್ತವು ಹೇಳಿದೆ.

ಅಕ್ರಮದ ಪರಿ

- ಟೆಂಡರ್ ದಾಖಲೆಯಲ್ಲಿ ಸೂಚಿಸಿರುವುದಕ್ಕಿಂತ ಕಡಿಮೆ ಸಂಗ್ರಹಣಾ ಸಾಮರ್ಥ್ಯವಿರುವ (ಇಂಟರ್ನಲ್ ಮೆಮೊರಿ) ಎಲ್‌ಇಡಿ ಸ್ಮಾರ್ಟ್ ಟಿವಿಗಳನ್ನು ಪೂರೈಸಲಾಗಿದೆ
- ಶಾಲೆಗಳಿಗೆ ಪೂರೈಸಲಾದ ಈ ಎಲ್ಲ ಸಾಮಗ್ರಿಗಳ ವಾರಂಟಿ ವಿವರಕ್ಕೆ ಸಂಬಂಧಿಸಿದ ದಾಖಲೆಗಳು ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಬಳಿ ಲಭ್ಯವಿಲ್ಲ ಮತ್ತು ಸಾಮಗ್ರಿಗಳ ಮೇಲೂ ನಮೂದಿಸಿಲ್ಲ. ವಾಸ್ತವದಲ್ಲಿ ವಾರಂಟಿ ದಾಖಲೆಗಳನ್ನು ಪಡೆದುಕೊಂಡೇ ಇಲ್ಲ
- ಶಾಲೆಗಳಿಗೆ ಎಲ್ಲ ಸಾಮಗ್ರಿಗಳನ್ನು ಪೂರೈಸಲಾಗಿದೆ ಎಂಬುದಕ್ಕೆ ಮುಖ್ಯ ಶಿಕ್ಷಕರಿಂದ ದೃಢೀಕರಣ ಪತ್ರ ಪಡೆದುಕೊಂಡಿಲ್ಲ. ಇದನ್ನು ಖಚಿತಪಡಿಸಿಕೊಳ್ಳಲು ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡಿಯೇ ಇಲ್ಲ

‘ಗ್ರಾಮೀಣ ಶಾಲೆಗೆ ಧಕ್ಕೆ ಆಗದು’

ಪ್ರಜಾವಾಣಿ ವಾರ್ತೆ



ಮಧು ಬಂಗಾರಪ್ಪ

ನರಸಿಂಹರಾಜಪುರ (ಚಿಕ್ಕಮಗಳೂರು): ‘ಕೆಪಿಎಸ್ ಶಾಲೆಗಳಿಂದಾಗಿ ಗ್ರಾಮಾಂತರ ಪ್ರದೇಶ ದಲ್ಲಿ ಸರ್ಕಾರಿ ಶಾಲೆಗಳು ಮುಚ್ಚಿಹೋಗುತ್ತವೆ ಎಂಬುದು ತಪ್ಪು ಕಲ್ಪನೆ’ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

‘ಬರಗೂರು ರಾಮಚಂದ್ರಪ್ಪ ಅವರು ‘ಪ್ರಜಾವಾಣಿ’ಯಲ್ಲಿ ಬರೆದಿರುವ ಲೇಖನ ಓದಿದ್ದೇನೆ. ಕೆಪಿಎಸ್ ಶಾಲೆ ಸ್ಥಾಪನೆ ಮಾಡಿದಲ್ಲಿ ಯಾವುದೇ ಹಳ್ಳಿಯ ಸರ್ಕಾರಿ ಶಾಲೆ ಮುಚ್ಚುವುದಿಲ್ಲ. ಒಳ್ಳೆಯ ಶಾಲೆಗಳಿಗೆ ಹೆಚ್ಚಿನ ಅನುದಾನ ನೀಡುವುದೇ ತಪ್ಪೇ’ ಎಂದು ಅವರು ಪ್ರಶ್ನಿಸಿದರು.

ಎಸ್‌ಎಸ್‌ಎಲ್‌ಸಿ ಉತ್ತೀರ್ಣದ ಅಂಕವನ್ನು 33ಕ್ಕೆ ಇಳಿಸಿದ್ದರಿಂದ ಶಿಕ್ಷಣದ ಗುಣಮಟ್ಟ ಕುಗ್ಗದು. ಅಂಕ ಇಳಿಕೆಗೂ ಶಿಕ್ಷಣದ ಗುಣಮಟ್ಟಕ್ಕೂ ಸಂಬಂಧವಿಲ್ಲ. 625ಕ್ಕೆ 625 ಅಂಕ ಪಡೆಯುವ ವಿದ್ಯಾರ್ಥಿಗಳೂ ಇರುತ್ತಾರೆ. ಕೇರಳ, ಮಿಜೋರಾಂನಲ್ಲಿ ಎಸ್‌ಎಸ್‌ಎಲ್‌ಸಿ ಉತ್ತೀರ್ಣದ ಅಂಕ 30 ಇದೆ ಎಂದರು.

‘ಕೇರಳದಲ್ಲಿ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ಬಹಳಷ್ಟು ವಿದ್ಯಾರ್ಥಿಗಳು ಕರ್ನಾಟಕ ದಲ್ಲಿ ಶುಶ್ರೂಷಕಿಯರ ಹುದ್ದೆಗೆ ಆಯ್ಕೆಯಾಗುತ್ತಿದ್ದಾರೆ. ರಾಜ್ಯದ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ಬೇಕಲ್ಲವೇ, ಉದ್ಯೋಗ ಕೊಡುವುದರಿಂದ ಕುಟುಂಬದ ನಿರ್ವಹಣೆ ಸುಲಭ’ ಎಂದು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಎಸ್‌ಎಸ್‌ಎಲ್‌ಸಿ; 3 ಬಾರಿಯೇ ಪರೀಕ್ಷೆ

ಶಿವಮೊಗ್ಗ: ‘ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ವಾರ್ಷಿಕ ಮೂರು ಬಾರಿಯೇ ನಡೆಯಲಿದೆ. ಅದನ್ನು ಎರಡು ಬಾರಿಗೆ ಇಳಿಸುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ’ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

‘ವಾರ್ಷಿಕ ಎರಡು ಪರೀಕ್ಷೆ ನಡೆಯಲಿದೆ ಎಂದು ಕೆಲ ಮಾಧ್ಯಮಗಳಲ್ಲಿ ಪ್ರಕಟವಾಗಿರುವುದು ವಿದ್ಯಾರ್ಥಿಗಳಲ್ಲಿ ಗೊಂದಲ ಮೂಡಿಸಿದೆ. ಇಂತಹ ವಿಷಯಗಳಲ್ಲಿ ಮಾಧ್ಯಮದವರು ಜವಾಬ್ದಾರಿಯಿಂದ ವರ್ತಿಸಬೇಕು. ಈ ಬಗ್ಗೆ ಅನಗತ್ಯ ಚರ್ಚೆಗಳು ಬೇಡ’ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪುತ್ರನೊಂದಿಗೆ ವೈದ್ಯೆ ಆತ್ಮಹತ್ಯೆ

ಶಿವಮೊಗ್ಗ: ನಗರದ ಅಶ್ವತ್ಥ ನಗರದ ನಿವಾಸಿ, ಸ್ತ್ರೀರೋಗ ತಜ್ಞೆ ಡಾ.ಜಯಶ್ರೀ ಹೊಮ್ಮರಡಿ (55) ಮತ್ತು ಅವ ಪುತ್ರ ಆಕಾಶ್ ಹೊಮ್ಮರಡಿ (34) ಶುಕ್ರವಾರ ಮನೆಯಲ್ಲಿ ಆತ್ಮಹತ್ಯೆ ಮಾಡಿ ಕೊಂಡಿದ್ದಾರೆ. ದಾವಣಗೆರೆ ಜಿಲ್ಲೆ ನ್ಯಾಮತಿಯ ಡಾ.ನಾಗರಾಜ ಹೊಮ್ಮರಡಿ ಕುಟುಂಬ ನಗರದಲ್ಲಿ ಆಸ್ಪತ್ರೆ ತೆರೆದಿತ್ತು. ಮಕ್ಕಳತಜ್ಞರಾಗಿದ್ದ ಡಾ.ನಾಗರಾಜ 10 ವರ್ಷದ ಹಿಂದೆ ಆತ್ಮಹತ್ಯೆ ಮಾಡಿಕೊಂಡಿದ್ದರು. ಪುತ್ರ ಆಕಾಶ್ ಅವರ ಪತ್ನಿ ನವ್ಯಶ್ರೀ 3 ವರ್ಷದ ಹಿಂದೆ ಅದೇ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು ಎಂದು ತಿಳಿದುಬಂದಿದೆ.

ವೃತ್ತಿಗಾಗಿ ಜಾಗೃತರಾಗಿ

‘ಮಹಿಳೆಯರ ಪಾಲಿನ ಅತಿ ದೊಡ್ಡ ವಿಮೆ ಎಂದರೆ ಅವರ ಅಂಡಾಣುಗಳನ್ನು ಸಂರಕ್ಷಿಸಿ ಇಟ್ಟುಕೊಳ್ಳುವುದು. ಆಗ ನೀವು ಆರ್ಥಿಕವಾಗಿ ಸ್ವಾವಲಂಬಿಯಾದ ಬಳಿಕವೇ ಮದುವೆಯಾಗಬಹುದು ಮತ್ತು ನೀವು ಬಯಸಿದಾಗ ಮಗು ಪಡೆಯಬಹುದು’– ತೆಲುಗು ನಟ ರಾಮ್‌ಚರಣ್ ತೇಜ ಅವರ ಪತ್ನಿ, ಉದ್ಯಮಿ ಉಪಾಸನಾ ಕೊನಿಡೇಲ, ಹೈದರಾಬಾದ್‌ನ ಐಐಟಿಯಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಇತ್ತೀಚೆಗೆ ಮಾಡಿದ ಭಾಷಣದಲ್ಲಿ ವ್ಯಕ್ತಪಡಿಸಿದ ಈ ಅಭಿಪ್ರಾಯ ಇದೀಗ ಬಹುಮುಖ್ಯವಾದ ಚರ್ಚೆಯೊಂದನ್ನು ಹುಟ್ಟುಹಾಕಿದೆ.

ಮಹಿಳಾ ಸಬಲೀಕರಣದ ದಿಸೆಯಲ್ಲಿ ಇಂತಹದ್ದೊಂದು ಕ್ರಮ ಅನಿವಾರ್ಯ ಎಂದು ಒಂದು ವರ್ಗ ಹೇಳುತ್ತಿದ್ದರೆ, ಜೈವಿಕ ಕ್ರಿಯೆಯು ನಿಮ್ಮ ವೃತ್ತಿಬದುಕನ್ನು ಅವಲಂಬಿಸಿರುವುದಿಲ್ಲ, ಹಾಗಾಗಿ, ಮದುವೆ, ಮಕ್ಕಳು ಎಲ್ಲ ಆಗಬೇಕಾದ ವಯಸ್ಸಿಗೆ ಆದರೇ ಚೆಂದ ಎಂದು ಇನ್ನೊಂದು ವರ್ಗ ಅಸಮಾಧಾನ ವ್ಯಕ್ತಪಡಿಸಿದೆ. ಆರ್ಥಿಕವಾಗಿ ಸಬಲರಾಗಿರುವ ಉಪಾಸನಾ ಅಂತಹವರು ಹೇಳುವುದು ಸುಲಭ, ಆದರೆ ಅಂಡಾಣುಗಳನ್ನು ಸಂರಕ್ಷಿಸಿ ಇಟ್ಟುಕೊಳ್ಳುವುದು ಆರ್ಥಿಕ ದೃಷ್ಟಿಯಿಂದ ಎಲ್ಲ ಹೆಣ್ಣುಮಕ್ಕಳಿಗೂ ಸಾಧ್ಯವಾಗದ ಮಾತು ಎನ್ನುವ ಅಭಿಪ್ರಾಯವೂ ಕೇಳಿಬಂದಿದೆ.

ಇದೇವೇಳೆ, ‘ಯಾರು ಬೇಗ ಮದುವೆಯಾಗಲು ಬಯಸಿದ್ದೀರಿ?’ ಎಂಬ ಉಪಾಸನಾ ಪ್ರಶ್ನೆಗೆ, ನೆರೆದಿದ್ದ ವಿದ್ಯಾರ್ಥಿಗಳಲ್ಲಿ ಹೆಣ್ಣುಮಕ್ಕಳಿಗಿಂತ ಗಂಡುಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ಕೈಎತ್ತಿದ್ದು ಕುತೂಹಲಕಾರಿಯಾಗಿದೆ. ‘ಮಹಿಳೆಯರು ಹೆಚ್ಚು ವೃತ್ತಿಕೇಂದ್ರಿತ ಆಗಿರುವುದು ಇದರಿಂದ ತಿಳಿಯುತ್ತದೆ. ಇದು ಪ್ರಗತಿಪರ ನವಭಾರತ’ ಎಂದು ಉಪಾಸನಾ ಹೇಳಿದ್ದಾರೆ.

23 ವರ್ಷಕ್ಕೆ ಮದುವೆಯಾಗಿದ್ದ ಉಪಾಸನಾ ಅವರಿಗೆ 34 ವರ್ಷದವರಾಗಿದ್ದಾಗ ಹೆಣ್ಣುಮಗು ಜನಿಸಿದ್ದು, ಈಗ ಅವರು ಮತ್ತೊಮ್ಮೆ ಗರ್ಭಿಣಿಯಾಗಿದ್ದಾರೆ. ಮದುವೆಯಾಗಿ ಬಹಳಷ್ಟು ವರ್ಷಗಳಾದರೂ ಮಕ್ಕಳಾಗದೇ ಇದ್ದ ಬಗ್ಗೆ ಕೆಲವರು ತಕರಾರು ಎತ್ತಿದ್ದಾಗ, ಮಗು ಪಡೆಯುವುದು ಬಿಡುವುದು ಅವರವರ ವೈಯಕ್ತಿಕ ವಿಷಯ ಎಂದು ಉಪಾಸನಾ ತಿರುಗೇಟು ನೀಡಿದ್ದರು.


ಉಪಾಸನಾ ಕೊನಿಡೇಲ



ಅಂಡಾಣು ಎಂಬ ವಿಮೆ!

ತಾನು ಇಚ್ಛಿಸಿದಾಗಷ್ಟೇ ಮಗು ಹೊಂದುವ ಸ್ವಾತಂತ್ರ್ಯ ತನಗಿರಬೇಕು ಎಂದು ಆಧುನಿಕ ಮಹಿಳೆ ಬಯಸುವುದು ಸಹಜ. ವಯೋಸಹಜವಾದ ಜೈವಿಕ ಬದಲಾವಣೆಗಳ ಮುಂದೆ ಮನುಷ್ಯಮಾತ್ರರಾದವರು ತಲೆಬಾಗಲೇಬೇಕು ಎನ್ನುವುದೂ ಅಷ್ಟೇ ನಿಜ. ಆದರೆ ಅತ್ಯಾಧುನಿಕ ತಂತ್ರಜ್ಞಾನದ ಮೂಲಕ ಅಂಡಾಣುಗಳನ್ನು ಸಂರಕ್ಷಿಸಿ ಇಟ್ಟುಕೊಂಡು, ಇಚ್ಛಾಹರಿಗೆಯಿಂದ ಕಾಲಚಕ್ರಕ್ಕೇ ಸಡ್ಡು ಹೊಡೆಯುವ ಇರಾದೆ ಈಗಿನ ಮಹಿಳೆಯದು.

• ಡಾ. ಶಾಂತಲ ಕುಮಾರಿ ಆರ್.



ಒಂದು ಹೆಣ್ಣುಮಗು ತನ್ನ ಜೀವಿತಾವಧಿಯಲ್ಲಿ ಹೊಂದುವ ಎಲ್ಲ ಅಂಡಾಣುಗಳೊಂದಿಗೇ ಜನಿಸಿರುತ್ತದೆ. ಅಂದರೆ, ಸುಮಾರು 10 ಲಕ್ಷದಿಂದ 20 ಲಕ್ಷದಷ್ಟು ಅಂಡಾಣುಗಳು ಆ ಮಗುವಿನಲ್ಲಿ ಇರುತ್ತವೆ. ಆದರೆ, ಮೊದಲ ಮುಟ್ಟಿನ ವೇಳೆಗೆ ಆಕೆಯ ಎರಡೂ ಅಂಡಾಶಯಗಳಲ್ಲಿ 40,000ದಷ್ಟು ಅಂಡಾಣುಗಳು ಮಾತ್ರ ಉಳಿದಿರುತ್ತವೆ. ವಯಸ್ಸಾಗುತ್ತಾ ಬಂದಂತೆ ಇವುಗಳ ಸಂಖ್ಯೆ ಸತತವಾಗಿ ಕಡಿಮೆಯಾಗುತ್ತಾ ಬರುತ್ತದೆ. ಆಕೆಗೆ 35-37 ವರ್ಷಗಳಾದ ನಂತರ ಇಳಿಕೆಯ ಪ್ರಮಾಣ ತೀವ್ರಗೊಳ್ಳುತ್ತದೆ. ಋತುಬಂಧ ಅಥವಾ ಮೆನೊಪಾಸ್ ಹಂತವನ್ನು (ಸರಾಸರಿ 45-47 ವರ್ಷ) ತಲುಪುವ ಹೊತ್ತಿಗೆ 1,000 ಅಂಡಾಣುಗಳಷ್ಟೇ ಅವಳಲ್ಲಿ ಉಳಿದುಕೊಂಡಿರುತ್ತವೆ!

ಹೀಗೆ ಅಂಡಾಣುಗಳು ಸಹಜವಾಗಿಯೇ ನಶಿಸಿ ಹೋಗುವುದರಿಂದ, ಮುಂದೊಂದು ದಿನ ಬೇಕಾದಾಗ ಉಪಯೋಗಿಸಿಕೊಳ್ಳುವ ಸಲುವಾಗಿ ಅವುಗಳನ್ನು ಸಂರಕ್ಷಿಸಿ ಇಡಲು ಅವಕಾಶ ಇರುತ್ತದೆ.

ಹಾಗಿದ್ದರೆ ಅಂಡಾಣುಗಳ ಸಂರಕ್ಷಣೆ ಹೇಗೆ? ಕ್ರಯೋ ಪ್ರಿಸರ್ವೇಶನ್ ಎನ್ನುವುದು ಜೈವಿಕ ವಸ್ತುಗಳನ್ನು ಅತ್ಯಂತ ಕಡಿಮೆ ತಾಪಮಾನದಲ್ಲಿ ಸಂರಕ್ಷಿಸುವ ಒಂದು ಪ್ರಕ್ರಿಯೆ. ಈ ತಂತ್ರಜ್ಞಾನದಿಂದ ಜೀವಕೋಶಗಳು ಕೊಳೆಯುವುದನ್ನು ತಡೆಗಟ್ಟಬಹುದು ಮತ್ತು ಅಂಗಾಂಶಗಳು ಜೈವಿಕ ಪ್ರಕ್ರಿಯೆಗೆ ಒಳಗಾಗದಂತೆ ಮಾಡಬಹುದು. ಅಂಡಾಣುಗಳನ್ನೂ ಇದೇ ಮಾದರಿಯ ಶೀತಲೀಕರಣ ವ್ಯವಸ್ಥೆಯ ಮೂಲಕ ಸಂರಕ್ಷಿಸಿ, ಅಗತ್ಯವಿದ್ದಾಗ ಉಪಯೋಗಿಸಬಹುದು!

ಅಂಡಾಣುಗಳ ಸಂರಕ್ಷಣೆಗೆ ಪಾಶ್ಚಾತ್ಯ ದೇಶಗಳಲ್ಲಿ ಇರುವಷ್ಟು ಬೇಡಿಕೆ ಸದ್ಯಕ್ಕೆ ಭಾರತದಲ್ಲಿ ಇಲ್ಲ. ಆದರೂ ಭಾರತೀಯ ಫಲವತ್ತತೆ ಉದ್ಯಮವು ₹ 25,000 ಕೋಟಿ ಮೌಲ್ಯದ್ದಾಗಿದೆ ಮತ್ತು ವಾರ್ಷಿಕವಾಗಿ ಇದು ಶೇ 15-20ರಷ್ಟು ಪ್ರಮಾಣದಲ್ಲಿ ಬೆಳೆಯುತ್ತಿದೆ. ಅಮೆರಿಕ ಮತ್ತು ಯುರೋಪಿನಲ್ಲಿ ಅಂಡಾಣುಗಳ ಸಂರಕ್ಷಣೆಯ ಸೌಲಭ್ಯವನ್ನು ಹೆಚ್ಚಾಗಿ ಕಾರ್ಪೊರೇಟ್ ಆರೋಗ್ಯ ರಕ್ಷಣಾ ಹೊಣೆಗಾರಿಕೆಯ ಭಾಗವಾಗಿ ಒದಗಿಸಲಾಗುತ್ತದೆ. ಉದಾಹರಣೆಗೆ, ಫೇಸ್‌ಬುಕ್ ಮತ್ತು ಆ್ಯಪಲ್‌ನಂತಹ ತಂತ್ರಜ್ಞಾನ ದೈತ್ಯ ಸಂಸ್ಥೆಗಳು ಇಂತಹದ್ದೊಂದು ಉಪಕ್ರಮಕ್ಕೆ ಮುಂದಾಗಿವೆ. ಭಾರತದಲ್ಲಿ ಖಾಸಗಿ ಫಲವತ್ತತೆ ಚಿಕಿತ್ಸಾಲಯಗಳು ಒಂದು ಜೀವನಶೈಲಿಯ ಆಯ್ಕೆ ಎಂಬಂತೆ ಇದನ್ನು ಬೆಂಬಲಿಸುತ್ತಿವೆ.

ಸದ್ಯ ಅಂಡಾಣುಗಳನ್ನು ಸಂರಕ್ಷಿಸಿಕೊಳ್ಳುತ್ತಿರುವ ಮಹಿಳೆಯರಲ್ಲಿ ಶೇ 40ರಷ್ಟು ಮಂದಿ ಅವಿವಾಹಿತ ವೃತ್ತಿಪರರು ಹಾಗೂ ಮಗುವನ್ನು ಹೆರುವಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿರುವ ವಿವಾಹಿತ ಮಹಿಳೆಯರಾಗಿದ್ದಾರೆ ಎಂಬ ವರದಿಗಳಿವೆ. ಪ್ರಸ್ತುತ ಇದಕ್ಕೆ ತಗಲುವ ವೆಚ್ಚವು ಆರ್ಥಿಕವಾಗಿ ಸಬಲರಾದ ನಗರದ ಮಹಿಳೆಯರಿಗಷ್ಟೇ ಕೈಗೆಟಕುವಂತಿದೆ. ಹೀಗಾಗಿ, ಗ್ರಾಮೀಣ ಜನಸಂಖ್ಯೆಗೆ ಈ ಸೇವೆ ಇನ್ನೂ ದೂರದ ಮಾತೇ ಆಗಿದೆ.

ಅಂಡಾಣು ಸಂರಕ್ಷಣೆಯು ಪ್ರತಿಷ್ಠೆ, ಫ್ಯಾಶನ್ ಅಥವಾ ಟ್ರೆಂಡ್ ಆಗಿದ್ದು, ಈ ಸಂಬಂಧದ ತಂತ್ರಜ್ಞಾನವನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂಬ ಟೀಕೆಗಳೂ ಇವೆ. ಭಾರತದಲ್ಲಿ ಮಹಿಳೆಯರಿಗೆ ಅಂಡಾಣುಗಳನ್ನು ಸಂರಕ್ಷಿಸಿಕೊಳ್ಳಲು ಅನುಮತಿಯೇನೋ ಇದೆ. ಆದರೆ ದಾನಿಯ ಅಂಡಾಣು ಮತ್ತು ಸರೊಗೆಸಿ (ಬಾಡಿಗೆ ಗರ್ಭಧಾರಣೆ) ಸುತ್ತಲಿನ ನಿಯಮಗಳು ಇನ್ನೂ ಕಠಿಣವಾಗಿಯೇ ಉಳಿದಿವೆ.

ಇದೆಲ್ಲದರ ನಡುವೆಯೂ ಶೈಕ್ಷಣಿಕ ಅಭಿಯಾನಗಳು ಮತ್ತು ಮಾಧ್ಯಮಗಳಲ್ಲಿ ಸಿಗುತ್ತಿರುವ ಪ್ರಚಾರವು ಅಂಡಾಣು ಸಂರಕ್ಷಣಾ ತಂತ್ರಜ್ಞಾನವನ್ನು ಮಾನ್ಯಗೊಳಿಸುತ್ತಿವೆ ಮತ್ತು ಈ ಸಂಬಂಧ ಜನಜಾಗೃತಿಯೂ ಹೆಚ್ಚುತ್ತಿದೆ. ಭವಿಷ್ಯದಲ್ಲಿ ಅಂಡಾಣು ಸಂರಕ್ಷಣಾ ಸೌಲಭ್ಯವನ್ನು ಆರೋಗ್ಯ ವಿಮಾ ಪ್ಯಾಕೇಜ್‌ಗಳಲ್ಲಿ ಸೇರ್ಪಡಿಸುವ ಸಂಭವವೂ ಇಲ್ಲದಿಲ್ಲ.

ಲೇಖಕಿ: ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ

ಎಷ್ಟು ಖರ್ಚಾಗುತ್ತದೆ?

- ಅಂಡಕೋಶಗಳನ್ನು ಪ್ರಚೋದಿಸಿ ಅಂಡಾಣುಗಳನ್ನು ಪಡೆಯಲು ಸರಾಸರಿ ₹ 1.2 ಲಕ್ಷದಿಂದ ₹ 2.5 ಲಕ್ಷ ಬೇಕಾಗಬಹುದು. ಜೊತೆಗೆ ವಾರ್ಷಿಕ ಸಂಗ್ರಹಣಾ ಶುಲ್ಕ ₹ 25,000–₹ 40,000 ಆಗುತ್ತದೆ. ಪಾಶ್ಚಿಮಾತ್ಯ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಈ ವೆಚ್ಚ ಕಡಿಮೆ.
- ಇದರ ಯಶಸ್ಸು ಮಹಿಳೆಯ ವಯಸ್ಸನ್ನು ಅವಲಂಬಿಸಿರುತ್ತದೆ. 35ನೇ ವಯಸ್ಸಿಗಿಂತ ಮೊದಲು ಅಂಡಾಣುಗಳನ್ನು ಸಂರಕ್ಷಿಸುವ ಮಹಿಳೆಯರಲ್ಲಿ ಯಶಸ್ವಿ ಗರ್ಭಧಾರಣೆಯ ಸಾಧ್ಯತೆ ಶೇ 50–60ರಷ್ಟಿದ್ದರೆ, ಆ ನಂತರದ ವರ್ಷಗಳಲ್ಲಿ ಈ ಪ್ರಮಾಣ ಕಡಿಮೆ ಆಗುತ್ತದೆ.

ಹೀಗಿರುತ್ತದೆ ಸಂರಕ್ಷಣೆ ವಿಧಾನ

- ಹಾರ್ಮೋನ್ ಚುಚ್ಚುಮದ್ದು ಕೊಡುವ ಮೂಲಕ ಹೆಚ್ಚು ಅಂಡಾಣುಗಳನ್ನು ಉತ್ಪಾದಿಸಲು ಅಂಡಾಶಯಗಳನ್ನು ಪ್ರಚೋದಿಸಲಾಗುತ್ತದೆ.
- ಅಂಡಾಣುಗಳನ್ನು ಸಹಜವಾಗಿ ಒಡೆಯಲು ಬಿಡದೆ, ಸೂಕ್ತ ಸಮಯಕ್ಕೆ ವೈದ್ಯರೇ ಅವುಗಳನ್ನು ಶರೀರದಿಂದ ಹೊರತೆಗೆಯುತ್ತಾರೆ. ಸ್ಕ್ಯಾನ್ ಮಾಡುತ್ತಾ ಸಣ್ಣ ಶಸ್ತ್ರಚಿಕಿತ್ಸೆಯ ಮೂಲಕ ಅಂಡಾಣುಗಳನ್ನು ಹೊರತೆಗೆಯಲಾಗುತ್ತದೆ. ಒಂದು ಬಾರಿ 10–18 ಅಂಡಾಣುಗಳನ್ನು ಸಂಗ್ರಹಿಸಬಹುದು.
- ಕ್ರಯೋ ಪ್ರಿಸರ್ವೇಶನ್‌ನ ಭಾಗವಾದ ವಿಟ್ರಿಫಿಕೇಶನ್ ಎಂಬ ಆಧುನಿಕ ಶೀತಲೀಕರಣ ತಂತ್ರಜ್ಞಾನದಿಂದ ಈ ಅಂಡಾಣುಗಳನ್ನು ಸಂರಕ್ಷಣೆ ಮಾಡಬಹುದು. ಈ ಮೊದಲು ಬೇರೆ ವಿಧಾನಗಳಿಂದ ಶೀತಲೀಕರಿಸಿ ಸಂರಕ್ಷಿಸುವ ಪ್ರಯತ್ನ ನಡೆದಿತ್ತು. ಆಗ ಅಂಡಾಣುಗಳ ಒಳಗೆ ಮಂಜುಗಡ್ಡೆಯ ಹರಳುಗಳು ಉತ್ಪತ್ತಿಯಾಗಿ, ಅಂಡಾಣುಗಳು ನಾಶವಾಗುತ್ತಿದ್ದವು. ಆದರೆ ವಿಟ್ರಿಫಿಕೇಶನ್ ತಂತ್ರಜ್ಞಾನದಿಂದ ಅಂಡಕೋಶದ ಸುತ್ತಲೂ ಗಾಜಿನ ಗೋಳದಂತೆ ಮಂಜುಗಡ್ಡೆ ನಿರ್ಮಾಣವಾಗುವುದರಿಂದ ಅಂಡಾಣುಗಳಿಗೆ ಹಾನಿಯಾಗುವುದಿಲ್ಲ.

4. ಸಂಗ್ರಹಿಸಿದ ಅಂಡಾಣುಗಳನ್ನು ಅಗತ್ಯ ಇರುವವರೆಗೆ ದ್ರವ ಸಾರಜನಕದಲ್ಲಿ (ಲಿಕ್ವಿಡ್ ನೈಟ್ರೋಜನ್) -196° ಸೆಂ.ನಲ್ಲಿ ಸಂಗ್ರಹಿಸಿ ಇಡಲಾಗುತ್ತದೆ.

- ಮಹಿಳೆ ಗರ್ಭ ಧರಿಸಲು ನಿರ್ಧರಿಸಿದಾಗ, ಅಂಡಾಣುಗಳನ್ನು ಹೊರತೆಗೆದು, ಹಿಮವನ್ನು ಕರಗಿಸಿ, ಪ್ರನಾಳ ಶಿಶುಗಳನ್ನು ರೂಪಿಸುವ ವಿಧಾನದಲ್ಲಿ ಅಂಡಾಣು ಮತ್ತು ವೀರ್ಯಾಣುಗಳನ್ನು ಪ್ರಯೋಗಾಲಯದಲ್ಲಿ ಕೃತಕವಾಗಿ ಬೆಸೆಯುವ ಮೂಲಕ ಫಲವತ್ತಾಗಿಸಲಾಗುತ್ತದೆ.
- ಹೀಗೆ ಕೃತಕವಾಗಿ ಫಲವತ್ತಾಗಿಸಿದ ಭ್ರೂಣವನ್ನು ಸೂಕ್ತ ಸಮಯಕ್ಕೆ ತಾಯಿಯ ಗರ್ಭದಲ್ಲಿ ಇರಿಸಲಾಗುತ್ತದೆ.

ಯಾರಿಗೆಲ್ಲ ಉಪಯೋಗ?

ವೈದ್ಯಕೀಯ ಕಾರಣ

- ಕ್ಯಾನ್ಸರ್ ರೋಗಿಗಳಿಗೆ ಕಿಮೊಥೆರಪಿ ಅಥವಾ ರೇಡಿಯೊಥೆರಪಿಯಂತಹ ವಿಕಿರಣ ಚಿಕಿತ್ಸೆ ನೀಡಬೇಕಾಗುತ್ತದೆ. ಇದರಿಂದ ಅಂಡಾಶಯದಲ್ಲಿರುವ ಅಂಡಾಣುಗಳು ಶಾಶ್ವತವಾಗಿ ನಶಿಸಿ ಹೋಗುತ್ತವೆ. ಇಂತಹ ಮಹಿಳೆಯರು ಈ ತಂತ್ರಜ್ಞಾನದಿಂದ ಫಲವತ್ತತೆಯನ್ನು ಕಾಪಾಡಿಕೊಳ್ಳಬಹುದು.
- ಕೆಲವು ಮಹಿಳೆಯರಲ್ಲಿ ಅಂಡಾಶಯವು ಅಕಾಲಿಕವಾಗಿ, ಅಂದರೆ 20-40ರ ವಯಸ್ಸಿನಲ್ಲಿಯೇ ತನ್ನ ಕೆಲಸವನ್ನು ನಿಲ್ಲಿಸಿಬಿಡುತ್ತದೆ. ಆನುವಂಶೀಯತೆಯೂ ಒಳಗೊಂಡಂತೆ ಇದಕ್ಕೆ ಅನೇಕ ಕಾರಣಗಳಿರುತ್ತವೆ. ಇಂತಹವರು ಮುಂಜಾಗ್ರತೆಯಾಗಿ ಅಂಡಾಣುಗಳನ್ನು ಸಂರಕ್ಷಿಸಿ ಇಟ್ಟುಕೊಳ್ಳಬಹುದು.

ಸಾಮಾಜಿಕ ಕಾರಣ

- ವೃತ್ತಿಪರ ಬೆಳವಣಿಗೆಯ ಮೇಲೆ ಗಮನ ಕೇಂದ್ರೀಕರಿಸಲು ಅನೇಕ ಮಹಿಳೆಯರು ಮದುವೆ ಮತ್ತು ತಾಯ್ತನ ಹೊಂದುವುದನ್ನು ವಿಳಂಬ ಮಾಡುತ್ತಿದ್ದಾರೆ.
- ಭಾರತದ ನಗರಗಳಲ್ಲಿ ಪ್ರಸ್ತುತ ಮದುವೆಯ ಸರಾಸರಿ ವಯಸ್ಸು (30 +) ಹೆಚ್ಚುತ್ತಲೇ ಇದೆ. ಇದು ಫಲವತ್ತತೆಯ ಬಗೆಗಿನ ಕಾಳಜಿಯನ್ನು ಹೆಚ್ಚಿಸುತ್ತದೆ.
- ಸಂತಾನೋತ್ಪತ್ತಿಯ ಹಕ್ಕುಗಳು ಮತ್ತು ಆಯ್ಕೆಗಳ ಬಗ್ಗೆ ಅರಿವು ಹೆಚ್ಚುತ್ತಿರುವ ಸಮಾಜದಲ್ಲಿ ಮಹಿಳೆಯರು ತಮ್ಮ ಸ್ವಾಯತ್ತತೆಗೆ ಹೆಚ್ಚು ಲಕ್ಷ್ಯ ನೀಡುತ್ತಿದ್ದಾರೆ.
- ಕೌಟುಂಬಿಕ ರಚನೆಗಳು ಬದಲಾಗುತ್ತಿವೆ; ಏಕಪೋಷಕ ಮಾತೃತ್ವವನ್ನು ಸಮಾಜ ಸ್ವೀಕರಿಸುತ್ತಿದೆ.



ಏನಿವರ ಬ್ಯೂಟಿ ಸೀಕ್ರೆಟ್?

ಕಾವ್ಯಾ ಶಾ, ನಟಿ, ಮಾಡೆಲ್

ಚರ್ಮ ಹಾಗೂ ಕೂದಲಿನ ಆರೋಗ್ಯಕ್ಕೆ ನಾವು ಏನು ತಿನ್ನುತ್ತೇವೆ, ಏನು ಕುಡಿಯುತ್ತೇವೆ ಅನ್ನುವುದು ಮುಖ್ಯವಾಗುತ್ತದೆ. ಚರ್ಮದ ಮೇಲೆ ಎಷ್ಟೇ ಲೋಷನ್, ಕ್ರೀಮ್‌ಗಳನ್ನು ಹಚ್ಚಿದರೂ ಅದು ಶೇ 20ರಷ್ಟು ಪರಿಣಾಮವನ್ನು ಮಾತ್ರ ಬೀರಬಲ್ಲದು. ಉಳಿದಂತೆ ನಾವು ಸೇವಿಸುವ ಆಹಾರದಲ್ಲಿ ಆರೋಗ್ಯವಿರುತ್ತದೆ.

ಮೊದಲಿಗೆ ನಾನು ಸಕ್ಕರೆ, ಬೆಲ್ಲ ಯಾವುದನ್ನೂ ಬಳಸುವುದಿಲ್ಲ. ಹಾಗೊಮ್ಮೆ ತಿನ್ನಲೇಬೇಕು ಎನ್ನುವ ಕಡುಬಯಕೆ ಶುರುವಾದರೆ ಒಂದು ಸ್ಕೂಪ್ ಐಸ್‌ಕ್ರೀಂ ಅನ್ನು ತಿಂಗಳಿಗೋ ಎರಡು ತಿಂಗಳಿಗೋ ಒಮ್ಮೆ ತಿನ್ನುತ್ತೇನೆ. ಕಾಫಿ, ಟೀ ಯಾವುದನ್ನೂ ಕುಡಿಯುವುದಿಲ್ಲ.

ಆ್ಯಂಟಿ ಆಕ್ಸಿಡೆಂಟ್ ಹೇರಳವಾಗಿರುವ ಗ್ರೀನ್ ಟೀಯನ್ನು ದಿನಕ್ಕೆ ನಾಲ್ಕು ಬಾರಿ ಕುಡಿಯುತ್ತೇನೆ. ಹಾಳಾದ ಚರ್ಮಕೋಶಗಳನ್ನು ಸರಿಪಡಿಸುವಲ್ಲಿ ಗ್ರೀನ್ ಟೀ ಮಹತ್ತರ ಪಾತ್ರವನ್ನು ವಹಿಸುತ್ತದೆ. ನನ್ನ ಊಟದ ತಟ್ಟೆಯಲ್ಲಿ ಬಗೆಬಗೆಯ ಹಣ್ಣು ಹಾಗೂ ತರಕಾರಿ ಹೆಚ್ಚಾಗಿ ಇರುವಂತೆ ನೋಡಿಕೊಳ್ಳುತ್ತೇನೆ. ನಿತ್ಯ 10ರಿಂದ 12 ಲೋಟ ನೀರನ್ನು ಕಡ್ಡಾಯವಾಗಿ ಕುಡಿಯುತ್ತೇನೆ. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಕನಿಷ್ಠ ಐದು ಲೋಟಗಳಷ್ಟು ನೀರು ಕುಡಿದಿರುತ್ತೇನೆ.

6–8 ಗಂಟೆ ಗಾಢ ನಿದ್ರೆ ಮಾಡುವುದು ಮುಖ್ಯವಾಗುತ್ತದೆ. ಉತ್ತಮ ನಿದ್ರೆ ಇಲ್ಲದೇ ಇದ್ದರೆ ಕಣ್ಣಿನ ಸುತ್ತ ಕಪ್ಪು ವರ್ತುಲ ಉಂಟಾಗುತ್ತದೆ. ಚರ್ಮ ಜೋತು ಬಿದ್ದ ಹಾಗೆ ಆಗುತ್ತದೆ. ನೆರಿಗೆಗಳು ಮೂಡಿ ಬೇಗ ವಯಸ್ಸಾದಂತೆ ಅನ್ನಿಸುತ್ತದೆ. ಮತ್ತೆ ಚರ್ಮ ಮೊದಲಿನಂತೆ ಆಗುವುದು ಕಷ್ಟ. ಹಾಗಾಗಿ, ಉತ್ತಮ ನಿದ್ರೆ ಕೂಡ ಚರ್ಮದ ಆರೋಗ್ಯವನ್ನು ಕಾಪಾಡುತ್ತದೆ.

ಬೆಳಿಗ್ಗೆ ಎದ್ದ ತಕ್ಷಣ ಖಾಲಿ ಹೊಟ್ಟೆಗೆ ನೀರು ಹಾಗೂ ಗ್ರೀನ್ ಟೀಯನ್ನು ಕುಡಿಯುತ್ತೇನೆ. ಮಲ್ಟಿವಿಟಮಿನ್, ಒಮೆಗಾ ತ್ರೀ ಮಾತ್ರೆಗಳು, ಕೊಲಾಜಿನ್ ಪೌಡರ್ ಸೇವಿಸುತ್ತೇನೆ. ನಿತ್ಯ ವ್ಯಾಯಾಮ ಮಾಡುವುದು ಬಹಳ ಮುಖ್ಯ. ವ್ಯಾಯಾಮ ಮಾಡಿ ಬೆವರಿದಷ್ಟೂ ಚರ್ಮ ಉತ್ತಮಗೊಳ್ಳುತ್ತದೆ. ಒಮ್ಮೊಮ್ಮೆ ಒಂದೊಂದು ಬಗೆಯ ವ್ಯಾಯಾಮ ಮಾಡುತ್ತೇನೆ. ಸದ್ಯಕ್ಕೆ ‘ಡಿಟಾಕ್ಸ್ ಡಿಸೆಂಬರ್’ ಪರಿಕಲ್ಪನೆಯಲ್ಲಿ, ಚೆನ್ನಾಗಿ ನೀರು ಕುಡಿಯುವುದು ಮತ್ತು ಪ್ರತಿದಿನ ಹತ್ತು ಸಾವಿರ ಹೆಜ್ಜೆ ಹಾಕುವುದನ್ನು ಕಡ್ಡಾಯ ಮಾಡಿಕೊಂಡಿದ್ದೇನೆ.

ಸಮಯ ಇದ್ದಾಗ ಏರೋಬಿಕ್ಸ್‌ಗೆ ಹೋಗುತ್ತೇನೆ. ಇನ್ನು ಚರ್ಮದ ಆರೈಕೆ ಮಾಡುವುದರಲ್ಲಿ ಅರ್ಧದಷ್ಟೂ ಕೂದಲ ಆರೈಕೆ ಮಾಡುವುದಿಲ್ಲ. ಹೇರ್ ಸ್ಟೈಲಿಂಗ್, ಕಲರಿಂಗ್, ಸ್ಟ್ರೈಟನಿಂಗ್ ಮಾಡಿಸುವುದು ಅನಿವಾರ್ಯ. ಅವುಗಳ ನಡುವೆ ಕೂದಲು ಉಳಿದಿರುವುದೇ ಹೆಚ್ಚು. ಹೇರ್‌ವಾಷ್, ಹೇರ್‌ಮಾಸ್ಕ್, ಕಂಡೀಷನರ್ ಅನ್ನು ಕಡ್ಡಾಯವಾಗಿ ಬಳಸುತ್ತೇನೆ. ಮನೆಮದ್ದು ಮಾಡುವಷ್ಟು ಸಮಯ ಇರುವುದಿಲ್ಲ. ಕೂದಲು ಚೆನ್ನಾಗಿ ಬೆಳೆಯಲು ಪ್ರೋಟೀನ್ ಇರುವ ಆಹಾರವನ್ನು ಹೆಚ್ಚು ಸೇವಿಸುತ್ತೇನೆ. ಕಲಾವಿದರು ಸ್ವಯಂ ಆರೈಕೆ ಮಾಡಿಕೊಳ್ಳುವುದು ಬಹಳ ಮುಖ್ಯ. ಕೆಲಸ ಹಾಗೂ ಸ್ವಯಂ ಆರೈಕೆಗೆ ಸರಿಯಾದ ವೇಳಾಪಟ್ಟಿಯನ್ನು ಹಾಕಿಕೊಳ್ಳುತ್ತೇನೆ. ಆಂತರಿಕವಾಗಿ ಹೆಚ್ಚು ನೆಮ್ಮದಿ, ತೃಪ್ತ ಭಾವದಿಂದ ಇರುವವರು ಸಹಜವಾಗಿ ಖುಷಿಯಿಂದ ಇರುತ್ತಾರೆ. ಸೌಂದರ್ಯ ಎನ್ನುವುದು ಸಹಜವಾದ ಖುಷಿಯಲ್ಲಿ ಅಡಗಿದೆ.

ಶ್ಶೀ... ಊಟದಲ್ಲಿ ಕೂದಲು

• ದೀಪಶ್ರೀ ಎಸ್. ಕೂಡ್ಲಿಗಿ



ರೋಹಿತ್–ಪ್ರೀತಿಕಾಗೆ ಅಂದು ವಾರದ ರಜೆ. ತಡವಾಗಿ ಎದ್ದು ಹೋಟೆಲ್‌ನಿಂದ ತಿಂಡಿ ತರಿಸಿದರು. ಪಾರ್ಸೆಲ್ ತೆರೆಯುತ್ತಿದ್ದಂತೆಯೇ ಮಸಾಲೆದೋಸೆಯ ಘಮ ಮೂಗಿಗೆ ಅಡರಿತು. ಖುಷಿಯಿಂದ ಆಲೂಗಡ್ಡೆ ಪಲ್ಯ, ಚಟ್ನಿ ಸಮೇತ ದೋಸೆ ಮುರಿದು ಬಾಯಿಗಿಟ್ಟುಕೊಂಡ ರೋಹಿತ್, ಕೂಡಲೇ ಥೂ ಎನ್ನುತ್ತಾ ಬಾಯಿಂದ ತುತ್ತನ್ನು ತೆಗೆದು ತಟ್ಟೆಗೆ ಒಗೆದ. ವಾಕರಿಸಿಕೊಳ್ಳುತ್ತಾ ಸಿಂಕ್‌ನತ್ತ ಓಡಿ ಬಾಯಿ ತೊಳೆದುಕೊಂಡ. ಅವನಿಗೆ ಮತ್ತೆ ಆ ತಿಂಡಿಯನ್ನು ತಿನ್ನಲು ಮನಸ್ಸೇ ಬರಲಿಲ್ಲ. ಅದನ್ನು ನೋಡಿ ಪ್ರೀತಿಕಾಗೂ ಪಿಚ್ಚೆನಿಸಿತು. ಅವಳೂ ತಿಂಡಿ ತಿನ್ನದೆ ಎಲ್ಲವನ್ನೂ ಕವರ್‌ಗೆ ತುಂಬಿ ಕಸದಬುಟ್ಟಿಗೆ ಹಾಕಿ ಕೈತೊಳೆದುಕೊಂಡಳು.

***


ಸಾರಿಕಾಗೆ ಹಬ್ಬದ ದಿನ ಎಷ್ಟೋ ದಿನಗಳಿಂದ ಕಾಯುತ್ತಿದ್ದ ಹೋಳಿಗೆ ಊಟ ಮಾಡುವ ಸಂಭ್ರಮ. ಎರಡು ಚೂರು ಹೋಳಿಗೆ ತಿಂದಿದ್ದಳಷ್ಟೆ. ಮೂರನೇ ಚೂರು ಬಾಯಿಗೆ ಇಡುತ್ತಿದ್ದಂತೆಯೇ ಹೋಳಿಗೆಯ ಮಧ್ಯೆ ಕೂದಲು ಸಿಕ್ಕಿ, ಊಟ ಮಾಡುವ ಮನಸ್ಸೇ ಹೋಯಿತು. ಇದು ಎಲ್ಲರ ಮನೆಯಲ್ಲೂ ಕಂಡುಬರುವ ಸಾಮಾನ್ಯ ಸಮಸ್ಯೆ.

ತಲೆಕೂದಲಿನ ಆರೈಕೆಗೆ ಕಾಳಜಿ ವಹಿಸುವ ಜನ, ಅದೇ ಕೂದಲು ಊಟದಲ್ಲಿ ಸಿಕ್ಕಾಗ ಅಸಹ್ಯಿಸಿಕೊಳ್ಳುತ್ತಾರೆ, ವಾಕರಿಕೆಯ ಮನಃಸ್ಥಿತಿ ಅನುಭವಿಸುತ್ತಾರೆ. ಇದು ಹೋಟೆಲ್ ಊಟದ ಸಮಸ್ಯೆ ಮಾತ್ರವಲ್ಲ, ಗೃಹಿಣಿಯರು ಅಷ್ಟು ಅಕ್ಕರಾಸ್ಥೆಯಿಂದ ಸಿದ್ಧಪಡಿಸುವ ಅಡುಗೆಯಲ್ಲೂ ಇದ್ದದ್ದೇ. ಹಾಗೆ ಸಿಕ್ಕ ಕೂದಲನ್ನು ಮುಟ್ಟಲು ಗಲೀಜು ಎನಿಸುತ್ತದೆ. ಕೆಲವರಿಗಂತೂ ಆ ಆಹಾರವನ್ನು ಮತ್ತೆ ತಿನ್ನಲು ಮನಸ್ಸೇ ಬರುವುದಿಲ್ಲ. ಮೊನ್ನೆ ನನಗೆ ಈ ಅನುಭವವಾಗಿದ್ದು, ಶೇಂಗಾ ಡಬ್ಬಿಯಲ್ಲಿ ಕೂದಲು ಕಂಡಾಗ. ಥೂ ಎಲ್ಲೆಂದರಲ್ಲಿ ಕೂದಲು ಎಂದು ಸಿಡಿಮಿಡಿಗುಟ್ಟುವಂತೆ ಆಯಿತು. ಅಡುಗೆಮನೆ, ದೇವರಮನೆ, ರೂಮ್ ಎಲ್ಲೆಂದರಲ್ಲಿ ಕೂದಲಿನ ಗುಪ್ಪೆ ಕಾಣಸಿಗುತ್ತದೆ. ನೆಮ್ಮದಿಯಿಂದ ದೇವರ ಪೂಜೆ ಮಾಡಿ, ಕಣ್ಣುತೆರೆದಾಗ ದೇವರ ಫೋಟೊದ ಬದಿಯಲ್ಲೇ ಕೂದಲಿನ ಎಳೆ ಕಣ್ಣಿಗೆ ರಾಚಿ, ಮೂಗಿನ ಮೇಲೆ ಸಿಟ್ಟು ತರಿಸುತ್ತದೆ. ಹಾಗಿದ್ದರೆ ಈ ಕೂದಲಿನಿಂದ ಮುಕ್ತಿ ಪಡೆಯುವುದು ಹೇಗೆ? ಗಾಳಿಯೊಂದಿಗೆ ಹಾರಿಬಂದು, ಕೈತಪ್ಪು, ಕಣ್ತಪ್ಪಿನಿಂದಾಗಿ ಆಹಾರ ಪದಾರ್ಥ ಸೇರುವುದನ್ನು ತಪ್ಪಿಸುವುದು ಹೇಗೆ? ಇದೋ ಇಲ್ಲಿವೆ ಕೆಲವು ಸರಳೋಪಾಯಗಳು:

- ಆದಷ್ಟೂ ಉತ್ತಮ ಹೋಟೆಲ್‌ನಿಂದ ಆಹಾರ ತನ್ನಿ. ಅನಿವಾರ್ಯ ಎಂದಾಗ ಮಾತ್ರ ಹೋಟೆಲ್ ಆಹಾರವನ್ನು ಅವಲಂಬಿಸಿ.
- ಮನೆಯಲ್ಲಿ ಸ್ವಚ್ಛತೆಗೆ ಪ್ರಾಮುಖ್ಯ ನೀಡಿ.
- ಮನೆಯಲ್ಲಿ ಎಲ್ಲಾದರೂ ಕೂದಲು ಬಿದ್ದಿದ್ದರೆ ಅದನ್ನು ಎತ್ತಿ ಗಾಳಿಗೆ ತೂರಬೇಡಿ. ಅದರ ಬದಲು, ಮುಚ್ಚಳ ಇರುವ ಕಸದಬುಟ್ಟಿಗೆ ಹಾಕಿ. ಇದರಿಂದ ಗಾಳಿಗೆ ಅದು ಪುನಃ ಹಾರಿ ಬಂದು ಮನೆ ಅಥವಾ ತಿನ್ನುವ ಪದಾರ್ಥವನ್ನು ಸೇರುವುದಕ್ಕೆ ಬ್ರೇಕ್ ಬೀಳುತ್ತದೆ.
- ತರಕಾರಿ, ಸೊಪ್ಪು, ಈರುಳ್ಳಿ ಸಿಪ್ಪೆಯಲ್ಲಿಯೂ ಕೂದಲ ಸುರುಳಿ ಸುತ್ತಿಕೊಂಡಿರುತ್ತದೆ. ತರಕಾರಿ, ಸೊಪ್ಪನ್ನು ಸರಿಯಾಗಿ ತೊಳೆದು ಗಮನವಿಟ್ಟು ಹೆಚ್ಚಿ. ಎಚ್ಚರ ತಪ್ಪಿದರೆ ಅವುಗಳೊಟ್ಟಿಗೆ ಕೂದಲೂ ಹೆಚ್ಚಿಸಿಕೊಂಡು ಅಡುಗೆ ಸೇರೀತು ಜೋಕೆ!
- ಅಡುಗೆ ತಯಾರಿಸಿದ ನಂತರ, ಒಮ್ಮೆ ಸೌಟು ಅಥವಾ ದೊಡ್ಡ ಸ್ಪೂನ್ ಬಳಸಿ, ಅಡುಗೆಯಲ್ಲಿ ಕೂದಲೇನಾದರೂ ಸೇರಿದೆಯೇ ಪರಿಶೀಲಿಸಿ.
- ಕೋಣೆಯಲ್ಲಿ ಒಂದೇ ಕೂದಲು ಬಿದ್ದಿದೆ ಎಂದು ನಿರ್ಲಕ್ಷ್ಯ ಮಾಡಬೇಡಿ. ಆಹಾರದಲ್ಲಿ ಸೇರಬಹುದಾದ ಆ ಒಂದೇ ಕೂದಲು ಊಟದ ಸವಿಯನ್ನೇ ಕೆಡಿಸಬಲ್ಲದು.
- ಹೊರಗೆ ಕೂತು ತಲೆ ಬಾಚುವುದು ಒಳ್ಳೆಯದು. ಅಲ್ಲಿ ಬೀಳುವ ಕೂದಲನ್ನು ಗುಡಿಸಿ ಹೊರಹಾಕಲು ಸುಲಭವಾಗುತ್ತದೆ. ನಿಂತು ತಲೆ ಬಾಚಿಕೊಂಡಾಗ ಉದುರುವ ಕೂದಲು ಗಾಳಿಯಿಂದ ಮನೆಯನ್ನು ಪ್ರವೇಶಿಸುತ್ತದೆ.
- ಅಡುಗೆ ಮಾಡುವಾಗ ತುರುಬು ಕಟ್ಟುವುದೇ ಲೇಸು. ಹೀಗೆ ಮಾಡಿದರೆ ಅಡುಗೆ ಮಾತ್ರವಲ್ಲ ಬೇರೆ ಯಾವುದೇ ಕೆಲಸ ಮಾಡುವಾಗಲೂ ಕೂದಲು ಅಡ್ಡಿ ಬರುವುದಿಲ್ಲ. ಪದೇ ಪದೇ ಕೂದಲು ಸರಿ ಮಾಡಿಕೊಳ್ಳುವ ಗೋಜು ಇರುವುದಿಲ್ಲ.
- ತಲೆಸ್ನಾನ ಮಾಡಿದಾಗ ಸಾಧ್ಯವಾದಷ್ಟೂ ಹೊರಗೆ ಕೂದಲು ಆರಿಸಿಕೊಳ್ಳಿ. ಶೇ 80ರಷ್ಟು ಹಸಿ ಇದ್ದಾಗ ಬಾಚಿಕೊಂಡರೆ ಕೂದಲು ಉದುರುವಿಕೆ ಕಡಿಮೆ ಆಗುತ್ತದೆ. ಉತ್ತಮ ಬಾಚಣಿಗೆ ಇದ್ದರೆ ಸಿಕ್ಕು ಬಿಡಿಸುವಾಗ ಹೆಚ್ಚು ಕೂದಲು ಉದುರುವುದನ್ನು ತಡೆಯಬಹುದು.

ಅಮ್ಮ ಹೇಳ್ತಾಳೆ

ಪನ್ನೀರ್ ಗ್ರೇವಿ ಮಾಡುವಾಗ ರೆಸ್ಟೋರೆಂಟ್ ಶೈಲಿಯಲ್ಲಿ ರುಚಿ ಇರಬೇಕೆಂದರೆ, ಮಿಕ್ಸಿ ಜಾರಿಗೆ ನಾಲ್ಕೈದು ತುಂಡು ಪನ್ನೀರ್ ಮತ್ತು ಅರ್ಧ ಲೋಟ ಹಾಲು ಹಾಕಿ ರುಬ್ಬಿ, ಈ ಮಿಶ್ರಣವನ್ನು ಪನ್ನೀರ್ ಗ್ರೇವಿಗೆ ಹಾಕಬೇಕು. ಇದರಿಂದ ಗ್ರೇವಿಯ ರುಚಿ ದುಪ್ಪಟ್ಟಾಗುತ್ತದೆ.



ಮಲಬದ್ಧತೆಯೇ? ಹೀಗೆ ಮಾಡಿ

ಸ್ಪಂದನ


ಡಾ. ವೀಣಾ ಎಸ್. ಭಟ್

- **ನಾನು ಐದು ತಿಂಗಳ ಗರ್ಭಿಣಿಯಾಗಿದ್ದು, ಕಚೇರಿಯೊಂದರಲ್ಲಿ ಗುಮಾಸ್ತೆಯಾಗಿದ್ದೇನೆ. ಚೆನ್ನಾಗಿಯೇ ನೀರು ಕುಡಿಯುತ್ತಿದ್ದೇನೆ. ಆದರೂ ಈಗೀಗ ಮಲ ವಿಸರ್ಜನೆ ಮಾಡುವಾಗ ತುಂಬಾ ನೋವು, ಉರಿ ಉಂಟಾಗುತ್ತದೆ. ಗರ್ಭಿಣಿಯಾಗುವುದಕ್ಕೂ ಮೊದಲು ಮಲಬದ್ಧತೆ ಉಂಟಾದಾಗ ಡುಲ್‌ಕೊಲಾಕ್ಸ್ ಮಾತ್ರೆ ಸೇವಿಸುತ್ತಿದ್ದೆ. ಈಗ ಇದಕ್ಕೆ ಪರಿಹಾರವೇನು?**

–ಮಾಲಾ, ತುಮಕೂರು

ಗರ್ಭಿಣಿಯರಲ್ಲಿ ಶೇ 40ರಷ್ಟು ಮಂದಿಗೆ ಮಲಬದ್ಧತೆ ಸಾಮಾನ್ಯ ಸಮಸ್ಯೆ. ಗರ್ಭ ಧರಿಸಿದ ಹಂತದಲ್ಲಿ ಪ್ರೊಜೆಸ್ಟಿರಾನ್ ಹಾರ್ಮೋನ್‌ನ ಮಟ್ಟ ಹೆಚ್ಚಳಗೊಂಡು, ಗರ್ಭವನ್ನು ಕಾಪಾಡಲು ನೆರವಾಗುತ್ತದೆ. ಆದರೆ, ಈ ಹಾರ್ಮೋನ್‌ನಿಂದ ಕರುಳಿನ ಚಲನೆ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿ, ಜೀರ್ಣಕ್ರಿಯೆ ನಿಧಾನಗೊಳ್ಳುತ್ತದೆ. ಜತೆಗೆ ಗರ್ಭದೊಳಗೆ ಶಿಶು ಬೆಳೆಯುತ್ತಾ ಹೋದಂತೆ ಗರ್ಭಕೋಶ ಹಿಗ್ಗುತ್ತದೆ. ಇದು ಕೂಡ ಕರುಳಿನ ಮೇಲೆ ಒತ್ತಡ ಬೀಳುವಂತೆ ಮಾಡಿ, ಕರುಳಿನ ಚಲನೆಗೆ ಅಡ್ಡಿಯುಂಟುಮಾಡುತ್ತದೆ. ಹೀಗಾದಾಗಲೂ ಮಲಬದ್ಧತೆ ಉಂಟಾಗುತ್ತದೆ. ದೈಹಿಕ ಶ್ರಮ ಕಡಿಮೆಯಾದಾಗಲೂ ಜೀರ್ಣಕ್ರಿಯೆ ನಿಧಾನವಾಗುತ್ತದೆ. ಕೆಲವೊಮ್ಮೆ ಥೈರಾಯ್ಡ್ ಹಾರ್ಮೋನ್ ಕಡಿಮೆಯಾದಾಗ, ನಾರಿನಂಶ ಇರುವ ಆಹಾರ ಪದಾರ್ಥಗಳ ಸೇವನೆ ಕಡಿಮೆಯಾದಾಗಲೂ ಮಲ ವಿಸರ್ಜನೆ ಕಷ್ಟವಾಗಬಹುದು. ಬಯಕೆ ಎಂದು ಕರಿದ, ಹುರಿದ ಆಹಾರ, ಜಂಕ್‌ಫುಡ್ ಸೇವಿಸುವುದು ಹೆಚ್ಚಾದಾಗಲೂ ರಕ್ತಹೀನತೆ ಕಡಿಮೆಯಾಗಲು ತೆಗೆದುಕೊಳ್ಳುವ ಕಬ್ಬಿಣಾಂಶದ ಮಾತ್ರೆಗಳಿಂದಲೂ ಮಲಬದ್ಧತೆ ಉಂಟಾಗುತ್ತದೆ. ಮಲಬದ್ಧತೆ ಹೆಚ್ಚಾಗಿ, ಕೆಲವೊಮ್ಮೆ ರಕ್ತನಾಳಗಳು ಗುದದ್ವಾರದಿಂದ ಹೊರಮುಖವಾಗಿ ಬಂದು ಮೂಲವ್ಯಾಧಿ ಸಮಸ್ಯೆ ಉಂಟಾಗಬಹುದು. ಮಲದ ಜತೆಗೆ ರಕ್ತಸ್ರಾವ ಆಗಬಹುದು. ಇನ್ನು ಕೆಲವರಲ್ಲಿ ಮಲ ಗಟ್ಟಿಯಾಗಿ, ಅದು ಗುದದ್ವಾರದ ಮೂಲಕ ಹೊರಗೆ ಹೋಗುವಾಗ ಗಾಯ ಉಂಟು ಮಾಡಿ (ಫಿಷರ್) ರಕ್ತಸ್ರಾವ ಆಗಬಹುದು. ಗರ್ಭಿಣಿಯರಲ್ಲಿ ಮೂಲವ್ಯಾಧಿ ಸಮಸ್ಯೆ ಉಂಟಾದರೆ ರಕ್ತಹೀನತೆ ಹೆಚ್ಚಾಗಬಹುದು. ಇಂಥ ಪರಿಸ್ಥಿತಿಯಲ್ಲಿ ವೈದ್ಯರ ಸಲಹೆ ಪಡೆದು ಚಿಕಿತ್ಸೆ ಮುಂದುವರಿಸಬೇಕು.

ಪರಿಹಾರಕ್ಕೆ ಹೀಗೆ ಮಾಡಿ: ಪ್ರತಿದಿನ ಎಂಟರಿಂದ ಹತ್ತು ಲೋಟಗಳಷ್ಟು ಉಗುರು ಬೆಚ್ಚಗಿನ ನೀರನ್ನು ಕುಡಿಯಿರಿ. ಊಟ , ತಿಂಡಿ ಸೇವನೆಗೆ 40 ನಿಮಿಷ ಮೊದಲು ಅಥವಾ ಆಹಾರ ಸೇವಿಸಿ ಒಂದೂವರೆ ಗಂಟೆಯಾದ ನಂತರ ನೀರು ಕುಡಿಯಿರಿ. ಹಸಿರುಸೊಪ್ಪು, ತರಕಾರಿಗಳು, ಸೀಬೆಹಣ್ಣು, ದ್ರಾಕ್ಷಿ, ಬಾಳೆಹಣ್ಣು, ಧಾನ್ಯಗಳಿಂದ ತಯಾರಿಸಿದ ಆಹಾರವನ್ನು ಕಡ್ಡಾಯವಾಗಿ ಸೇವಿಸಿ. ಆಹಾರವು ಲಾವಾರಸದಲ್ಲಿ ಬೆರೆಯುವಷ್ಟು ಚೆನ್ನಾಗಿ ಅಗಿದು ತಿನ್ನುವುದರಿಂದ ಜೀರ್ಣಕ್ರಿಯೆ ಸರಾಗವಾಗಿ ಆಗುತ್ತದೆ. ಮಲವಿಸರ್ಜನೆಗೂ ತೊಡಕಾಗುವುದಿಲ್ಲ. ಆಹಾರವನ್ನು ದಿನಕ್ಕೆ ನಾಲ್ಕರಿಂದ ಐದು ಬಾರಿ ಇಷ್ಟಿಷ್ಟೇ ಪ್ರಮಾಣದಲ್ಲಿ ಸೇವಿಸುವುದು ಉತ್ತಮ. ತಾಜಾ ಆಹಾರವನ್ನಷ್ಟೇ ಸೇವಿಸಿ. ಬೆಣ್ಣೆ ತೆಗೆದ ಮಜ್ಜಿಗೆಯನ್ನು ಮಧ್ಯಾಹ್ನ ಊಟದ ನಂತರ ಒಂದು ಗಂಟೆ ಬಿಟ್ಟು ಕುಡಿಯಿರಿ. ಇದೂ ಜೀರ್ಣಕ್ರಿಯೆಗೆ ಸಹಾಯಕ. ಕಬ್ಬಿಣಾಂಶದ ಮಾತ್ರೆ ಸೇವಿಸಬೇಕಾದಾಗ ಡಾಕ್ಯುಸೇಟ್ ಸೋಡಿಯಂ ಅಂಶ ಇರುವುದನ್ನು ಸೇವಿಸಿ. ಭಾರತೀಯ ಪದ್ಧತಿಯ ಶೌಚಾಲಯ ಬಳಸಿ. ಇಷ್ಟೆಲ್ಲ ಮುಂಜಾಗ್ರತೆ ವಹಿಸಿದರೂ ಪರಿಹಾರ ಸಿಗದೇ ಇದ್ದರೆ ವೈದ್ಯರ ಸಲಹೆ ಮೇರೆಗೆ ಸೂಕ್ತ ಔಷಧ ಬಳಸಿ.

ಬಾಳೆಕಾಯಿ ಮಂಚೂರಿ ಮಾಡೋಣ ರೀ...

ರಸಾಸ್ವಾದ

• ಪದ್ಮಿನಿ ವಿಶ್ವನಾಥ್



ಹಿರಿಯರು ಆರೋಗ್ಯದ ಹಿತದೃಷ್ಟಿಯಿಂದ ಕಾಲಕ್ಕೆ ಅನುಗುಣವಾಗಿ ಸೊಪ್ಪು, ತರಕಾರಿ ಹಾಗೂ ಹಣ್ಣುಗಳನ್ನು ಬಳಸುತ್ತಿದ್ದರು. ಅದರಲ್ಲೂ ಕೆಲವು ತರಕಾರಿಗಳು ಮತ್ತು ಗೆಡ್ಡೆ–ಗೆಣಸುಗಳ ಪದಾರ್ಥಗಳನ್ನು ಋತುಮಾನಕ್ಕೆ ಅನುಸಾರವಾಗಿ ತಯಾರಿಸುತ್ತಿದ್ದರು. ಸುವರ್ಣಗೆಡ್ಡೆ, ಹಲಸಿನಕಾಯಿ, ಬಾಳೆಕಾಯಿ, ಬಾಳೆಹೂವು... ಹೀಗೆ ಕೆಲವು ಪದಾರ್ಥಗಳನ್ನು ವರ್ಷದಲ್ಲಿ ಒಮ್ಮೆಯಾದರೂ ತಿನ್ನಲೇಬೇಕು ಎಂದು ಹೇಳುತ್ತಿದ್ದರು. ಅಂಥವುಗಳಲ್ಲಿ ಒಂದು ಬಹೂಪಯೋಗಿ ತಿನಿಸೆಂದರೆ ಬಾಳೆಕಾಯಿ.

ಬಾಳೆಕಾಯಿಯಿಂದ ಆರೋಗ್ಯಕ್ಕೆ ಹಲವಾರು ಪ್ರಯೋಜನಗಳಿವೆ. ಇದು ವಿಟಮಿನ್‌ಗಳು ಮತ್ತು ಖನಿಜಾಂಶಗಳಿಂದ ಕೂಡಿದೆ, ಫೈಬರ್ ಅಧಿಕ ಪ್ರಮಾಣದಲ್ಲಿದೆ. ಜೀರ್ಣಕ್ರಿಯೆಯನ್ನು ಸುಧಾರಿಸಲು ನೆರವಾಗುತ್ತದೆ. ಮಧುಮೇಹವನ್ನು ನಿಯಂತ್ರಣದಲ್ಲಿ ಇಡಲು ಸಹಕಾರಿ.

ಬಾಳೆಕಾಯಿಯು ರಕ್ತದೊತ್ತಡವನ್ನು ನಿರ್ವಹಿಸಲು ಸಹಾಯ ಮಾಡುವ ಗುಣಗಳನ್ನು ಹೊಂದಿದೆ. ದೇಹಕ್ಕೆ ಅಗತ್ಯವಾದ ಪೋಷಕಾಂಶಗಳನ್ನು ಒದಗಿಸುವುದರ ಜೊತೆಗೆ ಹೃದಯದ ರಕ್ಷಣೆಗೆ ಪ್ರಯೋಜನಕಾರಿಯಾಗಿದೆ. ಜೀರ್ಣಕ್ರಿಯೆ ಸುಧಾರಣೆಗೆ ಬಾಳೆಕಾಯಿ ಉತ್ತಮ.

ಬಾಳೆಕಾಯಿಯು ಮಲಬದ್ಧತೆ ಮತ್ತು ಹೊಟ್ಟೆಗೆ ಸಂಬಂಧಿಸಿದ ಅನೇಕ ಸಮಸ್ಯೆಗಳನ್ನು ನಿವಾರಿಸಲು ಸಹಾಯ ಮಾಡುತ್ತದೆ. ಇದರಲ್ಲಿ ನಾರಿನಂಶ ಹೆಚ್ಚಾಗಿ ಇರುವುದರಿಂದ ಹೊಟ್ಟೆ ತುಂಬಾ ಹೊತ್ತು ತುಂಬಿದ ಅನುಭವ ನೀಡುತ್ತದೆ ಮತ್ತು ಹಸಿವು ಕೂಡ ಕಡಿಮೆಯಾಗುತ್ತದೆ. ಹೀಗಾಗಿ, ಬಾಳೆಕಾಯಿ ಸೇವನೆಯು ಬಹುಮುಖ್ಯವಾಗಿ ತೂಕ ಇಳಿಸಿಕೊಳ್ಳಲು ಸಹಕಾರಿ. ಇದರಲ್ಲಿ ಸಾಕಷ್ಟು ಪ್ರಮಾಣದ ಕ್ಯಾಲ್ಸಿಯಂ ಇದ್ದು, ಮೂಳೆಗಳು ಗಟ್ಟಿಯಾಗಲು ನೆರವಾಗುತ್ತದೆ.

ಇಂತಹ ಬಾಳೆಕಾಯಿಯಲ್ಲಿ ಸಾಮಾನ್ಯವಾಗಿ ಬಜ್ಜಿ, ಬಾಳೆಕಾಯಿ ಸಾಸಿವೆ, ಪಲ್ಯ ಹೀಗೆ ಅನೇಕ ಪದಾರ್ಥಗಳನ್ನು ತಯಾರಿಸಬಹುದು. ಅದರಲ್ಲೂ ಗೋಬಿ ಮಂಚೂರಿ ಇಷ್ಟಪಡುವ ಮಕ್ಕಳಿಗೆ ಬಾಳೆಕಾಯಿಯಲ್ಲಿ ಮಂಚೂರಿ ತಯಾರಿಸಿಕೊಟ್ಟರೆ ರುಚಿಯೊಟ್ಟಿಗೆ ಆರೋಗ್ಯಕ್ಕೂ ಒಳ್ಳೆಯದು.

ಹೀಗೆ ಮಾಡಿ

ಬಾಳೆಕಾಯಿಯನ್ನು ಚೆನ್ನಾಗಿ ತೊಳೆದು ಸಿಪ್ಪೆ ಸಮೇತ ಹದವಾಗಿ ಬೇಯಿಸಬೇಕು. ಇಲ್ಲವಾದಲ್ಲಿ ಮಧ್ಯಮ ಉರಿಯಲ್ಲಿ ಕುಕ್ಕರ್‌ನಲ್ಲಿ ಒಂದು ಕೂಗು ಕೂಗಿಸಬಹುದು.

ನಂತರ ಅದರ ಸಿಪ್ಪೆ ತೆಗೆದು ಸ್ವಲ್ಪ ಉಪ್ಪು, ಚಿಟಿಕೆ ಸಕ್ಕರೆ ಹಾಕಿ ಚೆನ್ನಾಗಿ ಕಿವುಚಬೇಕು. ಅದಕ್ಕೆ ಒಂದು ದೊಡ್ಡ ಚಮಚ ಕಾರ್ನ್‌ಫ್ಲೋರ್, 2 ಚಮಚ ಅಕ್ಕಿಹಿಟ್ಟು (ಅಕ್ಕಿಹಿಟ್ಟು ಸ್ವಲ್ಪ ಹೆಚ್ಚಿದ್ದಲ್ಲಿ ಗರಿಗರಿಯಾಗಿ ಬರುತ್ತದೆ), ಮೆಣಸಿನಕಾಯಿ ಪುಡಿಯೊಂದಿಗೆ ಬೆರೆಸಿ ಚಿಕ್ಕ ಉಂಡೆಗಳನ್ನಾಗಿ ಮಾಡಿ ಎಣ್ಣೆಯಲ್ಲಿ ಕರಿಯಬೇಕು.

ನಂತರ ಬಾಣಲೆಗೆ ಎಣ್ಣೆ ಹಾಕಿ, ಸಣ್ಣಗೆ ಹೆಚ್ಚಿದ ಈರುಳ್ಳಿ, ಶುಂಠಿ–ಬೆಳ್ಳುಳ್ಳಿ ಪೇಸ್ಟ್, ಸ್ವಲ್ಪ ಟೊಮೆಟೊ ಸಾಸ್, ಸೋಯಾ ಸಾಸ್, ಪುದಿನಾ ಹಾಕಿ ಒಗ್ಗರಣೆ ರೀತಿ ಮಾಡಿ, ಅದಕ್ಕೆ ಕರಿದ ಬಾಳೆಕಾಯಿಯ ತುಂಡುಗಳನ್ನು ಹಾಕಬೇಕು. ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಮಿಶ್ರಣ ಮಾಡಿದರೆ ರುಚಿರುಚಿಯಾದ ಬಾಳೆಕಾಯಿ ಮಂಚೂರಿ ರೆಡಿ.

ಸರ್ವ್ ಮಾಡುವಾಗ ಮೇಲೆ ಒಂದಷ್ಟು ಹೆಚ್ಚಿದ ಈರುಳ್ಳಿ, ತಾಜಾ ಕೊತ್ತಂಬರಿ ಸೊಪ್ಪು ಹಾಕಿ, ಟೊಮೆಟೊ ಸಾಸ್ ಜೊತೆ ಕೊಟ್ಟರೆ ಮಕ್ಕಳು, ದೊಡ್ಡವರು ಎಲ್ಲರಿಗೂ ಪ್ರಿಯವಾದ ಖಾದ್ಯ ಆಗುವುದರಲ್ಲಿ ಸಂಶಯವೇ ಇಲ್ಲ.


ಮಂಚೂರಿಗೆ ಸಿದ್ಧವಾಗಿರುವ ಬಾಳೆಕಾಯಿ

ವಯಸ್ಕರು ಸಹಜೀವನಕ್ಕೆ ಅರ್ಹರು

ಮದುವೆ ವಯಸ್ಸಿಗೆ ಬಾರದವರಿಗೂ ಜೀವಿಸುವ ಹಕ್ಕು ಇದೆ: ಹೈಕೋರ್ಟ್

ಮುಖ್ಯಾಂಶಗಳು

- ರಕ್ಷಣೆ ಕೋರಿ ಅರ್ಜಿ ಸಲ್ಲಿಸಿದ್ದ ಯುವತಿ, ಯುವಕ

ಜೈಪುರ (ಪಿಟಿಐ): ವಿವಾಹವಾಗಲು ಕಾನೂನುಬದ್ಧ ವಯಸ್ಸು ಆಗದಿದ್ದರೂ ಇಬ್ಬರು ವಯಸ್ಕರು ಸಹಜೀವನದ ಸಂಬಂಧ ಹೊಂದಲು ಅರ್ಹರು ಎಂದು ರಾಜಸ್ಥಾನ ಹೈಕೋರ್ಟ್ ತೀರ್ಪು ನೀಡಿದೆ.

ಸ್ವ ಇಚ್ಛೆಯಿಂದ ಒಟ್ಟಿಗೆ ವಾಸಿಸುತ್ತಿರುವ ಕೋಟಾದ 18ರ ವಯಸ್ಸಿನ ಯುವತಿ ಮತ್ತು 19ರ ವಯಸ್ಸಿನ ಯುವಕ ರಕ್ಷಣೆಗೆ ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನೂಪ್ ಧಂಡ್ ಅವರು ಈ ತೀರ್ಪು ನೀಡಿದ್ದಾರೆ.

ವಿಚಾರಣೆ ವೇಳೆ, 'ನಾವು 2025ರ ಅಕ್ಟೋಬರ್ 27ರಂದು ಸಹಜೀವನ ಕುರಿತು ಒಪ್ಪಂದ ಮಾಡಿಕೊಂಡಿದ್ದೇವೆ' ಎಂದು ಯುವಕ ಮತ್ತು ಯುವತಿ ಕೋರ್ಟ್ ಗಮನಕ್ಕೆ ತಂದರು.

'ನಮ್ಮ ಸಹಜೀವನದ ಸಂಬಂಧವನ್ನು ವಿರೋಧಿಸುತ್ತಿರುವ ಯುವತಿಯ ಕುಟುಂಬದವರು, ನಮ್ಮನ್ನು ಕೊಲ್ಲುವ ಬೆದರಿಕೆ ಹಾಕಿದ್ದಾರೆ. ರಕ್ಷಣೆ ಕೋರಿ ಕೋಟಾ ಪೊಲೀಸರಿಗೆ ನೀಡಿದ ದೂರನ್ನು ಅವರು ಪರಿಗಣಿಸಿಲ್ಲ' ಎಂದು ಅರ್ಜಿದಾರರು ಆರೋಪಿಸಿದರು.

ಈ ಅರ್ಜಿಯನ್ನು ವಿರೋಧಿಸಿದ ಪಬ್ಲಿಕ್ ಪ್ರಾಸಿಕ್ಯೂಟರ್ ವಿವೇಕ್ ಚೌಧರಿ, 'ಯುವಕನಿಗೆ 21 ವರ್ಷ ವಯಸ್ಸಾಗಿಲ್ಲ. ಅಂದರೆ ವಿವಾಹವಾಗುವ ಕಾನೂನುಬದ್ಧ ವಯಸ್ಸಾಗಿಲ್ಲ. ಹೀಗಾಗಿ ಅವರಿಗೆ ಸಹಜೀವನ ವ್ಯವಸ್ಥೆಯಲ್ಲಿ ಇರಲು ಅವಕಾಶ ನೀಡಬಾರದು' ಎಂದು ವಾದಿಸಿದರು. ಆಗ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ, 'ಅರ್ಜಿದಾರರು ವಿವಾಹವಾಗುವ ವಯಸ್ಸಿಗೆ ಬಂದಿಲ್ಲ ಎಂಬ ಕಾರಣಕ್ಕೆ, ಅವರಿಗೆ ಸಂವಿಧಾನದ 21ನೇ ವಿಧಿಯಡಿ ಜೀವಿಸುವ ಹಕ್ಕು ಮತ್ತು ವೈಯಕ್ತಿಕ ಸ್ವಾತಂತ್ರ್ಯವನ್ನು ನಿರಾಕರಿಸಲು ಆಗುವುದಿಲ್ಲ' ಎಂದರು.

'ಕಾನೂನಿನ ಅಡಿ ಸಹಜೀವನದ ಸಂಬಂಧಗಳನ್ನು ನಿಷೇಧಿಸಲಾಗಿಲ್ಲ ಅಥವಾ ಅಪರಾಧ ಎಂದೂ ಪರಿಗಣಿಸಿಲ್ಲ. ಹೀಗಾಗಿ ಪ್ರತಿಯೊಬ್ಬರ ಜೀವನ ಮತ್ತು ಸ್ವಾತಂತ್ರ್ಯವನ್ನು ಕಾಪಾಡುವುದು ರಾಜ್ಯದ ಕರ್ತವ್ಯ' ಎಂದು ಅವರು ತಿಳಿಸಿದರು. ಅರ್ಜಿದಾರರ ರಕ್ಷಣೆಯನ್ನು ಖಚಿತಪಡಿಸಿಕೊಳ್ಳುವಂತೆ ಜೋಧ್‌ಪುರ (ಗ್ರಾಮೀಣ) ಪೊಲೀಸ್ ವರಿಷ್ಠಾಧಿಕಾರಿಗೆ ಅವರು ನಿರ್ದೇಶಿಸಿದರು.

ಅರುಂಧತಿ ರಾಯ್ ಪುಸ್ತಕ ನಿಷೇಧಕ್ಕೆ 'ಸುಪ್ರೀಂ' ನಕಾರ

ನವದೆಹಲಿ (ಪಿಟಿಐ): ಲೇಖಕಿ ಅರುಂಧತಿ ರಾಯ್ ಅವರ 'ಮದರ್ ಮೇರಿ ಕಮ್ಸ್ ಟು ಮಿ' ಪುಸ್ತಕದ ಮಾರಾಟ, ಪ್ರಸಾರ ಮತ್ತು ಪ್ರದರ್ಶನವನ್ನು ನಿಷೇಧಿಸುವಂತೆ ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ಈ ಪುಸ್ತಕದ ಮುಖಪುಟದಲ್ಲಿ ಲೇಖಕಿ 'ಬೀಡಿ' ಅಥವಾ 'ಸಿಗರೇಟ್' ಸೇದುತ್ತಿರುವ ಚಿತ್ರವನ್ನು ಪ್ರಕಟಿಸಲಾಗಿದ್ದು, ಅದು ಕಾನೂನಿಗೆ ವಿರುದ್ಧವಾಗಿದೆ ಎಂದು ಅರ್ಜಿದಾರರು ವಾದಿಸಿದ್ದರು.

ಈ ಕುರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ವಜಾಗೊಳಿಸಿದ್ದ ಕೇರಳ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ರಾಜಸಿಂಹನ್ ಎಂಬುವರು ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠ ವಜಾಗೊಳಿಸಿದೆ.



'ಪ್ರಸಿದ್ಧ ಲೇಖಕಿ ಆಗಿರುವ ಅರುಂಧತಿ ರಾಯ್ ಅವರು ಅಂತಹ ವಿಷಯಗಳನ್ನು ಪ್ರಚಾರ ಮಾಡಿಲ್ಲ. ಅಲ್ಲದೆ ಪುಸ್ತಕದ ಚಿತ್ರವು ನಗರದ ಯಾವುದೇ ಹೋರ್ಡಿಂಗ್‌ನಲ್ಲಿ ಇಲ್ಲ. ಪುಸ್ತಕವನ್ನು ತೆಗೆದುಕೊಂಡು ಓದುವವರು ಮಾತ್ರ ಅದನ್ನು ನೋಡುತ್ತಾರೆ' ಎಂದು ಸಿಜೆಐ ಹೇಳಿದರು.

'ಲೇಖಕರು ಮತ್ತು ಪ್ರಕಾಶಕ ಸಂಸ್ಥೆ ಪೆಂಗ್ವಿನ್ ಹಮಿಶ್ ಹ್ಯಾಮಿಲ್ಟನ್, ಸಿಗರೇಟ್ ಮತ್ತು ಇತರ ತಂಬಾಕು ಉತ್ಪನ್ನಗಳ ಕಾಯ್ದೆ–2003ರ ಕಲಂ 5 ಅನ್ನು ಉಲ್ಲಂಘಿಸಿಲ್ಲ' ಎಂದೂ ಪೀಠ ಹೇಳಿತು.

ಹೀಗಾಗಿ ಹೈಕೋರ್ಟ್ ಆದೇಶದಲ್ಲಿ ಹಸ್ತಕ್ಷೇಪ ಮಾಡಲು ಸೂಕ್ತ ಕಾರಣವಿಲ್ಲ ಎಂದು ಪೀಠ ತಿಳಿಸಿತು. ಇದು ಲೇಖಕಿ ಅರುಂಧತಿ ರಾಯ್ ಅವರ ಆತ್ಮಚರಿತ್ರೆಯ ಪುಸ್ತಕವಾಗಿದೆ.

'ಕುಲಪತಿ ನೇಮಕ ಬಿಕ್ಕಟ್ಟು ಬಗೆಹರಿಯದಿದ್ದರೆ ಮಧ್ಯಪ್ರವೇಶ'

ನವದೆಹಲಿ(ಪಿಟಿಐ): ಕೇರಳದ ಎರಡು ತಾಂತ್ರಿಕ ವಿಶ್ವವಿದ್ಯಾಲಯಗಳಿಗೆ ಕುಲಪತಿಗಳ ಆಯ್ಕೆ ಕುರಿತು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ರಾಜ್ಯಪಾಲ ಮತ್ತು ಕುಲಪತಿ ರಾಜೇಂದ್ರ ಅರ್ಲೇಕರ್ ಅವರು ಒಮ್ಮತಕ್ಕೆ ಬರದಿದ್ದರೆ, ಈಗಿರುವ ಬಿಕ್ಕಟ್ಟನ್ನು ಪರಿಹರಿಸಲು ಮಧ್ಯಪ್ರವೇಶಿಸುವುದಾಗಿ ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಪಿ.ಬಿ. ವರಾಲೆ ಅವರಿದ್ದ ಪೀಠವು ಎಪಿಜೆ ಅಬ್ದುಲ್ ಕಲಾಂ ತಾಂತ್ರಿಕ ವಿಶ್ವವಿದ್ಯಾಲಯ ಮತ್ತು ಡಿಜಿಟಲ್ ವಿಜ್ಞಾನ ನಾವೀನ್ಯ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ಕುಲಪತಿಗಳ ನೇಮಕಾತಿಗೆ ಸಂಬಂಧಿಸಿದ ಪ್ರಕರಣದ ವಿಚಾರಣೆ ನಡೆಸಿತು.

ಈ ಬಿಕ್ಕಟ್ಟಿಗೆ ಕೆಲವು ಸೌಹಾರ್ದಯುತ ಪರಿಹಾರ ಕಂಡುಕೊಳ್ಳುವಂತೆ ಪೀಠವು ರಾಜ್ಯಪಾಲರ ಪರವಾಗಿ ಹಾಜರಿದ್ದ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಮತ್ತು ಮುಖ್ಯಮಂತ್ರಿ ಅವರನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಜೈದೀಪ್ ಗುಪ್ತಾ ಅವರಿಗೆ ಸೂಚಿಸಿತು.

ನ್ಯಾಷನಲ್ ಹೆರಾಲ್ಡ್ ಪ್ರಕರಣ ಡಿ.ಕೆ. ಸಹೋದರರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ನ್ಯಾಷನಲ್ ಹೆರಾಲ್ಡ್ ಪ್ರಕರಣದ ತನಿಖೆಯ ಭಾಗವಾಗಿ ಆರ್ಥಿಕ ಮತ್ತು ವಹಿವಾಟು ವಿವರಗಳನ್ನು ಕೋರಿ ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಮಾಜಿ ಸಂಸದರೂ ಆಗಿರುವ ಸಹೋದರ ಡಿ.ಕೆ. ಸುರೇಶ್ ಅವರಿಗೆ ದೆಹಲಿ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ.

ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ವಿರುದ್ಧ ಅಕ್ಟೋಬರ್ 3ರಂದು ದಾಖಲಾಗಿರುವ ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಶಿವಕುಮಾರ್ ಅವರಲ್ಲಿ ಪ್ರಮುಖ ಮಾಹಿತಿ ಇದೆಯೆಂದು ಭಾವಿಸಲಾಗಿದೆ ಎಂದು ಆರ್ಥಿಕ ಅಪರಾಧಗಳ ವಿಭಾಗ ನೀಡಿರುವ ನೋಟಿಸ್‌ನಲ್ಲಿ ತಿಳಿಸಲಾಗಿದೆ. ನೋಟಿಸ್ ಶುಕ್ರವಾರ ತಲುಪಿದೆ ಎಂದು ಡಿ.ಕೆ. ಸಹೋದರರ ಆಪ್ತ ಮೂಲಗಳು ತಿಳಿಸಿವೆ.

ಸಹೋದರರ ವೈಯಕ್ತಿಕ ಹಿನ್ನೆಲೆ, ಕಾಂಗ್ರೆಸ್ ಪಕ್ಷದೊಂದಿಗಿನ ಸಂಬಂಧ, ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ನೀಡಿದ ದೇಣಿಗೆ ಪ್ರಮಾಣ, ಯಾವ ರೀತಿಯಲ್ಲಿ ದೇಣಿಗೆ ಕೊಡಲಾಗಿದೆ ಎಂಬುದರ ಮಾಹಿತಿ, ಈ ಹಣ ಯಾವುದಕ್ಕೆ ಬಳಕೆಯಾಗಿದೆ ಎಂಬುದು ಗೊತ್ತಿದೆಯೇ ಎಂಬ ವಿವರಗಳನ್ನು ಕೇಳಲಾಗಿದೆ. ಇದೇ 19ರೊಳಗೆ ಹಾಜರಾಗುವಂತೆ ಅಥವಾ ಮಾಹಿತಿಯನ್ನು ಒದಗಿಸುವಂತೆ ಸೂಚಿಸಲಾಗಿದೆ.

ಸಾಂಪ್ರದಾಯಿಕ ನೃತ್ಯ

ಪಿಟಿಐ ಚಿತ್ರ



ನಾಗಾಲ್ಯಾಂಡ್‌ನಲ್ಲಿ ಶುಕ್ರವಾರ ನಡೆದ 'ಹಾರ್ನ್‌ಬಿಲ್ ಉತ್ಸವ'ದಲ್ಲಿ ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರು ಸಹ ಕಲಾವಿದರೊಂದಿಗೆ ನೃತ್ಯ ಮಾಡಿದರು

ಚಿಟಿಕೆ ಸುದ್ದಿ

ವಿಮಾನಕ್ಕೆ ಬಾಂಬ್ ಬೆದರಿಕೆ

ಹೈದರಾಬಾದ್ (ಪಿಟಿಐ): ದುಬೈ–ಹೈದರಾಬಾದ್ ಎಮಿರೆಟ್ಸ್ ವಿಮಾನಕ್ಕೆ ಶುಕ್ರವಾರ ಬಾಂಬ್ ಬೆದರಿಕೆ ಹಾಕಲಾಗಿತ್ತು.

ದುಬೈನಿಂದ ಬರುತ್ತಿದ್ದ ಎಕೆ526 ವಿಮಾನದಲ್ಲಿ ಬಾಂಬ್ ಇರಿಸಿರುವುದಾಗಿ ಹೈದರಾಬಾದ್ ವಿಮಾನ ನಿಲ್ದಾಣಕ್ಕೆ ಬೆಳಿಗ್ಗೆ 7:30ಕ್ಕೆ ಬೆದರಿಕೆ ಸಂದೇಶವೊಂದು ಬಂದಿತ್ತು. 8:30ಕ್ಕೆ ವಿಮಾನವು ಹೈದರಾಬಾದ್‌ನ ರಾಜೀವ್ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನವನ್ನು ಸುರಕ್ಷಿತವಾಗಿ ಇಳಿಸಿ, ತಪಾಸಣೆ ನಡೆಸಲಾಗಿದೆ.

ಅನಿಲ್ ಅಂಬಾನಿಗೆ ಸೇರಿದ ₹1,120 ಕೋಟಿ ಆಸ್ತಿ ಜಪ್ತಿ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣ ತನಿಖೆಯ ಭಾಗವಾಗಿ ರಿಲಯನ್ಸ್ ಸಮೂಹದ ಅಧ್ಯಕ್ಷ ಅನಿಲ್ ಅಂಬಾನಿ ಅವರ ಕಂಪನಿಗಳು ಮತ್ತು ಸಂಬಂಧಿತ ಸಂಸ್ಥೆಗಳಿಗೆ ಸೇರಿದ ₹1,120 ಕೋಟಿ ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಜಪ್ತಿ ಮಾಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಂಬೈನ ಬಲ್ಲಾರ್ಡ್ ಎಸ್ಟೇಟ್‌ನಲ್ಲಿರುವ ರಿಲಯನ್ಸ್ ಸೆಂಟರ್, ನಿಶ್ಚಿತ ಠೇವಣಿಗಳು, ರಿಲಯನ್ಸ್ ಅನಿಲ್ ಅಂಬಾನಿ ಗ್ರೂಪ್‌ಗೆ ಸೇರಿದ ಅಘೋಷಿತ ಹೂಡಿಕೆ ಸೇರಿದಂತೆ 18 ಸ್ವತ್ತುಗಳನ್ನು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಇ.ಡಿ ತಾತ್ಕಾಲಿಕ ಮುಟ್ಟುಗೋಲು ಹಾಕಿಕೊಂಡಿದೆ.

'ಕಾಮ್ಸ್' ಹಾಜರಾತಿ ಜಾರಿ

ಬೆಂಗಳೂರು: ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ, ಆಧಾರ್-ಲಿಂಕ್‌ನ ಮುಖ ಗುರುತಿಸುವಿಕೆ ಹಾಜರಾತಿ ವ್ಯವಸ್ಥೆಯನ್ನು ಕಡ್ಡಾಯಗೊಳಿಸಿದೆ. ಇಲಾಖೆಯ ಕಚೇರಿಗಳಲ್ಲಿ ಬಯೋಮೆಟ್ರಿಕ್ ಹಾಜರಾತಿ ಯಂತ್ರಗಳನ್ನು ಕೈಬಿಟ್ಟು, ಮೊಬೈಲ್ ಆಧಾರಿತ 'ಕಾಮ್ಸ್' (ಕರ್ನಾಟಕ ಹಾಜರಾತಿ ನಿರ್ವಹಣಾ ವ್ಯವಸ್ಥೆ) ಜಾರಿಗೊಳಿಸಲು ಸೂಚಿಸಲಾಗಿದೆ. ಮೊದಲ ಹಂತದಲ್ಲಿ ಆಯುಕ್ತರ ಕಚೇರಿ, ಎಲ್ಲ ಡಿಡಿಪಿಐ, ಬಿಇಒ ಕಚೇರಿಯ ಎಲ್ಲ ಸಿಬ್ಬಂದಿ ಹೊಸ ವ್ಯವಸ್ಥೆಯಲ್ಲಿ ನೋಂದಣಿ ಮಾಡಿಕೊಳ್ಳಬೇಕು ಎಂದು ಸೂಚಿಸಿದೆ.

ಆರ್ಥಿಕ 'ಸ್ನೇಹ': ಹಲವು ಒಪ್ಪಂದ

ಒಂದನೇ ಪುಟದಿಂದ...

'ಸಣ್ಣ ಹಾಗೂ ಅಗತ್ಯಕ್ಕೆ ತಕ್ಕಂತಹ ಗಾತ್ರದ (ಮಾಡುಲರ್) ಪರಮಾಣು ರಿಯಾಕ್ಟರ್‌ಗಳು ಹಾಗೂ ತೇಲುವ ಅಣು ವಿದ್ಯುತ್ ಸ್ಥಾವರ ನಿರ್ಮಾಣದಲ್ಲಿ ಭಾರತಕ್ಕೆ ಸಹಕಾರ ನೀಡಲು ರಷ್ಯಾ ಉತ್ಸುಕವಾಗಿದೆ. ವೈದ್ಯಕೀಯ ಹಾಗೂ ಕೃಷಿಯಂತಹ ಕ್ಷೇತ್ರಗಳಲ್ಲಿ ಪರಮಾಣು ತಂತ್ರಜ್ಞಾನ ಬಳಕೆಗೆ ನೆರವು ನೀಡಲೂ ಸಿದ್ಧ' ಎಂದು ಅವರು ಹೇಳಿದ್ದಾರೆ.

23ನೇ ಭಾರತ–ರಷ್ಯಾ ಶೃಂಗಸಭೆಯಲ್ಲಿ, ಮೋದಿ ಅವರೊಂದಿಗೆ ವ್ಯಾಪಕ ಚರ್ಚೆ ನಡೆಸಿದ ವೇಳೆ ಪುಟಿನ್ ಈ ಭರವಸೆಗಳನ್ನು ನೀಡಿದ್ದಾರೆ.

ಭಾರತ ಮತ್ತು ರಷ್ಯಾ ನಡುವಿನ ಆರ್ಥಿಕ ಮತ್ತು ವ್ಯಾಪಾರ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಲು ದೃಢ ಸಂಕಲ್ಪ ಮಾಡಿದ ಉಭಯ ನಾಯಕರು, ಈ ಉದ್ದೇಶ ಸಾಧನೆಗಾಗಿ 5 ವರ್ಷಗಳ ಯೋಜನೆ ಅನುಷ್ಠಾನಕ್ಕೂ ಸಮ್ಮತಿಸಿದರು.

ಎರಡೂ ದೇಶಗಳ ನಡುವೆ ವ್ಯಾಪಾರ ಮತ್ತು ಹೂಡಿಕೆ ಹೆಚ್ಚಿಸುವುದು, ತೈಲ ಸಂಸ್ಕರಣೆ, ಪೆಟ್ರೊಕೆಮಿಕಲ್ ತಂತ್ರಜ್ಞಾನಗಳು ಹಾಗೂ ಇದಕ್ಕೆ ಸಂಬಂಧಿಸಿದ ಕ್ಷೇತ್ರಗಳಲ್ಲಿ, ಎಲ್‌ಎನ್‌ಜಿ ಮತ್ತು ಪಿಎನ್‌ಜಿ ಮೂಲಸೌಕರ್ಯ ಹೆಚ್ಚಿಸುವುದು ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಹಕಾರ ವೃದ್ಧಿಸುವ ಬಗ್ಗೆಯೂ ಅವರು ಸಹಮತ ವ್ಯಕ್ತಪಡಿಸಿದ್ದಾರೆ.

ಮೋದಿ ಮಾತು: 'ಜಾಗತಿಕ ರಾಜಕೀಯದಿಂದಾಗಿ ಎದುರಾಗುವ ಸವಾಲುಗಳ ಹೊರತಾಗಿಯೂ ಉಭಯ ದೇಶಗಳ ನಡುವಿನ ಬಾಂಧವ್ಯ ಧ್ರುವ ತಾರೆಯಂತೆ ಸದಾ ಪ್ರಜ್ವಲಿಸಲಿದೆ' ಎಂದು ಮೋದಿ ಬಣ್ಣಿಸಿದ್ದಾರೆ.

ಶೃಂಗಸಭೆ ವೇಳೆ, ಉಕ್ರೇನ್ ಮತ್ತು ರಷ್ಯಾ ನಡುವಿನ ಸಂಘರ್ಷ ಕುರಿತಾಗಿಯೂ ಉಭಯ ನಾಯಕರು ಚರ್ಚಿಸಿದರು. 'ಶಾಂತಿಯುತ ಮಾರ್ಗದಲ್ಲಿ ಪರಿಹಾರ ಕಂಡುಕೊಳ್ಳುವ ಮೂಲಕ ಸಂಘರ್ಷಕ್ಕೆ ಅಂತ್ಯ ಹಾಡಬೇಕು' ಎಂಬ ಭಾರತದ ನಿಲುವನ್ನು ಮೋದಿ ಮತ್ತೊಮ್ಮೆ ಪುಟಿನ್ ಅವರಿಗೆ ಸ್ಪಷ್ಟಪಡಿಸಿದರು.

ಹಲವು ಒಪ್ಪಂದ: '2030ರ ಆರ್ಥಿಕ ಕಾರ್ಯಕ್ರಮ'ವನ್ನು ಅಂತಿಮಗೊಳಿಸಿದ ಉಭಯ ದೇಶಗಳು, ಇದೇ ವೇಳೆ ಹಲವು ಒಪ್ಪಂದಗಳಿಗೆ ಸಹಿ ಹಾಕಿದವು.

ಮಾನವ ಸಂಪನ್ಮೂಲ ವಿನಿಮಯ ಒಪ್ಪಂದಕ್ಕೆ ಎರಡೂ ದೇಶಗಳು ಸಹಿ ಹಾಕಿದವು. ಇದರಿಂದ ಉಭಯ ದೇಶಗಳ ಜನರಿಗೆ ಉದ್ಯೋಗಾವಕಾಶಗಳು ದೊರೆಯಲಿವೆ. ಅಲ್ಲದೇ, ಅನಿಯಂತ್ರಿತ ವಲಸೆಗೆ ಕಡಿವಾಣ ಹಾಕುವುದಕ್ಕೆ ಸಂಬಂಧಿಸಿದ ಮತ್ತೊಂದು ಒಪ್ಪಂದಕ್ಕೂ ಸಹಿ ಹಾಕಲಾಗಿದೆ.

ಆರೋಗ್ಯ, ವಲಸೆ, ಆಹಾರ ಸುರಕ್ಷತೆ, ಕಡಲಯಾನ, ವಿನಿಮಯ ಕಾರ್ಯಕ್ರಮ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿನ ಸಹಕಾರವನ್ನು ಮತ್ತಷ್ಟು ಹೆಚ್ಚಿಸುವ ಅಂಶಗಳನ್ನು ಒಳಗೊಂಡ ಒಪ್ಪಂದಗಳಿಗೂ ಭಾರತ–ರಷ್ಯಾ ಅಂಕಿತ ಹಾಕಿವೆ.



ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ನವದೆಹಲಿಯಲ್ಲಿ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರಿಗೆ ಭಗವದ್ಗೀತೆಯ ಪ್ರತಿಯನ್ನು ನೀಡಿದರು–ಪಿಟಿಐ ಚಿತ್ರ

ಪ್ರಮುಖ ಘೋಷಣೆಗಳು

- ರಷ್ಯಾ ಪ್ರಜೆಗಳಿಗೆ 30 ದಿನಗಳ ಉಚಿತ ಇ–ಪ್ರವಾಸಿ ವೀಸಾ ಕಾರ್ಯಕ್ರಮಕ್ಕೆ ಶೀಘ್ರವೇ ಚಾಲನೆ
- ರಷ್ಯಾ ಪ್ರಜೆಗಳಿಗೆ 30 ದಿನಗಳ 'ಗ್ರೂಪ್ ಟೂರಿಸ್ಟ್' ವೀಸಾ ಸೌಲಭ್ಯ

'ಜಂಟಿ ಕಂಪನಿಗಳ ಸ್ಥಾಪನೆ'

ನವದೆಹಲಿ: ಸಶಸ್ತ್ರ ಪಡೆಗಳಿಗೆ ಅಗತ್ಯವಿರುವ ಬಿಡಿಭಾಗಗಳು ಹಾಗೂ ಇತರ ಸಾಧನಗಳನ್ನು ಸ್ಥಳೀಯವಾಗಿಯೇ ತಯಾರಿಸಲು ಉಭಯ ದೇಶಗಳ ಸಹಭಾಗಿತ್ವದ ಕಂಪನಿಗಳನ್ನು ಸ್ಥಾಪಿಸಲು ರಷ್ಯಾ ಶುಕ್ರವಾರ ಸಮ್ಮತಿಸಿದೆ.

'ತಂತ್ರಜ್ಞಾನ ವರ್ಗಾವಣೆ' ಹಾಗೂ 'ಮೂರನೇ ಮಿತ್ರ ರಾಷ್ಟ್ರಗಳ ನಡುವೆ ಪರಸ್ಪರ ನೆರವು' ತತ್ವದಡಿ, ರಕ್ಷಣಾ ಸಾಮಗ್ರಿಗಳನ್ನು ಭಾರತಕ್ಕೆ ರಫ್ತು ಮಾಡುವುದಕ್ಕೂ ರಷ್ಯಾ ಒಪ್ಪಿಗೆ ನೀಡಿದೆ. ಆದರೆ, ಭಾರತದಲ್ಲಿ ತಯಾರಿಸಲಾಗುವ ಮಿಲಿಟರಿ ಸಾಮಗ್ರಿಗಳ ಕುರಿತ ವಿವರಗಳನ್ನು ಅಧಿಕಾರಿಗಳು ಬಹಿರಂಗಪಡಿಸಿಲ್ಲ.

ರಷ್ಯಾ, ಉಕ್ರೇನ್ ಸಂಘರ್ಷ: ಭಾರತ ತಟಸ್ಥವಲ್ಲ, ಶಾಂತಿಯ ಪರ ಮೋದಿ

ನವದೆಹಲಿ(ಪಿಟಿಐ): 'ಉಕ್ರೇನ್ ಹಾಗೂ ರಷ್ಯಾ ನಡುವಿನ ಸಂಘರ್ಷ ವಿಚಾರದಲ್ಲಿ ಭಾರತ ತಟಸ್ಥ ನಿಲುವು ಹೊಂದಿಲ್ಲ. ಈ ಸಂಘರ್ಷ ಕೊನೆಗಾಣಿಸಿ, ಶಾಂತಿ ಸ್ಥಾಪಿಸುವುದರ ಪರ ಇದೆ' ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದ್ದಾರೆ.

'ಉಕ್ರೇನ್ ಹಾಗೂ ರಷ್ಯಾ ನಡುವಿನ ಯುದ್ಧವನ್ನು ನಿಲ್ಲಿಸುವ ಸಂಬಂಧ ನಡೆಯುತ್ತಿರುವ ಇತ್ತೀಚಿನ ಪ್ರಯತ್ನಗಳನ್ನು ಭಾರತ ಬೆಂಬಲಿಸುತ್ತದೆ. ಉಭಯ ದೇಶಗಳ ನಡುವಿನ ಸಂಘರ್ಷಕ್ಕೆ ಸೌಹಾರ್ದಯುತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ನಡೆಯುವ ಎಲ್ಲ ಪ್ರಯತ್ನಗಳಿಗೆ ಭಾರತ ಸಂಪೂರ್ಣ ಬೆಂಬಲ ನೀಡಲಿದೆ' ಎಂದು ಅವರು ಪುಟಿನ್ ಅವರಿಗೆ ಹೇಳಿದರು.

'ಉಕ್ರೇನ್ ಜೊತೆಗೆ ಸಂಘರ್ಷ ಆರಂಭಗೊಂಡ ದಿನದಿಂದಲೂ ನಾವು ಚರ್ಚೆ ನಡೆಸುತ್ತಿದ್ದೇವೆ. ಆಪ್ತ ಸ್ನೇಹಿತನಾಗಿ ನೀವು ಅಲ್ಲಿನ ಪರಿಸ್ಥಿತಿ ಕುರಿತು ನಿಯಮಿತವಾಗಿ ಮಾಹಿತಿ ನೀಡುತ್ತಿರುವಿರಿ. ನಂಬಿಕೆಯೇ ನಮ್ಮ ದೊಡ್ಡ ಶಕ್ತಿಯಾಗಿದೆ' ಎಂದು ಪುಟಿನ್ ಅವರನ್ನು ಉದ್ದೇಶಿಸಿ ಪ್ರಧಾನಿ ಮೋದಿ ಹೇಳಿದರು.

ಮೋದಿ ಅವರ ಮಾತಿಗೆ ಪ್ರತಿಕ್ರಿಯಿಸಿದ ಪುಟಿನ್,'ಉಕ್ರೇನ್ ಜೊತೆಗಿನ ಸಂಘರ್ಷಕ್ಕೆ ಶಾಂತಿಯುತ ಪರಿಹಾರ ಕಂಡುಕೊಳ್ಳಲು ರಷ್ಯಾ ಯತ್ನಿಸುತ್ತಿದೆ' ಎಂದರು.

ಮೋದಿ ಹೇಳಿದ್ದು

- ಭಯೋತ್ಪಾದನೆ ವಿರುದ್ಧ ಎರಡೂ ದೇಶಗಳು ಒಟ್ಟಾಗಿ ಹೋರಾಟ ನಡೆಸುತ್ತಿವೆ
- ಅಂತರರಾಷ್ಟ್ರೀಯ ಉತ್ತರ–ದಕ್ಷಿಣ ಸಾರಿಗೆ ಕಾರಿಡಾರ್,ಉತ್ತರ ಸಮುದ್ರ ಮಾರ್ಗ ಹಾಗೂ ಚೆನ್ನೈ–ವ್ಲಾಡಿವೊಸ್ಟಾಕ್ ಕಾರಿಡಾರ್ ವಿಚಾರದಲ್ಲಿ ರಷ್ಯಾದಿಂದ ಮತ್ತಷ್ಟು ಸಕಾರಾತ್ಮಕ ಪ್ರತಿಕ್ರಿಯೆ ನಿರೀಕ್ಷಿಸಲಾಗುತ್ತದೆ
- ಧ್ರುವ ಪ್ರದೇಶಗಳ ಕಡಲಯಾನಕ್ಕೆ ಭಾರತೀಯ ನಾವಿಕರನ್ನು ಸಜ್ಜುಗೊಳಿಸಲು ರಷ್ಯಾ ನೆರವಿನೊಂದಿಗೆ ತರಬೇತಿ

ವಿಪಕ್ಷ ನಾಯಕರಿಗಿಲ್ಲ ಆಹ್ವಾನ

ನವದೆಹಲಿ (ಪಿಟಿಐ): ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರಿಗೆ ನೀಡಿದ್ದ ಔತಣಕೂಟಕ್ಕೆ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರನ್ನು ಆಹ್ವಾನಿಸದ ಕಾರಣಕ್ಕೆ ಕಾಂಗ್ರೆಸ್ ಸರ್ಕಾರದ ವಿರುದ್ಧ ಹರಿಹಾಯ್ದಿದೆ.

ಅಲ್ಲದೆ, ಔತಣಕೂಟಕ್ಕೆ ಕಾಂಗ್ರೆಸ್ ಸಂಸದ ಶಶಿ ತರೂರ್ ಅವರನ್ನು ಆಹ್ವಾನಿಸಿದ ಸರ್ಕಾರದ ನಡೆಯನ್ನು ಖಂಡಿಸಿರುವ ಕಾಂಗ್ರೆಸ್, ಆಹ್ವಾನ ಸ್ವೀಕರಿಸಿದ ತೂರೂರ್ ಅವರನ್ನೂ ಟೀಕಿಸಿದೆ.

'ಕೇಂದ್ರ ಸರ್ಕಾರ ನಿತ್ಯ ಶಿಷ್ಟಾಚಾರವನ್ನು ಉಲ್ಲಂಘಿಸುತ್ತಿದೆ. ಈ ಮೂಲಕ ಅದು ಪ್ರಜಾಪ್ರಭುತ್ವ ತತ್ವಗಳಲ್ಲಿ ನಂಬಿಕೆ ಹೊಂದಿಲ್ಲ ಎಂಬುದನ್ನು ಸಾಬೀತು ಪಡಿಸುತ್ತಿದೆ' ಎಂದು ಕಾಂಗ್ರೆಸ್‌ನ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಆರೋಪಿಸಿದರು.

'ಈ ಹಿಂದೆ ವಿದೇಶಾಂಗ ವ್ಯವಹಾರಗಳ ಸಮಿತಿ ಅಧ್ಯಕ್ಷರನ್ನು ನಿಯಮಿತವಾಗಿ ಆಹ್ವಾನಿಸಲಾಗುತ್ತಿತ್ತು. ಆದರೆ ಕೆಲ ವರ್ಷಗಳಿಂದ ಈ ಪದ್ಧತಿ ನಿಂತಿತ್ತು. ಈಗ ಪುನರಾರಂಭವಾಗಿದೆ. ನಾನು ಆಹ್ವಾನವನ್ನು ಸ್ವೀಕರಿಸಿದ್ದು, ಹಾಜರಾಗುತ್ತೇನೆ' ಎಂದು ವಿದೇಶಾಂಗ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿ ಅಧ್ಯಕ್ಷರಾಗಿರುವ ಶಶಿ ತರೂರ್ ಪ್ರತಿಕ್ರಿಯಿಸಿದರು.

ವಿಮಾನ ರದ್ದು: ವಿಡಿಯೊ ಕಾನ್ಫರೆನ್ಸ್‌ನಲ್ಲಿ ಆರತಕ್ಷತೆ

ಹುಬ್ಬಳ್ಳಿ: ಹುಬ್ಬಳ್ಳಿಯಲ್ಲಿ ಡಿ.3ರಂದು ನಡೆಯಬೇಕಿದ್ದ ಆರತಅಕ್ಷತೆ ಕಾರ್ಯಕ್ರಮಕ್ಕೆ, ಇಂಡಿಗೊ ಏರ್‌ಲೈನ್ಸ್ ಸಂಸ್ಥೆ ವಿಮಾನಗಳ ಹಾರಾಟ ರದ್ದುಪಡಿಸಿದ ಕಾರಣ ವಧು–ವರ ಇಬ್ಬರಿಗೂ ಬರಲು ಆಗಲಿಲ್ಲ. ಈ ಇಬ್ಬರನ್ನೂ ಅವರ ಸಂಬಂಧಿಕರು ಮತ್ತು ಅಪ್ತರು ವಿಡಿಯೊ ಕಾನ್ಫರೆನ್ಸ್ ಮೂಲಕ ಹಾರೈಸಿದರು.

'ಮಗಳು ಮೇಧಾ ಮತ್ತು ಭುವನೇಶ್ವರದ ಸಂಗಮ ದಾಸ್ ಇಬ್ಬರೂ ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್‌ಗಳು. ವಿವಾಹ ನ.23ರಂದು ಭುವನೇಶ್ವರದಲ್ಲಿ ನಡೆದಿತ್ತು. ಹುಬ್ಬಳ್ಳಿಯಲ್ಲಿ ಡಿ.3ರಂದು ಆರತಕ್ಷತೆ ಕಾರ್ಯಕ್ರಮ ಆಯೋಜಿಸಿದ್ದೆವು' ಎಂದು ಅನಿಲ್‌ಕುಮಾರ್ ಕ್ಷೀರಸಾಗರ ತಿಳಿಸಿದರು.

'ಮೇಧಾ ಮತ್ತು ಸಂಗಮ ದಾಸ್ ಅವರು ಭುವನೇಶ್ವರದಿಂದ ಬೆಂಗಳೂರಿಗೆ ಮತ್ತು ಅಲ್ಲಿಂದ ಹುಬ್ಬಳ್ಳಿಗೆ ಬರಬೇಕಿತ್ತು. ಡಿ.2ರಂದು ಟಿಕೆಟ್ ಬುಕ್ ಮಾಡಿದ್ದೆವು. ಆದರೆ, ವಿಮಾನ ಹಾರಾಟ ವಿಳಂಬವಾಗಿದೆ ಎಂದು ಹೇಳಿದ ಸಿಬ್ಬಂದಿ, ಡಿಸೆಂಬರ್ 3ರ ಬೆಳಿಗ್ಗೆ ವಿಮಾನ ಸಂಚಾರ ರದ್ದು ಆಗಿದೆ ಎಂದರು. ಹೀಗಾಗಿ ಅವರಿಬ್ಬರೂ ಸೇರಿ ಸಂಬಂಧಿಕರು ಎಲ್ಲರೂ ಭುವನೇಶ್ವರದಲ್ಲೇ ಉಳಿಯಬೇಕಾಯಿತು' ಎಂದು ವಿವರಿಸಿದರು.



ಹುಬ್ಬಳ್ಳಿಯ ಗುಜರಾತ್ ಭವನದಲ್ಲಿ ಡಿ.3ರಂದು ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆದ ವಧು–ವರರ ಆರತಕ್ಷತೆ ಕಾರ್ಯಕ್ರಮದಲ್ಲಿ ಸಂಬಂಧಿಕರು ಭಾಗವಹಿಸಿದ್ದರು

ಹಾರದ ವಿಮಾನ, ಪ್ರಯಾಣಿಕರು ಹೈರಾಣ

ಒಂದನೇ ಪುಟದಿಂದ...

ವಿಮಾನ ನಿಲ್ದಾಣದವರೆಗೂ ಬಂದು ವಿಮಾನ ಏರಲು ಆಗದ ಮತ್ತು ನಿಗದಿತ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸಾಧ್ಯವಾಗದ ಪ್ರಯಾಣಿಕರು ಸಂಸ್ಥೆಯ ಸಿಬ್ಬಂದಿಯ ಜೊತೆ ವಾಗ್ವಾದ ನಡೆಸುತ್ತಿದ್ದ ದೃಶ್ಯಗಳು ಹಲವು ನಿಲ್ದಾಣಗಳಲ್ಲಿ ಕಂಡುಬಂದವು. ಮಕ್ಕಳು ಹಾಗೂ ಹಿರಿಯರು ಸಿಕ್ಕ ಖಾಲಿ ಜಾಗದಲ್ಲೇ ವಿಶ್ರಾಂತಿಗೆ ಮೊರೆ ಹೋದರು.

ಮಾಹಿತಿ ಪಡೆಯಿರಿ: ವಿಮಾನಗಳ ಹಾರಾಟದ ಸ್ಥಿತಿಗತಿ ಕುರಿತಂತೆ ಮುಂಚಿತವಾಗಿ ಮಾಹಿತಿ ಪಡೆದುಕೊಂಡು ನಂತರವೇ ವಿಮಾನ ನಿಲ್ದಾಣಕ್ಕೆ ಪ್ರಯಾಣಿಸುವಂತೆ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ) ಹಾಗೂ ಇಂಡಿಗೊ ಏರ್‌ಲೈನ್ಸ್ ಮನವಿ ಮಾಡಿದೆ.

ಮುಂದಿನ ವಾರದವರೆಗೂ ಜಮ್ಮು–ನವದೆಹಲಿ ನಡುವೆ ಸಂಚರಿಸುವ ರಾಜಧಾನಿ, ಎಕ್ಸ್‌ಪ್ರೆಸ್ ರೈಲಿಗೆ ಹೆಚ್ಚುವರಿ ಬೋಗಿ ಸೇರಿಸುವುದಾಗಿ ರೈಲ್ವೆ ಇಲಾಖೆ ಹೇಳಿದೆ. ಸದ್ಯದ ನೈಜ ಪರಿಸ್ಥಿತಿಯ ಮೇಲೆ ನಿಗಾ ವಹಿಸಿ, ಪರಿಣಾಮಕಾರಿಯಾದ ಸಮನ್ವಯದ ಜೊತೆಗೆ ತಕ್ಷಣದ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಕೇಂದ್ರ ವಿಮಾನಯಾನ ಸಚಿವಾಲಯವು 24*7 ಗಂಟೆ ಕಾರ್ಯನಿರ್ವಹಿಸುವ ನಿಯಂತ್ರಣ ಕೊಠಡಿಯನ್ನು ತೆರೆದಿದೆ. ಸಂಪರ್ಕ ದೂರವಾಣಿ ಸಂಖ್ಯೆ: 011-24610843, 011-24693963, 096503-91859

'ಇಂಡಿಗೊ' ಸಂಸ್ಥೆಗೆ ಪೈಲಟ್‌ಗಳ ವಿಶ್ರಾಂತಿ ನೀತಿಯಿಂದ ಡಿಜಿಸಿಎ ರಿಯಾಯಿತಿ ನೀಡಿರುವುದು ಅಯ್ದ ಹಾಗೂ ಅಸುರಕ್ಷಿತ ನಿರ್ಧಾರವಾಗಿದೆ

ಸ್ಯಾಮ್ ಥಾಮಸ್, ಭಾರತೀಯ ಪೈಲಟ್‌ಗಳ ಒಕ್ಕೂಟದ ಅಧ್ಯಕ್ಷ

ಫೆ. 10ರವರೆಗೆ ವಿಶ್ರಾಂತಿ ನೀತಿಗೆ ತಡೆ

ಒಂದನೇ ಪುಟದಿಂದ...

'ಮುಂದಿನ ಮೂರು ದಿನಗಳಲ್ಲಿ ಎಲ್ಲ ವಿಮಾನಗಳ ಹಾರಾಟವು ಸಹಜಸ್ಥಿತಿಗೆ ಮರಳಲಿದ್ದು, ವಿಮಾನಗಳ ಹಾರಾಟದ ವ್ಯತ್ಯಯಕ್ಕೆ ಕಾರಣ ಹಾಗೂ ಹೊಣೆಗಾರಿಕೆ ಕುರಿತಂತೆ ಉನ್ನತ ಮಟ್ಟದ ತನಿಖೆಗೆ ಆದೇಶಿಸಲಾಗಿದೆ' ಎಂದು ಅವರು ಹೇಳಿಕೆ ನೀಡಿದ್ದಾರೆ.

ಈಗ ಇಂಡಿಗೊ ಏರ್‌ಲೈನ್ಸ್‌ನಲ್ಲಿ ಸೃಷ್ಟಿಯಾಗಿರುವ ವಿಮಾನಗಳ ಹಾರಾಟವನ್ನು ಸಹಜಸ್ಥಿತಿಗೆ ತರಲು ತುರ್ತು ಹಾಗೂ ಪೂರ್ವಭಾವಿ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ನಾಯ್ಡು ಹೇಳಿದ್ದಾರೆ.

'ಎಫ್‌ಡಿಟಿಎಲ್ ಆದೇಶವನ್ನು ಡಿಜಿಸಿಎ ತಕ್ಷಣದಿಂದಲೇ ತಡೆಹಿಡಿದಿದೆ. ಪ್ರಯಾಣಿಕರ ಸುರಕ್ಷತೆಯನ್ನು ಖಾತರಿಪಡಿಸಿಕೊಳ್ಳುವ ಜೊತೆಗೆ ಹಿರಿಯ ನಾಗರಿಕರು, ವಿದ್ಯಾರ್ಥಿಗಳು, ರೋಗಿಗಳು ನಿಗದಿತ ಸಮಯದಲ್ಲಿ ಪ್ರಯಾಣ ಮಾಡಲು ಅನುವು ಮಾಡಿಕೊಡುವ ದೃಷ್ಟಿಯಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ' ಎಂದು ಅವರು ಸ್ಪಷ್ಟಪಡಿಸಿದ್ದಾರೆ. 'ನೂತನ ನೀತಿ ಅಳವಡಿಸಿಕೊಳ್ಳಲು ಎರಡು ವರ್ಷಗಳ ಸಮಯವಿತ್ತು. ಹೀಗಿದ್ದರೂ ಕೂಡ ನಮ್ಮ ತಪ್ಪು ನಿರ್ಣಯದಿಂದಲೇ ಇಡೀ ಕಾರ್ಯಾಚರಣೆ ಸ್ಥಗಿತಗೊಳ್ಳಲು ಕಾರಣವಾಯಿತು' ಎಂದು ಇಂಡಿಗೊ ಏರ್‌ಲೈನ್ಸ್ ಸಂಸ್ಥೆಯು ಡಿಜಿಸಿಎ ಮುಂದೆ ಒಪ್ಪಿಕೊಂಡಿದೆ.

ಪ್ರಯಾಣಿಕರ ಸುರಕ್ಷತೆಯಿಂದ ಪೈಲಟ್‌ಗಳಿಗೆ ಹೆಚ್ಚಿನ ವಿಶ್ರಾಂತಿ ನೀಡುವ ಹೊಸ ನೀತಿಯು ಕಳೆದ ತಿಂಗಳಿನಿಂದಲೇ ಜಾರಿಗೊಳಿಸಿದೆ. ಇಂಡಿಗೊ ಏರ್‌ಲೈನ್ಸ್ 2 ಸಾವಿರ ಮಾರ್ಗಗಳಲ್ಲಿ ವಿಮಾನ ಹಾರಾಟ ನಡೆಸುತ್ತಿದ್ದು, ದೇಶಿಯ ವಾಯುಮಾರ್ಗದಲ್ಲಿ ಶೇಕಡ 60ರಷ್ಟು ಪಾಲು ಹೊಂದಿದೆ. ವಿಮಾನಗಳ ಹಾರಾಟ ರದ್ದು ಕುರಿತಂತೆ ಸಮಗ್ರ ವಿಮರ್ಶೆ ಹಾಗೂ ಮೌಲ್ಯಮಾಪನ ನಡೆಸಿ ಸರ್ಕಾರಕ್ಕೆ ವರದಿ ನೀಡಲು ಡಿಜಿಸಿಎ ನಾಲ್ವರು ಸದಸ್ಯರ ಸಮಿತಿಯನ್ನು ರಚಿಸಿದೆ.

ಸಾವಿರ ಮಾರ್ಗಗಳಲ್ಲಿ ಇಂದೂ ಸಂಚಾರ ವ್ಯತ್ಯಯ

ನವದೆಹಲಿ (ಪಿಟಿಐ): 'ಶನಿವಾರ ಸಹ ಸುಮಾರು ಒಂದು ಸಾವಿರ ಮಾರ್ಗಗಳಲ್ಲಿ ಸಂಸ್ಥೆಯ ವಿಮಾನ ಹಾರಾಟ ರದ್ದಾಗಲಿದ್ದು, ಡಿಸೆಂಬರ್ 10ರಿಂದ 15ರ ವೇಳೆಗೆ ಸಂಚಾರ ಸಹಜಸ್ಥಿತಿಗೆ ಬರಲಿದೆ' ಎಂದು ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಪೀಟರ್ ಎಲ್ಬರ್ಸ್ ತಿಳಿಸಿದ್ದಾರೆ.

ಶುಕ್ರವಾರ ಅರ್ಧಕ್ಕಿಂತ ವಿಮಾನಗಳ ಹಾರಾಟ ರದ್ದುಗೊಂಡು ಪ್ರಯಾಣಿಕರಿಗೆ ಅಡಚಣೆ ಉಂಟಾದ ಕುರಿತು ವಿಡಿಯೊ ಸಂದೇಶದಲ್ಲಿ ಕ್ಷಮೆಯಾಚಿಸಿದ್ದಾರೆ.

'ಕಳೆದ ಕೆಲವು ದಿನಗಳಿಂದ ನಾವು ತೆಗೆದುಕೊಂಡ ಕ್ರಮಗಳು ಸಾಕಾಗುವುದಿಲ್ಲ ಎಂದು ಸಾಬೀತಾಗಿದೆ. ಆದ್ದರಿಂದ, ಎಲ್ಲ ವ್ಯವಸ್ಥೆಗಳು ಹಾಗೂ ವೇಳಾಪಟ್ಟಿಯನ್ನು ಮರುನಿಗದಿಪಡಿಸಲು ಪ್ರಯತ್ನಿಸುತ್ತಿದ್ದೇವೆ' ಎಂದು ಹೇಳಿದ್ದಾರೆ.

ಈ ಕ್ರಮಗಳಿಂದ ಶನಿವಾರವೂ ವಿಮಾನ ಹಾರಾಟ ಮಾರ್ಗದ ರದ್ದತಿ ಸಾವಿರಕ್ಕೂ ಕಡಿಮೆ ಇರಲಿದೆ. ಎಫ್‌ಡಿಟಿಎಲ್ ಜಾರಿಗೆ ಡಿಜಿಸಿಎ ತಾತ್ಕಾಲಿಕ ತಡೆ ನೀಡಿರುವುದು ದೊಡ್ಡಮಟ್ಟದ ಸಹಾಯವಾಗಿದೆ' ಎಂದು ಎಲ್ಬರ್ಸ್ ತಿಳಿಸಿದ್ದಾರೆ.

ಪ್ರಯಾಣಿಕರ ಆಕ್ರೋಶ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 'ಇಂಡಿಗೊ'ದ 102 ವಿಮಾನಗಳು ಶುಕ್ರವಾರ ಹಾರಾಟ ನಡೆಸಲಿಲ್ಲ. ಹತಾಶ ಪ್ರಯಾಣಿಕರು ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡರು.

ಬೆಂಗಳೂರಿಗೆ ಶುಕ್ರವಾರ ಬರಬೇಕಿದ್ದ ಒಟ್ಟು 52 ಇಂಡಿಗೊ ವಿಮಾನಗಳು ರದ್ದಾಗಿವೆ. ಇಲ್ಲಿಂದ ಹೊರಡಬೇಕಿದ್ದ 50 ವಿಮಾನಗಳ ಕಾರ್ಯಾಚರಣೆ ರದ್ದು ಮಾಡಲಾಗಿದೆ. ಗುರುವಾರ ರಾತ್ರಿ ಹೊರಡಬೇಕಿದ್ದ ವಿಮಾನಗಳು ಶುಕ್ರವಾರ ಬೆಳಗ್ಗೆ ಪ್ರಯಾಣ ಆರಂಭಿಸಿದವು.

ಟರ್ಮಿನಲ್‌ಗಳಲ್ಲಿ ಕಾದು ಕುಳಿತಿದ್ದ ಪ್ರಯಾಣಿಕರಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಟರ್ಮಿನಲ್ ಮೆಟ್ಟಿಲು, ಲಾಂಜ್‌ನಲ್ಲಿ ಲಗೇಜ್ ಸಮೇತ ಕಾಯುತ್ತಿದ್ದ ದೃಶ್ಯ ಕಂಡು ಬಂದಿತು. ಸಣ್ಣ ಮಕ್ಕಳನ್ನು ಕರೆ ತಂದಿದ್ದ ಪ್ರಯಾಣಿಕರು, ಡೈಪರ್ ವ್ಯವಸ್ಥೆ ಮಾಡಿಕೊಡಲು ಸಿಬ್ಬಂದಿಗೆ ಮನವಿ ಮಾಡಿದರು.

ಕೇಂದ್ರ ಸರ್ಕಾರವು ಏಕಸ್ವಾಮ್ಯದ ಮಾದರಿಯನ್ನು ಪೋಷಿಸಿದ ಪರಿಣಾಮ ಇದು. ಸರ್ಕಾರದ ಈ ನಿಲುವಿಗಾಗಿ ಸಾಮಾನ್ಯ ಭಾರತೀಯರು ಬೆಲೆ ತೆರುವಂತಾಗಿದೆ. ವಿಮಾನಗಳ ವಿಳಂಬ, ರದ್ದತಿಯಿಂದ ಪ್ರಯಾಣಿಕರು ಅಸಹಾಯಕರಾಗಿದ್ದಾರೆ

ರಾಹುಲ್ ಗಾಂಧಿ, ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ

'ಇಂಡಿಗೊ' ಸಮಸ್ಯೆಯಿಂದ ಸಾವಿರಾರು ಪ್ರಯಾಣಿಕರಂತೆ ನಾನು ಕೂಡ ಸಂಕಷ್ಟಕ್ಕೆ ಸಿಲುಕಿದ್ದೇನೆ. ನನ್ನ ಕಿರಿಯ ಸಹೋದ್ಯೋಗಿಯ ಮದುವೆಯಲ್ಲಿ ಭಾಗವಹಿಸಲು ಸಾಧ್ಯವಾಗದಿರುವ ಕುರಿತು ಕ್ಷಮೆಯಾಚಿಸುತ್ತೇನೆ

ಸೈಮನ್ ವಾಂಗ್, ಭಾರತದಲ್ಲಿ ಸಿಂಗಪುರ ರಾಯಭಾರಿ

ಆದಾಯ ಮಿತಿ ದಾಟಿದ್ದರೆ ಕೆನೆ ಪದರ ವ್ಯಾಪ್ತಿಗೆ: ಸರ್ಕಾರದ ಮೇಲ್ಮನವಿ ಮಾನ್ಯ

₹8 ಲಕ್ಷ ದಾಟಿದರೆ ಮೀಸಲು ಅಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರವರ್ಗ 2-ಎ (ಹಿಂದುಳಿದ ವರ್ಗ) ಅಡಿಯಲ್ಲಿ ಪೋಷಕರ ವಾರ್ಷಿಕ ಆದಾಯ ನಿಗದಿತ ಮಿತಿಯನ್ನು ದಾಟಿದ್ದರೆ ಅಭ್ಯರ್ಥಿಯು ಕೆನೆ ಪದರ ವ್ಯಾಪ್ತಿಗೆ ಒಳಪಡುತ್ತಾರೆ. ಹಾಗಾಗಿ, ಅವರು ಮೀಸಲಾತಿ ಪತ್ರ ಪಡೆಯಲು ಅನರ್ಹರಾಗುತ್ತಾರೆ' ಎಂದು ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಾತಿ, ಆದಾಯ ಪರಿಶೀಲನಾ ಮೇಲ್ಮನವಿ ಪ್ರಾಧಿಕಾರ ಮತ್ತು ಧಾರವಾಡ ಜಿಲ್ಲಾ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿ ಅಧ್ಯಕ್ಷರು ಸಲ್ಲಿಸಿದ್ದ ರಿಟ್ ಮೇಲ್ಮನವಿ ಮತ್ತು ನ್ಯಾಯಾಂಗ ನಿಂದನಾ ಅರ್ಜಿಗಳ (ಡಬ್ಲ್ಯು.ಎ 301/2025 ಜಿ–ಎಂ ಸಿಸಿ ಮತ್ತು ಸಿಸಿಪಿ 74/2025) ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.



ಸರ್ಕಾರದ ಪರ ವಾದ ಮಂಡಿಸಿದ್ದ ನಮಿತಾ ಮಹೇಶ್ ಅವರ ವಾದವನ್ನು ಮನ್ನಿಸಿರುವ ನ್ಯಾಯಪೀಠ, 'ಅಭ್ಯರ್ಥಿಯ ಪೋಷಕರ ಸಂಬಳವೂ ಸೇರಿದಂತೆ ಎಲ್ಲ ಮೂಲಗಳ ಆದಾಯವನ್ನು ಪರಿಗಣಿಸಬೇಕು. ಒಂದು ವೇಳೆ ಆದಾಯವು ನಿಗದಿತ ಮಿತಿಯನ್ನು ದಾಟಿದ್ದರೆ, ಆದಾಯ ತೆರಿಗೆ ಪಾವತಿದಾರ ಆಗಿದ್ದರೆ ಆಗ ಆತನಿಗೆ ಕೆನೆ ಪದರ ನಿಯಮ ಅನ್ವಯ ಆಗುತ್ತದೆ ಮತ್ತು ಅಭ್ಯರ್ಥಿಯು ಪ್ರವರ್ಗ 2-ಎ ಅಡಿ ಮೀಸಲಾತಿಯ ಅಧಿಕಾರ ಹೊಂದುವ ಬೇಡಿಕೆ ಸಲ್ಲಿಸಲು ಅವಕಾಶ ಹೊಂದಿರುವುದಿಲ್ಲ' ಎಂದು ತೀರ್ಪಿನಲ್ಲಿ ವಿವರಿಸಿದೆ.

ಪ್ರಕರಣವೇನು?

ಕೆಪಿಟಿಸಿಎಲ್ ಸಹಾಯಕ ಎಂಜಿನಿಯರ್ ಹುದ್ದೆಗೆ ಅರ್ಜಿ ಸಲ್ಲಿಸಿದ್ದ ಧಾರವಾಡದ ರಾಘವೇಂದ್ರ ಫಕ್ಕೀರಪ್ಪ ಚಂದ್ರಣ್ಣನವರ ಪ್ರವರ್ಗ 2-ಎ (ಕುರುಬ ಜಾತಿ) ಅಡಿ ಆಯ್ಕೆಯಾಗಿದ್ದರು. ಅದರಂತೆ ಮೀಸಲಾತಿ ಪತ್ರಕ್ಕಾಗಿ ಜಿಲ್ಲಾ ಜಾತಿ ಮತ್ತು ಆದಾಯ ಪರಿಶೀಲನೆ ಸಮಿತಿಗೆ ಅರ್ಜಿ ಸಲ್ಲಿಸಿದ್ದರು.

ಸಮಿತಿಯು, 'ಅಭ್ಯರ್ಥಿಯ ಪೋಷಕರ ಆದಾಯವು ಪ್ರವರ್ಗ-2ಎಗೆ ನಿಗದಿಪಡಿಸಿರುವ ವಾರ್ಷಿಕ ಆದಾಯ ಮಿತಿಯಾದ ₹8 ಲಕ್ಷ ಮೀರುತ್ತಿರುವ ಕಾರಣ ಅವರು ಹಿಂದುಳಿದ ವರ್ಗಗಳಡಿ ಮೀಸಲಾತಿ ಪಡೆಯಲು ಅರ್ಹರಲ್ಲ' ಎಂದು ಆದೇಶಿಸಿತ್ತು.

ಇದನ್ನು ಪ್ರಶ್ನಿಸಿ ರಾಘವೇಂದ್ರ ಹೈಕೋರ್ಟ್ ಮೆಟ್ಟಿಲೇರಿದ್ದರು. ಪ್ರಕರಣದ ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ 2024ರ ಅಕ್ಟೋಬರ್‌ನಲ್ಲಿ, 'ಅಭ್ಯರ್ಥಿಯು ಮೀಸಲಾತಿ ಸೌಲಭ್ಯ ಪಡೆಯಲು ಅರ್ಹ' ಎಂದು ತೀರ್ಪು ನೀಡಿತ್ತು. ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಸರ್ಕಾರ ವಿಭಾಗೀಯ ನ್ಯಾಯಪೀಠದಲ್ಲಿ ಪ್ರಶ್ನಿಸಿತ್ತು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಭಾಗ್ಯವಿರಬಹುದು, ಬೇಕಾದವರು ಇರಬಹುದು, ಫಲ ಮಾತ್ರ ಪಡೆದಷ್ಟೆ.

–ಎ.ಆರ್. ಕೃಷ್ಣಶಾಸ್ತ್ರಿ

ಸಂಪಾದಕೀಯ

ದ್ವೇಷಭಾಷಣ ತಡೆಗೆ ಕಾನೂನು ದಿಟ್ಟ ನಡೆ, ಎಚ್ಚರವೂ ಅಗತ್ಯ

ಸಾರ್ವಜನಿಕ ವೇದಿಕೆಗಳ ಮೂಲಕ ಆಡುವ ಹಲವು ಮಾತುಗಳಲ್ಲಿ ದ್ವೇಷಭಾವನೆ, ಪೂರ್ವಗ್ರಹಗಳು ತುಂಬಿರುವ ಕಾಲಘಟ್ಟದಲ್ಲಿ 'ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷಾಪರಾಧಗಳ (ಪ್ರತಿಬಂಧಕ) ಮಸೂದೆ– 2025'ನ್ನು ಜಾರಿಗೆ ತರುವ ರಾಜ್ಯ ಸರ್ಕಾರದ ನಿರ್ಧಾರ ಬಹು ದಿಟ್ಟವಾದ ನಡೆ. ಹಾಗೆಯೇ ವಿವಾದಾತ್ಮಕ ಆದುದೂ ಹೌದು. ಆಧುನಿಕ ಕಾಲಘಟ್ಟದಲ್ಲಿ ದ್ವೇಷ ಭಾಷಣಗಳನ್ನು, ಅದರಲ್ಲೂ ಮುಖ್ಯವಾಗಿ ಆನ್‌ಲೈನ್ ವೇದಿಕೆಗಳ ಮೂಲಕ ಆಡುವ ನಂಜಿನ ಮಾತುಗಳನ್ನು ತಡೆಯಲು ಈಗಿರುವ ಕಾನೂನು ಅಸ್ತ್ರಗಳು ಸಾಕಾಗುತ್ತಿಲ್ಲ ಎಂದು ರಾಜ್ಯ ಸರ್ಕಾರಗಳು ಹೇಳುತ್ತಿವೆ. ಈಗ ಕರ್ನಾಟಕ ಸರ್ಕಾರ ರೂಪಿಸಿರುವ ಮಸೂದೆಯು ಇಂತಹ ಕ್ರಿಮಿನಲ್ ಅಪರಾಧಗಳನ್ನು ತಡೆಯಲು ಸಮಗ್ರವಾದ ಚೌಕಟ್ಟೊಂದನ್ನು ಹಾಕಿಕೊಟ್ಟಿದೆ. ಆದರೆ, ಕೆಲವು ಸಾಂವಿಧಾನಿಕ ಮಿತಿಗಳನ್ನು ಈ ಮಸೂದೆಯಲ್ಲಿ ಅಡಕವಾಗಿಸದೆ ಇದ್ದಲ್ಲಿ, ಮಸೂದೆಯು ತಪ್ಪಾಗಿ ಬಳಕೆಯಾಗುವ ಅಪಾಯಗಳೂ ಇವೆ.

ಈ ಮಸೂದೆಯು ಸ್ಪಷ್ಟವಾದ ಹಾಗೂ ವಿಸ್ತೃತವಾದ ವ್ಯಾಖ್ಯಾನಗಳನ್ನು ಒಳಗೊಂಡಿದೆ. 'ದ್ವೇಷ ಭಾಷಣ' ಎನ್ನುವುದರ ಅರ್ಥವು, ಮಾತಿನ ಮೂಲಕ, ಬರಹದ ಮೂಲಕ, ಚಿತ್ರಗಳ ಮೂಲಕ, ವಿದ್ಯುನ್ಮಾನ ವೇದಿಕೆ ಬಳಕೆಯ ಮೂಲಕ ಗಾಸಿಗೊಳಿಸುವ, ಸೌಹಾರ್ದ ಕದಡುವ, ವ್ಯಕ್ತಿಯ ಅಥವಾ ಗುಂಪಿನ ವಿರುದ್ಧ ದ್ವೇಷ ಮೂಡಿಸುವಂತಹ ಸಂದೇಶ ರವಾನಿಸುವುದು ಎಂಬುದಾಗುತ್ತದೆ. ಹೀಗೆ ದ್ವೇಷ ಮೂಡಿಸುವ ಯತ್ನವು ಧರ್ಮ, ಜಾತಿ, ಜನಾಂಗ, ಭಾಷೆ, ಲಿಂಗ, ಲೈಂಗಿಕ ಅಭಿವ್ಯಕ್ತಿ, ಅಂಗವೈಕಲ್ಯ, ಹುಟ್ಟಿದ ಸ್ಥಳ, ಪಂಗಡವನ್ನು ಆಧರಿಸಿ ನಡೆದಾಗ ಅದು ಅಪರಾಧ ಎಂದು ಮಸೂದೆಯು ಹೇಳುತ್ತದೆ. ಇಂತಹ ಭಾಷಣಗಳ ಪ್ರಸರಣ ಹಾಗೂ ಉತ್ತೇಜನ ನೀಡುವುದು 'ದ್ವೇಷಾಪರಾಧ' ಆಗುತ್ತದೆ ಎಂದು ಮಸೂದೆಯು ಹೇಳುತ್ತದೆ. ಈ ಅಪರಾಧಗಳಿಗೆ ಕನಿಷ್ಠ ಒಂದು ವರ್ಷದಿಂದ ಗರಿಷ್ಠ ಏಳು ವರ್ಷಗಳವರೆಗೆ ಜೈಲುಶಿಕ್ಷೆ ವಿಧಿಸಲು ಮಸೂದೆಯಲ್ಲಿ ಅವಕಾಶ ನೀಡಲಾಗಿದೆ. ಮತ್ತೆ ಮತ್ತೆ ಇದೇ ಅಪರಾಧ ಎಸಗುವವರನ್ನು ಗರಿಷ್ಠ 10 ವರ್ಷಗಳವರೆಗೆ ಜೈಲುವಾಸಕ್ಕೆ ಗುರಿಪಡಿಸಬಹುದಾಗಿದೆ. ಇವು ಗಂಭೀರ ಸ್ವರೂಪದ ಅಪರಾಧ ಕೃತ್ಯಗಳು ಎಂದು ಪರಿಗಣಿಸಲಾಗುತ್ತದೆ, ಇವು ಜಾಮೀನು ರಹಿತವಾಗಲಿವೆ. ಇಂತಹ ಅಪರಾಧ ಕೃತ್ಯಗಳಿಂದ ಸಂತ್ರಸ್ತರಾದವರಿಗೆ ಪರಿಹಾರ ನೀಡಲು ನ್ಯಾಯಾಲಯಗಳಿಗೆ ಅವಕಾಶ ಇರಲಿದೆ. ಈ ಮಸೂದೆಯು ಈಗಾಗಲೇ ಜಾರಿಯಲ್ಲಿರುವ ಕೇಂದ್ರದ ಕೆಲವು ಕಾನೂನುಗಳಿಗಿಂತ ಹೆಚ್ಚು ವ್ಯಾಪ್ತಿಯನ್ನು ಹೊಂದಿರಲಿದೆ. ದ್ವೇಷ ಹರಡುವ ಅಪರಾಧವನ್ನು ಈ ಹಿಂದಿನ ಭಾರತೀಯ ದಂಡ ಸಂಹಿತೆಯು ಗುರುತಿಸಿದ್ದ ಬಗೆಯಲ್ಲೇ ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ಕೆಲವು ಸೆಕ್ಷನ್‌ಗಳೂ ಗುರುತಿಸಿವೆ. ಆದರೆ, ಅದನ್ನೊಂದು ಪ್ರತ್ಯೇಕ ಅಪರಾಧವನ್ನಾಗಿ ವ್ಯಾಖ್ಯಾನಿಸುವ ಕೆಲಸವನ್ನು ಬಿಎನ್‌ಎಸ್ ಮಾಡಿಲ್ಲ. ರಾಜ್ಯ ಸರ್ಕಾರ ಸಿದ್ಧಪಡಿಸಿರುವ ಮಸೂದೆಯು ಆ ಕೆಲಸ ಮಾಡಿದೆ, ದಂಡದ ಮೊತ್ತವನ್ನು ಹೆಚ್ಚಿಸಿದೆ; ಪೊಲೀಸರಿಗೆ ಹೆಚ್ಚಿನ ಅಧಿಕಾರ ನೀಡಿದೆ. ಮುಖ್ಯವಾಗಿ, ಈ ಮಸೂದೆಯು ಡಿಜಿಟಲ್ ಮಧ್ಯವರ್ತಿಗಳನ್ನು ನಿಯಂತ್ರಣಕ್ಕೆ ಒಳಪಡಿಸುತ್ತದೆ, ನಿಯೋಜಿತ ಅಧಿಕಾರಿಗೆ ಆನ್‌ಲೈನ್ ವಿಷಯ–ವಸ್ತುವನ್ನು ತೆಗೆಯಲು ಅಥವಾ ತಡೆಹಿಡಿಯಲು ಅಧಿಕಾರ ನೀಡುತ್ತದೆ. ಈ ಬಗೆಯ ಅವಕಾಶವು ಬಿಎನ್‌ಎಸ್‌ನಲ್ಲಿ ಇಲ್ಲ. ಆದರೆ, ಈ ವಿಶೇಷ ಅಧಿಕಾರವೇ ಮಸೂದೆಯು ದುರ್ಬಳಕೆ ಆಗಬಹುದು ಎಂಬ ಕಳವಳಕ್ಕೆ ಕಾರಣವಾಗಿದೆ.



ದ್ವೇಷ ಭಾಷಣಗಳನ್ನು ತಡೆಯುವ ಸರ್ಕಾರದ ಉದ್ದೇಶ ಒಳ್ಳೆಯದು. ಆದರೆ, ವಿರೋಧಿಗಳ ಧ್ವನಿ ಹತ್ತಿಕ್ಕಲು ಇದು ಬಳಕೆಯಾಗುವ ಆತಂಕ ಇದ್ದೇ ಇದೆ.

ಮಸೂದೆಯು ನೀಡಿರುವ ವ್ಯಾಖ್ಯಾನವು 'ವೈರತ್ವ' ಅಥವಾ 'ಗಾಸಿಗೊಳಿಸುವುದು' ಎಂಬ ಪದಗಳನ್ನು ಆಧರಿಸಿದೆ. ಈ ಪದಗಳನ್ನು ವಿಶಾಲ ಅರ್ಥದಲ್ಲಿ ವ್ಯಾಖ್ಯಾನಿಸಬಹುದು. ಅತ್ಯುತ್ಸಾಹದಲ್ಲಿ ಇರುವ, ಪಕ್ಷಪಾತಿಯಾದ ಆಡಳಿತ ವ್ಯವಸ್ಥೆಯೊಂದರ ಕೈಗೆ ಇಂತಹ ಪದಗಳನ್ನು ವ್ಯಾಖ್ಯಾನಿಸುವ ಅಧಿಕಾರ ದೊರೆತಾಗ ಅದು ತನ್ನ ಟೀಕಾಕಾರರ, ಪತ್ರಕರ್ತರ ಅಥವಾ ರಾಜಕೀಯ ವಿರೋಧಿಗಳ ದನಿ ಅಡಗಿಸಲು ಬಳಸಬಹುದು. ಈ ಅಪರಾಧಗಳನ್ನು ಜಾಮೀನುರಹಿತ ಎಂದು ಗುರುತಿಸಿರುವ ಪರಿಣಾಮವಾಗಿ, ಆರೋಪಿಯ ಸ್ಥಾನದಲ್ಲಿರುವ ವ್ಯಕ್ತಿಗೆ ವಿಚಾರಣೆಗೆ ಮೊದಲೇ ಒಂದಿಷ್ಟು 'ಶಿಕ್ಷೆ' ಆಗುವಂತೆ ಮಾಡಿಬಿಡಬಹುದು. ಕಾನೂನಿನ ಪ್ರಕ್ರಿಯೆಯೇ ಒಂದು ಶಿಕ್ಷೆಯಂತೆ ಆಗಬಹುದು ಎಂಬುದನ್ನು ಇದುವರೆಗಿನ ಹಲವು ಅನುಭವಗಳು ಹೇಳುತ್ತಿವೆ. ಕೇದಾರನಾಥ ಸಿಂಗ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಒಂದು ತತ್ತ್ವವನ್ನು ಹೇಳಿದೆ: ಅಭಿವ್ಯಕ್ತಿಯು ಹಿಂಸೆಗೆ ಪ್ರಚೋದನೆ ನೀಡುವಂತೆ ಅಥವಾ ಸಾರ್ವಜನಿಕ ಸುವ್ಯವಸ್ಥೆಗೆ ತಕ್ಷಣದ ಅಪಾಯ ತಂದೊಡ್ಡುವಂತೆ ಇದ್ದರೆ ಮಾತ್ರ ಅಭಿವ್ಯಕ್ತಿಗೆ ನಿರ್ಬಂಧಗಳನ್ನು ಹೇರಬಹುದು; ಯಾರಿಗೋ ಕಸಿವಿಸಿ ಉಂಟುಮಾಡುತ್ತದೆ, ಯಾರದೋ ಅತೃಪ್ತಿಗೆ ಕಾರಣವಾಗುತ್ತದೆ ಎಂಬ ಕಾರಣ ನೀಡಿ ಅಭಿವ್ಯಕ್ತಿಗೆ ನಿರ್ಬಂಧ ವಿಧಿಸಲಾಗದು ಎಂದು ಕೋರ್ಟ್ ಹೇಳಿದೆ. ಸರ್ಕಾರಗಳು ದ್ವೇಷ ಭಾಷಣವನ್ನು ತಡೆಯುವ ಉದ್ದೇಶದಿಂದ ತರುವ ಯಾವುದೇ ಕಾನೂನು ಈ ನಿಯಮಕ್ಕೆ ಅನುಗುಣವಾಗಿ ಇರಬೇಕಾಗುತ್ತದೆ. ದ್ವೇಷ ಭಾಷಣದ ಅಪಾಯಗಳನ್ನು ತಡೆಯಲು ಕಾನೂನು ರೂಪಿಸಿದ ಸರ್ಕಾರದ ಕ್ರಮ ಸರಿಯಾಗಿಯೇ ಇದೆ. ಆದರೆ, ಔಷಧವೇ ಕಾಯಿಲೆಗಿಂತ ಹೆಚ್ಚು ಸಮಸ್ಯೆ ಉಂಟುಮಾಡದಂತೆ ಸರ್ಕಾರವು ನಿಗಾ ವಹಿಸಬೇಕು.

ಚಾಟಿ

ಗೌರವದ ಔಚಿತ್ಯಪ್ರಜ್ಞೆ



ಅಹಿಂಸಾವಾದಿಗಳನ್ನು ಗಾಂಧಿ ಪ್ರಭಾವಿಸಬೇಕಾಗಿಲ್ಲ. ಪುಟಿನ್ ಯುದ್ಧ ಮಾಡ್ತಿದ್ದಾರೆ ಸರಿ. ಆದರೆ ನಾನು ಗೌರವಿಸಬೇಕಾದುದು ಗಾಂಧಿಯನ್ನೇ ಹೊರತು ಗೋಡ್ಸೆಯನ್ನಲ್ಲ ಎನ್ನುವ ಸೆನ್ಸ್ ಅವರಿಗಿದೆಯಲ್ಲ; ಅದಕ್ಕಾಗಿ ಪುಟಿನ್ ಅಭಿನಂದನಾರ್ಹರು.

ಅರವಿಂದ ಚೊಕ್ಕಾಡಿ, ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ



ರಾಜ್ಯಕ್ಕೆ ಅನ್ಯಾಯ ಆಗುತ್ತಿರುವುದರ ಬಗ್ಗೆ ಬಿಜೆಪಿ ಸಂಸದರು ಧ್ವನಿ ಎತ್ತುತ್ತಿಲ್ಲ. ರಾಜ್ಯದ ರೈತರ ಸಮಸ್ಯೆಗಳನ್ನು ಕೇಂದ್ರ ಸರ್ಕಾರಕ್ಕೆ ತಲಪಿಸುತ್ತಿಲ್ಲ. ಅವರಿಗೆ ಜವಾಬ್ದಾರಿ ಇಲ್ಲವೇ?

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

25 ವರ್ಷಗಳ ಹಿಂದೆ

ಬುಧವಾರ, 6-12-2000

• ಅಜರುದ್ದೀನ್, ಶರ್ಮಾಗೆ ಆಜೀವ ನಿಷೇಧ

ಚೆನ್ನೈ, ಡಿ. 5– ಕ್ರಿಕೆಟ್ ಮೋಸದ ಆಟಕ್ಕೆ ಸಂಬಂಧಪಟ್ಟಂತೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಮಹಮದ್ ಅಜರುದ್ದೀನ್ ಮತ್ತು ಅಜಯ್ ಶರ್ಮಾ ಅವರಿಗೆ ಆಜೀವ ನಿಷೇಧದ ಶಿಕ್ಷೆಯನ್ನು ವಿಧಿಸಿದೆ.

ಅಜಯ್ ಜಡೇಜಾ ಮತ್ತು ಮನೋಜ್ ಪ್ರಭಾಕರ್ ಅವರಿಗೆ ತಲಾ ಐದು ವರ್ಷಗಳ ಅಮಾನತು ಶಿಕ್ಷೆಯನ್ನು ವಿಧಿಸಲಾಗಿದೆ.

ಅಲ್ಲದೆ, ತಂಡದ ಮಾಜಿ ವೈದ್ಯ ಅಲಿ ಇರಾನಿ ಅವರನ್ನು ಕೂಡಾ ಐದು ವರ್ಷಗಳ ಕಾಲ ಅಮಾನತು ಶಿಕ್ಷೆಗೆ ಒಳಪಡಿಸಲಾಗಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಧ್ಯಕ್ಷ ಎ.ಸಿ. ಮುತ್ತಯ್ಯ ಅವರು ಇಂದು ಇಲ್ಲಿ ಪತ್ರಕರ್ತರಿಗೆ ತಿಳಿಸಿದರು.

75 ವರ್ಷಗಳ ಹಿಂದೆ

ಬುಧವಾರ, 5-12-1950

• ಅಧ್ಯಾತ್ಮ ಋಷಿ ಅರಬಿಂದೊ ಅವರ ಮಹಾನಿರ್ವಾಣ

ಪಾಂಡಿಚೆರಿ, ಡಿ. 5– ಪಾಂಡಿಚೆರಿಯ ಮಹರ್ಷಿ ಶ್ರೀಅರಬಿಂದೊ ಘೋಷ್ ಅವರು, ಸೋಮವಾರ ಮಧ್ಯರಾತ್ರಿ ಕಳೆದು 1.30 ಗಂಟೆಗೆ ಶಾಂತವಾಗಿ ನಿರ್ವಾಣವನ್ನು ಹೊಂದಿದರು. ಸುಮಾರು ಎರಡು ವಾರದಿಂದ ಅವರಿಗೆ ಮೂತ್ರಪಿಂಡಗಳ ವ್ಯಾಧಿಯಿದ್ದು, ಡಾ. ಪ್ರಭಾಕರ ಸೇನರಿಂದ ಚಿಕಿತ್ಸೆ ಪಡೆಯುತ್ತಿದ್ದರು.

1872ರ ಆಗಸ್ಟ್ 15ರಂದು ಕಲ್ಕತ್ತೆಯಲ್ಲಿ ಜನಿಸಿದ ಅರಬಿಂದೊ ಅವರು, 1910ರ ಏಪ್ರಿಲ್ ತಿಂಗಳಿನಲ್ಲಿ ಪಾಂಡಿಚೆರಿಗೆ ಬಂದು ಆಶ್ರಮ ಸ್ಥಾಪಿಸಿದ್ದರು. ಅರವಿಂದಾಶ್ರಮವೂ ಮತ್ತು ಪಾಂಡಿಚೆರಿ ನಗರವೂ ಈ ದಿನ ದುಃಖಮಯವಾಗಿ ಮಂಕು ಕವಿದಂತಿದೆ.

ಈ ವರ್ಷದ ಆಗಸ್ಟ್ 15ರಂದು ಅರಬಿಂದೊರವರು ತಮ್ಮ 79ನೇ ವರ್ಧಂತಿಯನ್ನು ಪೂರೈಸಿ ದರು. ನವೆಂಬರ್ 24ರಂದು ಪೂರ್ಣ ಅಧ್ಯಾತ್ಮ ವಿಶ್ರಾಂತಿ ಪಡೆದರು. ಅಂದೇ ಭಕ್ತರಿಗೆ ಅವರು ಅಂತ್ಯದರ್ಶನವಿತ್ತುದುದು.

ತಿಲಕಧಾರಿ ಮೆಕಾಲೆ ಮಕ್ಕಳು



ವಿಶ್ಲೇಷಣೆ

ಯೋಗೇಂದ್ರ ಯಾದವ್

> ಮೆಕಾಲೆ ಶಿಕ್ಷಣಪದ್ಧತಿಯನ್ನು ಗುಲಾಮಿ ಮನಃಸ್ಥಿತಿ ಎಂದು ಪ್ರಧಾನಿ ಹೇಳಿರುವುದು ಸರಿಯಾಗಿದೆ. ಆದರೆ, ಮೆಕಾಲೆ ಶಿಕ್ಷಣವನ್ನು ವಿರೋಧಿಸುವ ಬಹುತೇಕರು ಆಮದು ಚಿಂತನೆಗಳ ವಕ್ತಾರರಾಗಿದ್ದಾರೆ. ಕೇಸರಿ ದಿರಿಸು ತೊಟ್ಟಿದ್ದರೂ, ಅಂತರಂಗದಲ್ಲಿ ಮೆಕಾಲೆ ಚಿಂತನೆಯೇ ಇರುವ ವಿರೋಧಾಭಾಸದ ಸ್ಥಿತಿ ಇಂದಿನದು.

ಪ್ರಧಾನಿ ನರೇಂದ್ರ ಮೋದಿ ಅವರು ರಾಮನಾಥ ಗೋಯೆಂಕಾ ಸ್ಮಾರಕ ಉಪನ್ಯಾಸದಲ್ಲಿ ಟಿ.ಬಿ. ಮೆಕಾಲೆ ಕುರಿತು ನೀಡಿದ ಹೇಳಿಕೆಗೆ ನನ್ನ ಸಂಪೂರ್ಣ ಸಹಮತ ಇದೆ. ಗುಲಾಮಿ ಮನಃಸ್ಥಿತಿಯಿಂದ ನಾವು ಮುಕ್ತರಾಗಬೇಕು ಎಂಬ ಅವರ ಕರೆಯನ್ನೂ ನಾನು ಒಪ್ಪುತ್ತೇನೆ. ಮುಂದಿನ ಹತ್ತು ವರ್ಷಗಳು ನಿರ್ಣಾಯಕ ಎಂಬ ಅವರ ಹೇಳಿಕೆಯೂ ಸರಿಯಾಗಿಯೇ ಇದೆ. ಹಾಗಾಗಿ ನನ್ನ ಸಲಹೆ ಏನೆಂದರೆ, ಮುಂದಿನ ದಶಕದಲ್ಲಿ ನಾವು ಬಿಜೆಪಿಯಿಂದ ಕಳಚಿಕೊಳ್ಳಬೇಕು ಮತ್ತು ಆರ್‌ಎಸ್‌ಎಸ್ ಮನಃಸ್ಥಿತಿಯನ್ನು ದೂರ ಇರಿಸಬೇಕು.

ನಾನು ಇದನ್ನು ತಮಾಷೆಗಾಗಿಯೋ ಪ್ರಚೋದನೆಗಾಗಿಯೋ ಹೇಳುತ್ತಿಲ್ಲ. ಪೂರ್ಣ ಗಂಭೀರವಾಗಿಯೇ ಇದನ್ನು ಹೇಳುತ್ತಿದ್ದೇನೆ. ಮೆಕಾಲೆ ಮಾನಸಪುತ್ರರ ವಿರುದ್ಧದ ಹೋರಾಟವು ಸೂಟು–ಟೈ ಧರಿಸುವ ಮೆಕಾಲೆಗಳಿಗಿಂತ ಮೊದಲು ತಿಲಕಧಾರಿ ಮೆಕಾಲೆಗಳಿಂದ ಬಿಡಿಸಿಕೊಳ್ಳುವ ಮೂಲಕ ಆರಂಭವಾಗಬೇಕು. ಕಂದು ಸಾಹೇಬರ ಅಸಹ್ಯಕರ ಮತ್ತು ಸ್ಪಷ್ಟಗೋಚರ ಗುಲಾಮತನಕ್ಕಿಂತ ಸಾಂಸ್ಕೃತಿಕ ರಾಷ್ಟ್ರೀಯತೆಯ ಹೆಸರಿನಲ್ಲಿ ಅಡಗಿಕೊಂಡಿರುವ ಮಾನಸಿಕ ಗುಲಾಮತನವು ಹೆಚ್ಚು ಅಪಾಯಕಾರಿ.

ಮೋದಿ ಅವರು ಮೆಕಾಲೆ ಕುರಿತು ನೀಡಿರುವ ಹೇಳಿಕೆಯನ್ನು ದೃಢವಾಗಿ ಒಪ್ಪಲು ಮತ್ತು ಅವರ ಟೀಕಾಕಾರರನ್ನು ಗಂಭೀರವಾಗಿ ನಿರಾಕರಿಸಲು ಕಾರಣಗಳೇನು ಎಂಬುದನ್ನು ವಿವರಿಸುತ್ತೇನೆ. 'ಮಿನಿಟ್ ಆನ್ ಎಜುಕೇಷನ್' ಎಂಬ ಮೆಕಾಲೆಯ ಶಿಕ್ಷಣನೀತಿ ದಾಖಲೆಪತ್ರದಲ್ಲಿ ಇರುವ ಗ್ರಹಿಕೆ ಹೀಗಿದೆ: 'ಭಾರತ ಮತ್ತು ಅರೇಬಿಯಾದ ಮೂಲಸಾಹಿತ್ಯವು (ನೇಟಿವ್ ಲಿಟರೇಚರ್) ಯುರೋಪ್‌ನ ಒಳ್ಳೆಯ ಗ್ರಂಥಾಲಯವೊಂದರ ಒಂದು ಕಪಾಟಿನಲ್ಲಿರುವ ಪುಸ್ತಕಗಳಿಗೆ ಸಮಾನ... ಸಂಸ್ಕೃತದಲ್ಲಿ ರಚನೆಯಾಗಿರುವ ಎಲ್ಲ ಕೃತಿಗಳಲ್ಲಿ ಸಂಗ್ರಹವಾಗಿರುವ ಚಾರಿತ್ರಿಕ ಮಾಹಿತಿಯು ಇಂಗ್ಲೆಂಡ್‌ನ ಪ್ರಾಥಮಿಕ ಶಾಲೆಯಲ್ಲಿ ಬಳಕೆಯಾಗುವ ಅತ್ಯಂತ ನಗಣ್ಯವಾದ ಕೃತಿಯೊಂದರ ಸಂಕ್ಷಿಪ್ತ ರೂಪದಷ್ಟೂ ಮೌಲ್ಯ ಹೊಂದಿಲ್ಲ... ಇದು ಭೌತಿಕ ಅಥವಾ ನೈತಿಕ ತತ್ತ್ವಶಾಸ್ತ್ರದ ಎಲ್ಲ ಶಾಖೆಗಳಿಗೂ ಅನ್ವಯ': 'ನಾವು ಮತ್ತು ನಮ್ಮಿಂದ ಆಳಲ್ಪಡುವವರ ನಡುವೆ ವ್ಯಾಖ್ಯಾನಕಾರರಾಗುವ ವರ್ಗವೊಂದನ್ನು ತಯಾರಿಸಲು ನಮ್ಮಿಂದ ಸಾಧ್ಯವಾದಷ್ಟನ್ನು ನಾವು ಮಾಡಬೇಕು– ಭಾರತೀಯ ರಕ್ತ ಮತ್ತು ಬಣ್ಣ ಇದ್ದರೂ ಅಭಿರುಚಿ, ಅಭಿಪ್ರಾಯ, ನೈತಿಕತೆ ಮತ್ತು ಬುದ್ಧಿಮತ್ತೆಯಲ್ಲಿ ಬ್ರಿಟಿಷ್ ಆಗಿರುವ ವರ್ಗ'.

ರಾಜಕೀಯ ವಸಾಹತೀಕರಣ ಮತ್ತು ಆರ್ಥಿಕ ಲೂಟಿಯ ಜೊತೆಗೆ ಭಾರತೀಯ ಜ್ಞಾನ ವ್ಯವಸ್ಥೆಯನ್ನು ಧ್ವಂಸಗೊಳಿಸುವ ಪ್ರಯತ್ನವೂ ನಡೆದಿದೆ ಎಂಬುದನ್ನು ಈ ಟಿಪ್ಪಣಿ ನೆನಪಿಸುತ್ತದೆ. ಪ್ರಧಾನಿ ಪ್ರತಿಪಾದಿಸಿದ ಭಾರತದ ಆಧುನಿಕಪೂರ್ವ ಶಿಕ್ಷಣ ವ್ಯವಸ್ಥೆಯ ಭವ್ಯತೆಯು ಧರಮ್ ಪಾಲ್ ಅವರ 'ದಿ ಬ್ಯೂಟಿಫುಲ್ ಟ್ರೀ' ಕೃತಿಯಿಂದ ಸ್ಫೂರ್ತಿ ಪಡೆದಿದೆ ಎಂಬುದು ಸ್ಪಷ್ಟ, ಇದನ್ನು ನಿಕಟ ಪರಿಶೀಲನೆಗೆ ಒಳಪಡಿಸುವ ಅಗತ್ಯ ಇದೆ. ಆದರೆ, ಮೆಕಾಲೆಯ ಯೋಚನೆಯು ಜಾರಿಗೆ ಬಂದಿದೆ ಎಂಬುದರ ಬಗ್ಗೆ ಅವರಿಗೆ ಇರುವ ವಿಷಾದದ ಪ್ರಾಮಾಣಿಕತೆಯ ಕುರಿತು ಸಂದೇಹವೇನೂ ಇಲ್ಲ. ಮೆಕಾಲೆಯನ್ನು ಅನುಸರಿಸಿದ ಶಿಕ್ಷಣ ವ್ಯವಸ್ಥೆಯು 'ನಮ್ಮ ಆತ್ಮವಿಶ್ವಾಸವನ್ನು ಧ್ವಂಸಗೊಳಿಸಿದೆ' ಎಂಬುದೂ ನಿಜ. ರಕ್ತ ಮತ್ತು ಬಣ್ಣದಲ್ಲಿ ಮಾತ್ರ ಭಾರತೀಯರಾಗಿರುವ 'ಕಂದು ಸಾಹೇಬ'ರಿಂದ ನಾವು ಆಳಲ್ಪಟ್ಟಿದ್ದೇವೆ. ಸ್ವಾತಂತ್ರ್ಯಾನಂತರದ ನಮ್ಮ ಶಿಕ್ಷಣ ವ್ಯವಸ್ಥೆಯು ಇದನ್ನು ಮುಂದುವರಿಸಿಕೊಂಡು ಹೋಗಿದೆ ಎಂಬುದೂ ಬಹುಪಾಲು ನಿಜ. ರಾಜಕೀಯ ಸ್ವಾತಂತ್ರ್ಯವೇ ಮಾನಸಿಕ ಗುಲಾಮಗಿರಿಯ ಕುರಿತು ಉದಾಸೀನಗೊಳ್ಳುವಂತೆ ಮಾಡಿದೆ. ಪ್ರಧಾನಿಯು ಗುರುತಿಸಿದ ಸಾಮಾಜಿಕ ಪ್ರವೃತ್ತಿಯಾದ 'ಆಮದು ಮಾಡಿಕೊಂಡ ಯೋಚನೆಗಳು, ಆಮದು ಮಾಡಿಕೊಂಡ ಸರಕುಗಳು ಮತ್ತು ಆಮದು ಮಾಡಿಕೊಂಡ ಸೇವೆಗಳು' ಎಂಬುದೂ ನಿಜವೇ ಆಗಿದೆ.

ಖೇದಕರವೆಂದರೆ, ಅವರ ಟೀಕಾಕಾರರು ಮುಂದಿಟ್ಟಿರುವ ವಾದಗಳಲ್ಲಿ ಪ್ರಾಮಾಣಿಕತೆ ಕಾಣಿಸುತ್ತಿಲ್ಲ. ಸ್ವಾತಂತ್ರ್ಯಾನಂತರದ ಶಿಕ್ಷಣ ವ್ಯವಸ್ಥೆಯು ವಸಾಹತುಶಾಹಿ ಶಿಕ್ಷಣ ವ್ಯವಸ್ಥೆಯ ಮುಂದುವರಿಕೆ ಅಲ್ಲ ಎಂದು ಕೆಲವರು ಪ್ರತಿಪಾದಿಸಿದ್ದಾರೆ. ಉದ್ದೇಶ ಮತ್ತು ಅಧಿಕೃತ ಘೋಷಣೆಯಲ್ಲಿ ಅದು ಹಾಗೆ ಇರಲಿಕ್ಕಿಲ್ಲ. ಆದರೆ, ಇಂಗ್ಲಿಷ್ ಭಾಷೆಗೆ ಪ್ರಾಧಾನ್ಯ ಇರುವ ವಸಾಹತುಶಾಹಿ ಶಿಕ್ಷಣ ವ್ಯವಸ್ಥೆಯನ್ನು ಮರು ಹೇರಿಕೆ ಮಾಡದೇ ಇದ್ದರೂ ಅದೇ ವ್ಯವಸ್ಥೆಯನ್ನು ಉಳಿಸಿಕೊಳ್ಳಲಾಯಿತು ಎಂಬುದನ್ನು ನಿರಾಕರಿಸಲು ಸಾಧ್ಯವೇ ಇಲ್ಲ. ಟೀಕಾಕಾರರಲ್ಲಿ ಹಲವರು ಆಧುನಿಕ ಶಿಕ್ಷಣ ವ್ಯವಸ್ಥೆ ಮತ್ತು ಇಂಗ್ಲಿಷ್ ಭಾಷೆಯ ಅನುಕೂಲಗಳನ್ನು ಅತಿಯಾಗಿ ಹೊಗಳಿದ್ದಾರೆ; ನಮ್ಮ ಆಧುನಿಕಪೂರ್ವ ಜ್ಞಾನವ್ಯವಸ್ಥೆ ಮತ್ತು ಹಲವು ಭಾಷೆಗಳನ್ನು ಬದಿಗೆ ಸರಿಸಿದರೆ ಮಾತ್ರ ಈ ಎಲ್ಲವನ್ನು ಪಡೆದುಕೊಳ್ಳಲು ಸಾಧ್ಯ ಎಂಬ ಗ್ರಹಿಕೆ ಅವರಲ್ಲಿ ಇದೆ. ಮೆಕಾಲೆಯನ್ನು ಒಪ್ಪುವ ಈ ಟೀಕಾಕಾರರು, ಮೆಕಾಲೆ ಶಿಕ್ಷಣ ವ್ಯವಸ್ಥೆಯಿಂದ ಬಂದವರಲ್ಲಿ 'ಕೀಳರಿಮೆ ಭಾವ ಇದೆ' ಎಂಬ ಪ್ರಧಾನಿ ಪ್ರತಿಪಾದನೆಗೆ ಪುಷ್ಟಿ ಕೊಟ್ಟಿದ್ದಾರೆ.

ನಿಜವಾದ ಸಮಸ್ಯೆ ಇರುವುದು ಮೋದಿಯವರ ನಿಲುವಿನಲ್ಲಿ ಅಲ್ಲ, ಅವರು ಅಂದುಕೊಂಡದ್ದಕ್ಕಿಂತಲೂ ಹೆಚ್ಚು ಸರಿಯಾಗಿದೆ ಅವರ ವಿಚಾರಗಳು. ವಸಾಹತುಶಾಹಿಯು ತಮ್ಮ ನಿಷ್ಠರನ್ನು ಮಾತ್ರವಲ್ಲ, ಟೀಕಾಕಾರರನ್ನು ಕೂಡ ಬಹಳ ಆಶ್ಚರ್ಯಕರ ರೀತಿಯಲ್ಲಿ ತಮಗೆ ನಿಷ್ಠೆಯಿಂದ ಇರುವಂತೆ ಮಾಡಿಕೊಂಡಿದೆ ಎಂಬುದನ್ನು ನಮ್ಮ ಕಾಲದ ಶ್ರೇಷ್ಠ ಚಿಂತಕರಲ್ಲಿ ಒಬ್ಬರು ಮತ್ತು ವಸಾಹತುಶಾಹಿಯು ಮನಶ್ಶಾಸ್ತ್ರೀಯವಾಗಿ ಬೀರಿರುವ ಪರಿಣಾಮದ ಗಂಭೀರ ಅಧ್ಯಯನಕಾರನೂ ಆಗಿರುವ ಆಶಿಶ್ ನಂದಿ ನಮಗೆ ನೆನಪಿಸಿದ್ದಾರೆ. ವಸಾಹತುಶಾಹಿಯು ಮಾಡಿದ ಮಾನಸಿಕಗಾಯಗಳು ಆತ್ಮನಷ್ಟದ ಭಾವವನ್ನು ಸೃಷ್ಟಿಸಿದೆ ಮತ್ತು ತನ್ನ ಟೀಕಾಕಾರರು ಕೂಡ ಪಶ್ಚಿಮದ ಮೇಲರಿಮೆಯ ಭಾವವನ್ನು ಅಂತರಂಗೀಕರಿಸಿಕೊಂಡು ಪಶ್ಚಿಮದ ಚಿಂತನೆಯನ್ನು ಅರಿವಿಲ್ಲದೆಯೇ ಪುನರುತ್ಪಾದಿಸುತ್ತಾರೆ. ಪಶ್ಚಿಮವು 'ಆತ್ಮೀಯ ಶತ್ರು' ಎಂಬ ನಂದಿ ಅವರ ಬಣ್ಣನೆಯು ಸ್ಮರಣೀಯವಾಗಿದೆ. ಆರ್‌ಎಸ್‌ಎಸ್ ಪ್ರತಿಪಾದಿಸುವ ರಾಷ್ಟ್ರೀಯವಾದವು ವಸಾಹತುಶಾಹಿ ಹೇರಿದ ಪ್ರತಿಕ್ರಿಯೆಯ ಅನುಕರಣೆಗೆ ಅತ್ಯುತ್ತಮ ಉದಾಹರಣೆಯಾಗಿದೆ.

ಮೋದಿ ಅವರ ರಾಮನಾಥ ಗೋಯೆಂಕಾ ಉಪನ್ಯಾಸವು ಅದಕ್ಕೆ ಉತ್ತಮ ಉದಾಹರಣೆ. 'ಗವರ್ನೆನ್ಸ್ ಮಾಡೆಲ್', 'ಆಸ್ಪಿರೇಶನ್', 'ಟೂರಿಸಂ', 'ಮೇಡ್ ಇನ್ ಇಂಡಿಯಾ'– ತಮ್ಮ ಹಿಂದಿ ಉಪನ್ಯಾಸದಲ್ಲಿ ಇಂಗ್ಲಿಷ್‌ನ ಈ ಪದಗಳನ್ನು ಅವರು ಬಳಸಿದ್ದಾರೆ. ಅವರು ನೀಡಿದ ಈ ಎಲ್ಲ ಉದಾಹರಣೆಗಳು ಅವರೇ ವಿರೋಧಿಸುತ್ತಿರುವ 'ಆಮದು ಚಿಂತನೆಗಳು' ಎಂಬುದರ ಅರಿವು ಬಹುಶಃ ಅವರಿಗೆ ಇದ್ದಿರಲಿಕ್ಕಿಲ್ಲ. ಅವರು ಹೊಸ ರಾಷ್ಟ್ರೀಯ ಶಿಕ್ಷಣನೀತಿಯನ್ನು ಉಲ್ಲೇಖಿಸಿದರು. ವಾಸ್ತವದಲ್ಲಿ ಈ ನೀತಿಯಲ್ಲಿ ಭಾರತೀಯವಾದದ್ದು ಏನೂ ಇಲ್ಲ– ಭಾರತದ ವಾಸ್ತವದ ಜೊತೆಗಿನ ಸಂಬಂಧವನ್ನೇ ಕಳಚಿಕೊಂಡ ಈ ನೀತಿ ದಾಖಲಾತಿಯು ಅಮೆರಿಕದ ಶಿಕ್ಷಣ ನೀತಿಯಾಗಿದ್ದು, ಭಾರತೀಯ ಜ್ಞಾನ ವ್ಯವಸ್ಥೆಯ ಒಗ್ಗರಣೆಯನ್ನು ಅದರ ಮೇಲೆ ಚಿಮುಕಿಸಲಾಗಿದೆ. ಇಂಗ್ಲಿಷ್ ವಿರುದ್ಧ ಮೋದಿ ನೇತೃತ್ವದ ಸರ್ಕಾರ ಎಷ್ಟೇ ಅಬ್ಬರಿಸಿದರೂ, ಬಿಜೆಪಿ ಆಡಳಿತದ ಅವಧಿಯಲ್ಲೇ ಇಂಗ್ಲಿಷ್ ಮಾಧ್ಯಮ ಶಾಲೆಗಳ ಸಂಖ್ಯೆ ಹೆಚ್ಚಾಗಿದೆ.

ಮೋದಿಯವರಿಗೆ ಮೆಕಾಲೆ ಪರಂಪರೆಯಿಂದ ಬಿಡಿಸಿಕೊಳ್ಳುವುದರ ಪೂರ್ಣ ಉದ್ದೇಶವೇ 'ವಿಕಸಿತ ಭಾರತ'ದ ಗುರಿ ಸಾಧನೆ. ಈ ಅಭಿವೃದ್ಧಿ ಮತ್ತು ಅದರ ಪರಿಣಾಮವಾಗಿ ಆಗುವ ಒಟ್ಟು ಆಂತರಿಕ ಉತ್ಪನ್ನ ಏರಿಕೆಯ ಮಾದರಿಯು ಪಶ್ಚಿಮದ ಬಹಳ ಹಳೆಯದಾದ ಪರಿಕಲ್ಪನೆ. ಇದು ನವ ವಸಾಹತುಶಾಹಿ ಅಲ್ಲದೇ ಇದ್ದರೂ, ಆರ್ಥಿಕತೆಯ ಈ ರೀತಿಯ ಚಿಂತನೆಯ ಭಾಷೆಯು ಮನುಷ್ಯ ಕಲ್ಯಾಣದ ವಿವಿಧ ಆಯಾಮಗಳು ಮತ್ತು ಪರಿಸರ ಸುಸ್ಥಿರತೆಯನ್ನು ಹೊರಗಿಡುತ್ತದೆ. ಜಗತ್ತಿನ ದಕ್ಷಿಣ ಭಾಗದ ಜ್ಞಾನ ಮತ್ತು ಪದ್ಧತಿಗಳನ್ನು ನಿರಾಕರಿಸುತ್ತದೆ. ವಸಾಹತುಶಾಹಿ ಮನಃಸ್ಥಿತಿಯನ್ನು ಕೊನೆಗೊಳಿಸಲು ಕರೆ ನೀಡಿದ ನಾಯಕನೇ 'ಅವರಿಗೆ ಸಮಾನವಾಗಿ ಬೆಳೆಯಬೇಕು' ಎಂಬ ಕನಸನ್ನು ಹೊಂದಿರುವುದರಲ್ಲಿ ವಿರೋಧಾಭಾಸ ಇರುವುದಂತೂ ಖಂಡಿತ.

ಈ ಉಪನ್ಯಾಸವು ಒಂದು ಉದಾಹರಣೆ ಮಾತ್ರ. ಆರ್‌ಎಸ್‌ಎಸ್, ಬಿಜೆಪಿ ಮತ್ತು ಅದರ ಸೈದ್ಧಾಂತಿಕ ಪೂರ್ವಸೂರಿಗಳ ಯಾವುದೇ ಕೃತಿಗಳ ಸರಳ ಓದು ಅವರ ಮೂಲಭೂತ ಚಿಂತನೆಯೇ ಪಶ್ಚಿಮದಿಂದ ಪಡೆದುಕೊಂಡಿರುವುದು ಎಂಬುದನ್ನು ತಿಳಿಸುತ್ತದೆ ಮತ್ತು ಇದು ಭಾರತೀಯ ನಾಗರಿಕತೆಯ ಪರಂಪರೆಗೆ ವ್ಯತಿರಿಕ್ತವಾದುದಾಗಿದೆ. ರಾಷ್ಟ್ರೀಯವಾದ ಎಂಬ ಪರಿಕಲ್ಪನೆಯೇ ಪಶ್ಚಿಮದ ವಿಫಲ 'ನೇಷನ್–ಸ್ಟೇಟ್' ಎಂಬುದರ ಅನುಕರಣೆಯಾಗಿದೆ. ಏಕರೂಪ ಸಂಸ್ಕೃತಿ ಮತ್ತು ಅಧಿಕಾರದ ಕೇಂದ್ರೀಕರಣವೇ ಇದರ ಮೂಲಭೂತ ಅಗತ್ಯಗಳಾಗಿವೆ. ಇದು ಭಾರತದ ನಾಗರಿಕತೆಯ ಅನುಭವಕ್ಕೆ ವ್ಯತಿರಿಕ್ತವಾದುದು. ಹಿಂದುತ್ವದ ಅವರ ಗ್ರಹಿಕೆ ಕೂಡ ಏಕದೇವ ಕಲ್ಪನೆಯ ಧರ್ಮಗಳ ಪಡಿಯಚ್ಚಾಗಿದೆ– ಅಂದರೆ, ಭಾರತವು ಅನುಸರಿಸಿಕೊಂಡು ಬಂದ ಬಹುತ್ವ ಮತ್ತು ಚಲನಶೀಲ ಅಸ್ಮಿತೆಗಳನ್ನು ಅಳಿಸಿ ಹಾಕುವುದೇ ಇದರ ಉದ್ದೇಶವಾಗಿದೆ. ಇದರ ಬಹಿರಂಗವಾದ ಪೌರುಷ, ಅತಿ ರಾಷ್ಟ್ರೀಯತೆ ಮತ್ತು ಆಕ್ರಮಣ ಕಾರಿ ಬಹುಸಂಖ್ಯಾತವಾದಗಳ ಹಿಂದೆ ಅಂತರಂಗೀಕರಣಗೊಂಡ ಕೀಳರಿಮೆಯು ಅಡಗಿಕೊಂಡಿದೆ.

ವಸಾಹತೀಕರಣಗೊಂಡ ಮನಸ್ಸಿನ ಅಗ್ನಿಪರೀಕ್ಷೆ ಎಂದರೆ, ತನ್ನ ಯಜಮಾನನ ರೀತಿಯೇ ಆಗುವ ಕನಸನ್ನು ನನಸು ಮಾಡಿಕೊಳ್ಳುವುದು. ಈಗಿನ ಆಡಳಿತವು ವಸಾಹತುಶಾಹಿ ಮನಃಸ್ಥಿತಿಯ ಅತ್ಯುತ್ತಮ ವಾಹಕವಾಗಿದೆ. ಇಂಗ್ಲಿಷ್ ಮಾತನಾಡುವ ಉನ್ನತರ ಆಳ್ವಿಕೆಗಿಂತ ಕೇಸರಿ ದಿರಿಸಿನಲ್ಲಿರುವ ಮೆಕಾಲೆಯ ಆಳ್ವಿಕೆಯು ಹೆಚ್ಚು ಅಪಾಯಕಾರಿ. ವಸಾಹತುಶಾಹಿಯಿಂದಾಗಿ ಆತ್ಮವನ್ನು ಕಳೆದುಕೊಂಡಿದ್ದೇವೆ ಎಂಬುದು ರಾಷ್ಟ್ರೀಯವಾದದ ಬೊಬ್ಬೆಯಲ್ಲಿ ಕಳೆದುಹೋಗುತ್ತದೆ. ಆರ್‌ಎಸ್‌ಎಸ್ ಮನಃಸ್ಥಿತಿಯಿಂದ ನಾವು ಹೊರಗೆ ಬಂದ ಬಳಿಕ, ಆತ್ಮದ ಶೋಧವು ಗಾಂಧಿ ಮತ್ತು ಟ್ಯಾಗೋರ್‌ರಿಂದ ಆರಂಭವಾಗಬೇಕು.



ವಾಚಕರ ವಾಣಿ

ಋತುಚಕ್ರ: ವಿದ್ಯಾರ್ಥಿನಿಯರಿಗೆ ರಜೆ ಅಗತ್ಯ

ಉದ್ಯೋಗಸ್ಥ ಮಹಿಳೆಯರಿಗೆ ಮಾಸಿಕ ಋತುಚಕ್ರ ರಜೆ ನೀಡಿ ಆದೇಶ ಹೊರಡಿಸಿರುವುದು ಸರಿಯಷ್ಟೆ. ಅದೇ ರೀತಿ ಶಾಲೆ, ಕಾಲೇಜುಗಳಿಗೆ ಹೋಗುವ ಪ್ರೌಢಾವಸ್ಥೆಯ ವಿದ್ಯಾರ್ಥಿನಿಯರಿಗೂ ಈ ನಿಯಮ ಅನ್ವಯಿಸಬೇಕಿದೆ. ಮಾಸಿಕ ತೊಂದರೆಯನ್ನು ವಿದ್ಯಾರ್ಥಿನಿಯರೂ ಅನುಭವಿಸುತ್ತಿರುತ್ತಾರೆ. ಹಾಗಾಗಿ, ಋತುಚಕ್ರದ ದಿನಗಳಂದು ವಿದ್ಯಾರ್ಥಿನಿಯರ ಹಾಜರಾತಿಯಲ್ಲಿ ಗೈರುಹಾಜರಿ ನಮೂದಿಸದಂತೆ ಸರ್ಕಾರ ಆದೇಶಿಸಬೇಕಿದೆ.

ಸುಧಾ ನಾರಾಯಣರಾವ, ಯಲಬುರ್ಗಾ

ಮಹಿಳೆಯರಿಗೆ ಆಗುವ ಅವಮಾನ ತಪ್ಪಿಸಿ

'ಶಕ್ತಿ' ಯೋಜನೆಯಡಿ ಸಾರಿಗೆ ಬಸ್‌ಗಳಲ್ಲಿ ಪ್ರಯಾಣಿಸುವ ಮಹಿಳೆಯರ ಜೊತೆ ಕಂಡಕ್ಟರ್‌ಗಳು ಜಟಾಪಟಿ ನಡೆಸುವುದು ಸರ್ವೇಸಾಮಾನ್ಯ. ಯೋಜನೆ ಆರಂಭವಾಗಿ ಎರಡೂವರೆ ವರ್ಷವಾಗಿದೆ. ಇದುವರೆಗೆ ಸರ್ಕಾರ ನಿಯಮ ಸಡಿಲಿಸುವ ಗೋಜಿಗೆ ಹೋಗಿಲ್ಲ. ಬಸ್‌ಗಳಲ್ಲಿ ಒಂದೂರಿಗೆ ಉಚಿತ ಟಿಕೆಟ್ ಪಡೆಯುವ ಮಹಿಳೆಯರು ಮಾರ್ಗಮಧ್ಯದಲ್ಲೇ ಅನಿವಾರ್ಯ ಕಾರಣಕ್ಕೆ ಇಳಿಯಲು ಮುಂದಾದರೆ ಕಂಡಕ್ಟರ್‌ಗಳು ಬಿಡುವುದಿಲ್ಲ. ಇದರಿಂದ ಅನೇಕ ಹೆಣ್ಣುಮಕ್ಕಳು ಅವಮಾನ ಎದುರಿಸಿದ್ದಾರೆ. ಸರ್ಕಾರ ಕೂಡಲೇ ಇದನ್ನು ಗಂಭೀರವಾಗಿ ಪರಿಗಣಿಸಿ, ನಿಯಮಗಳಿಗೆ ತಿದ್ದುಪಡಿ ತರುವ ಮೂಲಕ ಮಹಿಳೆಯರಿಗೆ ಆಗುತ್ತಿರುವ ಅವಮಾನ ತಪ್ಪಿಸಬೇಕಿದೆ.

ಗೀತಾ ಕುಲಕರ್ಣಿ, ಗದಗ

ಮಣ್ಣಿನ ಅರಿವಿಗೆ ಸಂಗ್ರಹಾಲಯ ಸ್ಥಾಪಿಸಿ

ಮಣ್ಣಿನ ಮ್ಯೂಸಿಯಂ ಅಪರೂಪದ ಮತ್ತು ಅಪೂರ್ವವಾದ ಪರಿಕಲ್ಪನೆ (ಲೇ: ಗಾಣಧಾಳು ಶ್ರೀಕಂಠ, ಪ್ರ.ವಾ., ಡಿ. 5). ಭೂಮಿ ಉಳಿಸಿಕೊಳ್ಳಲು, ನೆಮ್ಮದಿಯಿಂದ ಬದುಕಲು ಈ ಅರಿವು ಮುಖ್ಯ. ಹಳ್ಳಿಯ ಹಿರಿಯ ರೈತಾಪಿ ವರ್ಗಕ್ಕೆ, ಪೂರ್ವಿಕರಿಗೆ ಮಣ್ಣಿನ ಗುಣ ಗೊತ್ತಿತ್ತು. ಅದನ್ನು ಅನುಸರಿಸಿಯೇ ತಕ್ಕ ಬೆಳೆ ಬೆಳೆಯುತ್ತಿದ್ದರು. ಇದು ಮಣ್ಣಿನ ಫಲವತ್ತತೆಯನ್ನೂ ಸ್ಥಿರವಾಗಿಡುತ್ತಿತ್ತು. ಈಗಿನ ಪರಿಸ್ಥಿತಿ ಭಿನ್ನ. ಈ ಕಾರಣಕ್ಕಾಗಿಯೇ ಹೋಬಳಿಮಟ್ಟದಲ್ಲಿ ಇಂತಹ ಮ್ಯೂಸಿಯಂ ಸ್ಥಾಪಿಸುವುದು ಮುಂದಿನ ತಲೆಮಾರಿಗೆ ಉಪಯುಕ್ತ. ಕೃಷಿಯಿಂದ ದೂರ ಸರಿಯುತ್ತಿರುವ ಇಂದಿನ ಪೀಳಿಗೆಗೂ ಇದು ಉತ್ತೇಜನಕಾರಿ. ಈ ದಿಸೆಯಲ್ಲಿ ರೈತ ಸಂಘಟನೆಗಳು ಸರ್ಕಾರದ ಮೇಲೆ ಒತ್ತಡ ತರುವ ಪ್ರಯತ್ನ ಮಾಡಬೇಕು.

ಚಂದ್ರಶೇಖರ ತಾಳ್ಯ, ಹೊಳಲ್ಕೆರೆ

ಮುಕ್ತಾಯ

ಮುಗಿಯಿತೋ ಮುಗಿಯಿತು
ರಾಜ್ಯೋತ್ಸವ ಮಾಸ
ಬಿಡುವೋ ಬಿಡುವು
'ನವೆಂಬರ್ ಕನ್ನಡಿಗ'ರಿಗೆ
ಇನ್ನೊಂದು ವರುಷ!

ಸಿಪಿಕೆ, ಮೈಸೂರು

ಜಾತಿ, ಧರ್ಮದ ಗೋಡೆಗಳ ಕೆಡವೋಣ

ಇಂದು (ಡಿ. 6) ಬಿ.ಆರ್. ಅಂಬೇಡ್ಕರ್ ಅವರ ಮಹಾಪರಿನಿರ್ವಾಣ ದಿನ. ಅವರು ನಮ್ಮನ್ನಗಲಿ ಹಲವಾರು ವರ್ಷಗಳು ಗತಿಸಿವೆ. ಅವರ ಆದರ್ಶಗಳು ನಮ್ಮೊಟ್ಟಿಗಿವೆ. ಆದರೆ, ನಮ್ಮೆದೆಯ ಒಳಗೆ ಇನ್ನೂ ಜಾತಿ, ಧರ್ಮದ ಗೋಡೆಗಳು ಬಲಿಷ್ಠವಾಗುತ್ತಿವೆ. ತಾರತಮ್ಯಗಳು ಹೆಚ್ಚಾಗುತ್ತಿವೆ. ಮನುಷ್ಯರ ನಡುವೆ ಅಂತರ ಹೆಚ್ಚಾಗುತ್ತಿದೆ. ಇವೆಲ್ಲವೂ ಅಂಬೇಡ್ಕರ್ ಕಂಡ ಪ್ರಬುದ್ಧ ಭಾರತದ ಕನಸಿಗೆ ಕೊಳ್ಳಿ ಇಡುತ್ತಿವೆ. ಸಮಾನತೆಯೆಂಬುದು ಮನಸ್ಸಿನಾಳದಿಂದ ಬರಲಿ; ಮಹಾಪುರುಷರು ಕಂಡ ಕನಸಿನ ಭಾರತ ನಿರ್ಮಾಣವಾಗಲಿ.

ನಾಗಾರ್ಜುನ ಹೊಸಮನಿ, ಕಲಬುರಗಿ

ಎಸ್‌ಐಆರ್: ಬಿಎಲ್‌ಒ ಜೀವ ಅಗ್ಗವೆ?

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯು ಬೂತ್‌ಮಟ್ಟದ ಅಧಿಕಾರಿಗಳ (ಬಿಎಲ್‌ಒ) ಮೇಲೆ ಅತಿಯಾದ ಒತ್ತಡ ಹೇರುತ್ತಿರುವುದು ದಿಟ. ಕಡಿಮೆ ಗಡುವಿನಲ್ಲಿ ಗುರಿ ಮುಟ್ಟಬೇಕಾದ ಆತಂಕ ಕೆಲವರ ಆತ್ಮಹತ್ಯೆಗೂ ಕಾರಣವಾಗಿದೆ. ಕೇರಳದಂತಹ ರಾಜ್ಯಗಳಲ್ಲಿ ಸ್ಥಳೀಯ ಚುನಾವಣಾ ಪ್ರಕ್ರಿಯೆಯೊಂದಿಗೆ ಎಸ್‌ಐಆರ್ ಸೇರಿ ಒತ್ತಡ ದುಪ್ಪಟ್ಟಾಗಿದೆ. ಸುಪ್ರೀಂ ಕೋರ್ಟ್ ಹಸ್ತಕ್ಷೇಪದ ಬಳಿಕ ಗಡುವು ಒಂದು ವಾರ ವಿಸ್ತರಿಸಿದರೂ, ಇದು ಸಾಕಾಗದು. ಆಯೋಗವು ತನ್ನ ಬೆನ್ನು ತಾನೇ ತಟ್ಟಿಕೊಳ್ಳುವ ಬದಲು, ಬಿಹಾರದಂತೆ ನೈಜ ಮತದಾರರು ಹೊರಗುಳಿಯದಂತೆ ಮತ್ತು ಬಿಎಲ್‌ಒಗಳಿಗೆ ಅನ್ಯಾಯವಾಗದಂತೆ ತಕ್ಷಣವೇ ಗಡುವು ವಿಸ್ತರಿಸಬೇಕು. ಸಂವೇದನಾಶೀಲ ನಿರ್ಧಾರ ತೆಗೆದುಕೊಳ್ಳದೆ ಇದ್ದರೆ, ಆಯೋಗದ ವಿಶ್ವಾಸಾರ್ಹತೆ ಮತ್ತಷ್ಟು ಕುಸಿಯಲಿದೆ.

ನಿರಂಜನ್ ಎಚ್.ಬಿ., ಸಾಗರ

ಬಲಹೀನರಿಗೆ ಸಿಗಲಿ ಕಾನೂನಿನ ರಕ್ಷಣೆ

ಸಾಮಾಜಿಕ ಬಹಿಷ್ಕಾರವನ್ನು ಶಿಕ್ಷಾರ್ಹ ಅಪರಾಧ ಎನಿಸುವ ಕಾಯ್ದೆ ತರಲು ಸರ್ಕಾರ ಕೈಗೊಂಡಿರುವ ನಿರ್ಧಾರ ಸ್ವಾಗತಾರ್ಹ. ಸಮಾಜದ ಮಾನವೀಯತೆ ಮತ್ತು ನ್ಯಾಯತತ್ತ್ವವನ್ನು ಬಲಪಡಿಸುವ ಇರಾದೆ ಇದರ ಹಿಂದಿದೆ. ಕುಟುಂಬ ಅಥವಾ ವ್ಯಕ್ತಿಯನ್ನು ಜಾತಿ, ಧರ್ಮ, ಆಚಾರ-ವಿಚಾರ ಅಥವಾ ವೈಯಕ್ತಿಕ ದ್ವೇಷದ ಕಾರಣದಿಂದ ಸಮಾಜದಿಂದ ದೂರ ಮಾಡುವುದು ಮಾನವ ಹಕ್ಕುಗಳ ಉಲ್ಲಂಘನೆಯಾಗಲಿದೆ. ಈ ಕಾಯ್ದೆ ಅಂತಹ ಅನ್ಯಾಯಗಳಿಗೆ ತಡೆ ಹಾಕಿ ಬಲಹೀನರಿಗೆ ಕಾನೂನುಬದ್ಧ ರಕ್ಷಣೆ ಒದಗಿಸಲಿದೆ.

ರುಕ್ಮಿಣಿ ನಾಗಣ್ಣವರ, ಬೆಂಗಳೂರು

ನಕಲಿ ವೈದ್ಯರ ಬಗ್ಗೆ ಜಾಗರೂಕತೆ ಇರಲಿ

ಗುರೂಜಿಯೊಬ್ಬ ಆಯುರ್ವೇದ ವೈದ್ಯ ಪಂಡಿತನ ಸೋಗಿನಲ್ಲಿ ಸಾಫ್ಟ್‌ವೇರ್ ಉದ್ಯೋಗಿಯೊಬ್ಬರಿಗೆ ಲೈಂಗಿಕ ಚಿಕಿತ್ಸೆ ನೀಡುವುದಾಗಿ ₹48 ಲಕ್ಷ ವಂಚಿಸಿರುವುದು ಆಘಾತಕಾರಿ. ಲೈಂಗಿಕ ಸಮಸ್ಯೆಗಳು ಹಾಗೂ ಇತರ ವಾಸಿಯಾಗದ ದೀರ್ಘಕಾಲದ ಕಾಯಿಲೆಗಳಿಗೆ ಆಯುರ್ವೇದ ಹಾಗೂ ಸಿದ್ಧೌಷಧಗಳು ತುಂಬಾ ಪರಿಣಾಮಕಾರಿ ಎಂದು ನಂಬಿಸುವ ನಕಲಿ ವೈದ್ಯರ ಬಗ್ಗೆ ಜನರು ಜಾಗೃತರಾಗಿರಬೇಕು.

ಎಲ್. ಚಿನ್ನಪ್ಪ, ಬೆಂಗಳೂರು

ಚುರುಮುರಿ



ಚುಮ್ಮಾ ಚುಮ್ಮಾ ಅಣ್ತಮ್ಮ!

• ತುರುವೇಕೆರೆ ಪ್ರಸಾದ್

'ಹಾವಾದ್ರೂ ಮುತ್ ಕೊಡ್ಬಾರ್ದಾ, ಚೇಳಾದ್ರೂ ಕಿಸ್ ಕೊಡ್ಬಾರ್ದಾ, ಹೊಟ್ಟೆಯುಣ್ಣಾಗೋ ನಗು ಬಂದು ಬಿದ್ದು ಉರುಳಾಡ್ಬಾರ್ದಾ, ನಾಕಾರು ಜ್ವರ ಬಂದು ಡಾಕ್ರ್ಗೆ ನಾಕು ಕಾಸಾಗ್ಬಾರ್ದಾ?' ಗುನುಗಿದ ಗುದ್ಲಿಂಗ!

'ಏನ್ಲಾ ಇದು? ವತ್ತಾರೇನೆ ಜನಪದ ಗೀತೇನೆ ತಿರುಚಿ ಹಿಂಡಿ ಕಳ್ಳಿ ಹಾಲ್ ಬದ್ಲು ಕಬ್ಬಿನಾಲು ಸುರುಸ್ತಿದೀಯ?' ಕೇಳಿದ ಮಾಲಿಂಗ.

'ಇನ್ಮೇಲೆ ಇಂಗೇ ಕಣ್ಲಾ? ದ್ವೇಷ ಬಾಸಣ ಮಾಡಂಗಿಲ್ಲ ಅಂತ ಕಾನೂನು ಮಾಡ್ತಾವ್ರೆ'.

'ಅಯ್ಯೋ ಅಂಗಾ? ಮತ್ತೆ ನಮ್ ಸೀಟಿ, ಯತ್ನಾಳು, ಅನಂತು ಇವರ ಕತೆ ಎಲ್ಲಾ ಎಂಗಪ್ಪ?'

'ಎಲ್ಲಾ ಠುಸ್ಸೇ! ಪ್ರತಾಪು ಮತಾಪು, ಪ್ರದೀಪ ಕಿಟ್ಟ ಕಟ್ಟಿದ ದೀಪ...'

'ಅಲ್ಲ ಕಣ್ಲಾ, ರಾಜಕೀಯದೋರ್ ಭಾಸಣ ಅಂದ್ರೇ ಬೈಗುಳ ಇಲ್ದೆ ಇರೋ ಜೋಗುಳನೇನ್ಲಾ? ಬಯ್ಯೋದೇ ಇಲ್ಲ ಅಂದ್ರೆ ಮೂತಿಗೆ ಮೈಕ್ ಹಿಡಿದು ನ್ಯೂಸ್ ಚಾನಲ್ನೋರು ಏನ್ ಗೀಗೀ ಪದ ಹಾಡುಸ್ತಾರೇನ್ಲಾ?'

'ಅಂಗಾರೆ ಇನ್ಮೇಲೆ ಆಪತ್ ಬಂದು ಚಾಪೇಲಿ ಸುತ್ಕಂಡ್ ಓಗಾ ಅಂತ ಬಯ್ಯೋ ಅಂಗಿಲ್ಲ...'

'ಉಹುಂ! 'ಸಂಪತ್ ಬಂದು ಲೋಕಾಯುಕ್ತದೋರು ಕಿತ್ಕೊಂಡ್ ಓಗ' ಅಂತ ಯೋಳ್ಬಹುದು?'

'ಊ! ಶಾಲಲ್ಲಿ ಸುತ್ಕೊಂಡು ಹೊಡ್ಯೋ ತರ ನುಡಿದರೆ ಬೆಣ್ಣೇಲಿ ಕೂದ್ಲು ತೆಗ್ದಂಗಿರಬೇಕು. ಬಂಡೆಯ ಲಾವಾರಸ ನಿಂಬೆ ಪಾನಕವಾಗಬೇಕು, ಟಗರು ಮಾತಲ್ಲಿ ಗುಮ್ಮಿದರೂ ಚುಮ್ಮ ಕೊಟ್ಟಂತಿರಬೇಕು'.

'ಅಂದ್ರೆ ನಿನ್ ಜನ್ಮಕ್ಕೆ ತುಪ್ಪ ಹಾಕಾ, ನಿನ್ ಮುಖಕ್ಕೆ ಕರ್ಚೀಪ್ ಹಿಡಿಯ, ಈ ತರ ಇರ್ಬೇಕು ಅನ್ನು'.

'ಆದ್ರೂ ಉಟ್ಟಿದಾಗಿಂದ ಉಕ್ಕಂಡೇ ಬಂದಿರೋ ನಾಲ್ಗೆಗೆ ಇದೆಲ್ಲಾ ಕಷ್ಟ ಆಗಕಿಲ್ವಾ?'

'ಆಯ್ತದೆ. ನಾಲ್ಗೆಗೆ ಬೆಳಿಗ್ಗೆ ಸಂಜೆ ಕೋಳಿಸಾರು, ಕುರಿಪಲ್ಯ ಕೊಡ್ಬೇಕು... ಅದು ಅವಾಗ ಅಣ್ತಮ್ಮ ಅಂತದೆ. ಬ್ರದರ್ ಭಾವ ಬಂದ್ಮೇಲೆ ಕಾನೂನು, ಲಾಯರ್ ಯಾಕ್ಲಾ ಬೇಕು?'

'ಹೌದೌದು! ಚುಮ್ಮಾ ಚುಮ್ಮಾ ಅಣ್ತಮ್ಮ' ಎಂದು ಎಲ್ಲಾ ಕೂಗಿದರು.

ಸಂಗತ

ಬೆಳೆಗೆ ತಕ್ಕ ಬೆಲೆ: ದೊರೆಯದಿರುವುದು ಏಕೆ?


ಕೃಷಿ ಹಾಗೂ ಗ್ರಾಮಗಳಿಂದ ರೈತರು ವಿಮುಖರಾಗಲಿಕ್ಕೆ, ಬೆಳೆಗೆ ಸಮರ್ಪಕ ಬೆಲೆ ದೊರೆಯದಿರುವುದೂ ಕಾರಣ. ರೈತರ ಸಮಸ್ಯೆಗಳಿಗೆ ಸರ್ಕಾರ ಕುರುಡಾಗಿದೆ.

• ರಾಹುಲ ಬೆಳಗಲಿ

'ಜಗತ್ತಿನಲ್ಲಿ ಕಡ್ಡಿಪೊಟ್ಟಣದಿಂದ ವಿಮಾನದವರೆಗೆ ಎಲ್ಲದಕ್ಕೂ ಇಂತಿಷ್ಟು ದರ ನಿಗದಿಯಾಗಿದೆ. ವಸ್ತುವಿನ ಬೆಲೆ ಯಾಕೆ ಹೆಚ್ಚು ಮತ್ತು ಯಾಕೆ ಕಡಿಮೆ ಎಂಬುದಕ್ಕೆ ಸಮರ್ಥನೆಯೂ ಇದೆ. ಆದರೆ, ಕೃಷಿ ವಿಷಯಕ್ಕೆ ಬಂದರೆ ಎಂಥದ್ದೂ ಇಲ್ಲ. ಬೆಳೆ ಬೆಳೆಯಲು ರೈತರು ಪಟ್ಟ ಪರಿಶ್ರಮಕ್ಕೆ ಬೆಲೆಯಿಲ್ಲ. ಬೆಳೆಯ ಗುಣಮಟ್ಟ ಆಧರಿಸಿ ಸಮರ್ಪಕ ಮೌಲ್ಯವೂ ಇಲ್ಲ. ನಿರ್ದಿಷ್ಟ ಬೆಳೆಗೆ ವೈಜ್ಞಾನಿಕ ಬೆಲೆ ನಿಗದಿಪಡಿಸಲು ಹಲವು ಬಾರಿ ಮನವಿ ಮಾಡಿದರೂ ಸರ್ಕಾರಗಳಿಂದ ಸ್ಪಂದನ ದೊರೆಯುತ್ತಿಲ್ಲ'.

ಹೀಗೆ ನೋವಿನಿಂದ ಹೇಳಿದವರು ರೈತ ಮುಖಂಡ ಬಡಗಲಪುರ ನಾಗೇಂದ್ರ. ಅವರು ಹೇಳಿದ್ದರಲ್ಲಿ ಅತಿಶಯೋಕ್ತಿ ಇಲ್ಲ. ಯಾಕೆಂದರೆ, ದಶಕಗಳಿಂದಲೂ 'ಎಲ್ಲಾ ವಸ್ತುಗಳಂತೆಯೇ ನಾವು ಬೆಳೆದ ಬೆಳೆಗಳಿಗೂ ವೈಜ್ಞಾನಿಕ ಬೆಲೆ ನಿಗದಿಪಡಿಸಿ. ನಮ್ಮ ಶ್ರಮ ಗುರುತಿಸಿ. ನಮಗೂ ನೆಮ್ಮದಿಯಿಂದ ಬದುಕಲು ಅವಕಾಶ ನೀಡಿ' ಎಂಬುದಷ್ಟೇ ರೈತರ ಬೇಡಿಕೆ. 'ನಮ್ಮೊಂದಿಗೆ ಮಳೆಯಷ್ಟೇ ಅಲ್ಲ, ಸರ್ಕಾರವೂ ಚೆಲ್ಲಾಟ ಆಡುತ್ತದೆ' ಎಂಬ ನೋವು ಅವರದ್ದು.

ಕಬ್ಬಿಗೆ ಸೂಕ್ತ ದರ ನಿಗದಿಪಡಿಸುವಂತೆ ಕೆಲವು ದಿನಗಳ ಹಿಂದೆ ರಾಜ್ಯದ ವಿವಿಧೆಡೆ ಕಬ್ಬು ಬೆಳೆಗಾರರು ನಡೆಸಿದ ಹೋರಾಟ ಕೊನೆಗಾಣುತ್ತಲೇ, ಮೆಕ್ಕೆಜೋಳ ಬೆಳೆದ ರೈತರು ಅನಿರ್ದಿಷ್ಟಾವಧಿ ಧರಣಿ ಕೈಗೊಂಡರು. 'ಖರೀದಿ ಕೇಂದ್ರ ತೆರೆಯುವವರೆಗೆ ಕದಲುವುದಿಲ್ಲ' ಎಂದು ಅಹೋರಾತ್ರಿ ಧರಣಿ ನಡೆಸಿದರು. ನಿರಂತರ ಒತ್ತಡ, ಆಗ್ರಹ, ಪ್ರತಿಭಟನೆ ನಂತರವಷ್ಟೇ ಸರ್ಕಾರವು ರೈತರ ಮೊರೆಗೆ ಕಿವಿಗೊಟ್ಟಿತು. ರೈತರು ಕೇಳಿದ ದರಕ್ಕಿಂತ ಕೊಂಚ ಕಡಿಮೆ ಬೆಲೆಯನ್ನೇ ನಿಗದಿಪಡಿಸಿತು.



ಇದು ಬರೀ ಈ ವರ್ಷದ ಕಥೆಯಲ್ಲ, ಪ್ರತಿ ವರ್ಷದ ವ್ಯಥೆ. ಉತ್ತಮ ಮಳೆ ಅಥವಾ ಒಳ್ಳೆಯ ಆದಾಯದ ನಿರೀಕ್ಷೆಯಲ್ಲಿ ನಿರ್ದಿಷ್ಟವಾದ ಬೆಳೆಯನ್ನು ಹೆಚ್ಚು ಬೆಳೆದಾಗ, ಈ ಸಮಸ್ಯೆ ತಲೆದೋರುತ್ತದೆ. ಬೆಲೆ ಕುಸಿತವಾದಾಗಲಂತೂ ರೈತರ ಪರಿಸ್ಥಿತಿ ಇನ್ನೂ ಶೋಚನೀಯವಾಗುತ್ತದೆ. ಬೆಳೆಯನ್ನು ಅತ್ತ ಮಾರುಕಟ್ಟೆಗೆ ಒಯ್ಯಲು ಆಗದೇ, ಬೆಂಬಲ ಬೆಲೆಗೆ ತಕ್ಕಂತೆ ಮಾರಲೂ ಆಗದೇ, ರೈತರು ಬೆಳೆಯನ್ನು ನೆಲಸಮ ಮಾಡುತ್ತಾರೆ. ಎಲ್ಲವೂ ಮಣ್ಣುಪಾಲು ಆಗಿ, ನಿರಾಸೆಯ ಛಾಯೆ ಆವರಿಸುತ್ತದೆ.

ವರ್ಷಕ್ಕೊಮ್ಮೆ 'ರೈತರ ದಿನ' ಆಚರಿಸಲಾಗುತ್ತದೆ. ಬೃಹತ್ ಸಮಾವೇಶಗಳಲ್ಲಿ ಬಹುತೇಕ ಚುನಾಯಿತ ಪ್ರತಿನಿಧಿಗಳು, 'ಅನ್ನದಾತರಿಗೆ ನನ್ನ ಮೊದಲ ನಮಸ್ಕಾರ' ಎಂದು ಹೇಳಿಯೇ ಭಾಷಣ ಆರಂಭಿಸುತ್ತಾರೆ. ರಾಜಕೀಯ ಪಕ್ಷಗಳಲ್ಲಿ ರೈತರಿಗೆಂದೇ ಪ್ರತ್ಯೇಕ ಘಟಕಗಳು ಇರುತ್ತವೆ. 'ಅನ್ನದಾತರು ಇಲ್ಲದೇ ನಾವು ಇಲ್ಲ' ಎಂಬ ಸಾಲುಗಳನ್ನು ಘೋಷಣೆಗಳ ಮಾದರಿಯಲ್ಲಿ ಪ್ರಚಾರ ಮಾಡಲಾಗುತ್ತದೆ. ಆದರೆ, ರೈತರ ಬೇಡಿಕೆ ವಿಷಯಗಳಿಗೆ ಮಾತ್ರ ಶೂನ್ಯ ಸಂವೇದನೆ.

ರೈತರಲ್ಲಿ ಬಹುತೇಕರು ಮಧ್ಯವಯಸ್ಕರು ಮತ್ತು 60 ವರ್ಷ ವಯಸ್ಸಿನ ಆಸುಪಾಸಿನವರು ಇದ್ದಾರೆ. ಅವರಷ್ಟೇ ಕೃಷಿ ಚಟುವಟಿಕೆಯಲ್ಲಿ ತೊಡಗಿರುವುದು ಕಾಣಸಿಗುತ್ತದೆ. ಗ್ರಾಮಗಳಲ್ಲಿ ಯುವಜನ ಹೆಚ್ಚಾಗಿ ಕಾಣುತ್ತಿಲ್ಲ. ಒಂದು ವೇಳೆ ಅಲ್ಲಲ್ಲಿ ಕಂಡುಬಂದರೂ ಕೃಷಿಯಲ್ಲಿ ಆಸಕ್ತಿ ಇರುವಂತೆ ಕಾಣುವುದಿಲ್ಲ. 'ಕಷ್ಟಪಟ್ಟು ಬೆಳೆದರೂ ಬೆಳೆಗೆ ಸೂಕ್ತ ಬೆಲೆ ಸಿಗಲ್ಲ. ನೆಮ್ಮದಿಯೂ ಇರಲ್ಲ. ಸಂಕಷ್ಟದಲ್ಲೇ ಇಡೀ ಬದುಕನ್ನು ಸವೆಸುವುದಾದರೆ, ಕೃಷಿಗಿಂತ ನಗರಪ್ರದೇಶದಲ್ಲಿ ಕೆಲಸ ಮಾಡುವುದೇ ಮೇಲು' ಎಂಬ ಸಿದ್ಧ ಉತ್ತರ ಅವರದು.

ಇತ್ತೀಚಿನ ದಿನಗಳಲ್ಲಿ ಕೃಷಿ ಬದಲು 'ರಿಯಲ್ ಎಸ್ಟೇಟ್' ವ್ಯವಹಾರದಲ್ಲಿ ತೊಡಗಲು ಹುರಿದುಂಬಿಸಲಾಗುತ್ತಿದೆ. ವರ್ಷಪೂರ್ತಿ ಗಳಿಸುವುದಕ್ಕಿಂತ ಒಂದೇ ದಿನದಲ್ಲಿ ನಿರೀಕ್ಷೆಗೂ ಮೀರಿ 'ಹಣ ಗಳಿಸಬಹುದು' ಎಂದು ರೈತರ ಮನಸ್ಸು ಬದಲಿಸಲಾಗುತ್ತದೆ. ಜಮೀನು ಮಾರಾಟಕ್ಕೆ ವ್ಯವಸ್ಥಿತವಾಗಿ ಒತ್ತಡ ಹೇರಲಾಗುತ್ತದೆ. ಬೆಳೆಗೆ ನಿಶ್ಚಿತ ಬೆಲೆಯೇ ಸಿಗದಿರುವಾಗ, ರೈತರು ಸಹಜವಾಗಿಯೇ ಅಸಹಾಯಕ ಸ್ಥಿತಿಗೆ ತಲಪುತ್ತಾರೆ.

ಈಚೆಗೆ ತೆರೆ ಕಂಡಿರುವ 'ಜಾಲಿ ಎಲ್‌ಎಲ್‌ಬಿ–3' ಹಿಂದಿ ಚಲನಚಿತ್ರದಲ್ಲಿ ಒಂದು ದೃಶ್ಯವಿದೆ. ಜಮೀನಿಗೆ ಸಂಬಂಧಿಸಿದಂತೆ ಕೋರ್ಟ್‌ನಲ್ಲಿ ವಾದ ಮಂಡನೆ ವೇಳೆ ನ್ಯಾಯಾಧೀಶರಿಗೆ ವಕೀಲರೊಬ್ಬರು ಮನವಿ ಮಾಡುತ್ತಾರೆ. 'ಶಾಲಾ–ಕಾಲೇಜಿನ ಪಠ್ಯಪುಸ್ತಕದಲ್ಲಿ ದಯವಿಟ್ಟು ಕೃಷಿ ಕುರಿತು ಪಠ್ಯ ಅಳವಡಿಸಿ. ಇಲ್ಲದಿದ್ದರೆ, ವಿದ್ಯಾರ್ಥಿಗಳಿಗೆ ಆಹಾರ ಹೇಗೆ ಉತ್ಪಾದನೆಯಾಗುತ್ತದೆ ಎಂಬುದು ಗೊತ್ತಾಗುವುದಿಲ್ಲ. ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿದರೆ, ಯಾವ ಆಹಾರ ಬೇಕಾದರೂ ಸಿಗುತ್ತದೆ ಎಂಬ ಭಾವನೆ ಮೂಡುತ್ತದೆ. ದಯವಿಟ್ಟು ಇದರ ಬಗ್ಗೆ ಆಲೋಚಿಸಿ' ಎಂದು ಕೋರುತ್ತಾರೆ.

ಕೃಷಿ ಕ್ಷೇತ್ರಕ್ಕೆ ನಿರೀಕ್ಷಿತ ಮಾನ್ಯತೆ ಸಿಗದಿದ್ದರೆ, ರೈತರ ಬದುಕು ಹಸನಾಗದಿದ್ದರೆ, ಅಥವಾ ಬೆಳೆಗೆ ಸೂಕ್ತ ವೈಜ್ಞಾನಿಕ ಬೆಲೆ ನಿಗದಿಯಾಗದಿದ್ದರೆ, ಸಿನಿಮಾದ ಸಂಭಾಷಣೆ ಸತ್ಯವಾಗಲೂಬಹುದು. ಇಂದಿನ ಡಿಜಿಟಲ್ ಯುಗದಲ್ಲಿ ಮಣ್ಣಿನ ಮಹತ್ವ ಕಳೆದುಹೋಗಬಹುದು. ಪಿಜ್ಜಾ, ಬರ್ಗರ್, ಸ್ಯಾಂಡ್‌ವಿಚ್ ಭ್ರಮೆ ವ್ಯಾಪಿಸಿ, ನೈಜ ಮತ್ತು ಬದುಕಿಗೆ ಅಗತ್ಯ ಇರುವ ಆಹಾರದ ಬಗ್ಗೆಯೇ ಗೊಂದಲ ಹೆಚ್ಚಾಗಬಹುದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಕಟಕಟೆಯಲ್ಲಿ ಪೊಲೀಸರು ಬೇಲಿಯೇ ಹೊಲ ಮೇಯ್ದಾಗ

ಕರ್ನಾಟಕದ ಪೊಲೀಸರು ತಮ್ಮ ದಕ್ಷತೆ ಮತ್ತು ವೃತ್ತಿಪರತೆಗೆ ದೇಶದಲ್ಲಿಯೇ ಹೆಸರಾಗಿದ್ದರು. ಕಾನೂನು ಮೀರಿದವರನ್ನು ಅತ್ಯಂತ ಕ್ಷಿಪ್ರವಾಗಿ ಬಂಧಿಸಿ ಕಟಕಟೆಯಲ್ಲಿ ನಿಲ್ಲಿಸುತ್ತಿದ್ದರು. ಆದರೆ, ಈಗ ಪರಿಸ್ಥಿತಿ ಬದಲಾಗಿದೆ. ಪೊಲೀಸರೇ ಕಟಕಟೆಯಲ್ಲಿ ನಿಲ್ಲುತ್ತಿದ್ದಾರೆ; ಅತ್ಯಾಚಾರ, ಸುಲಿಗೆ, ದರೋಡೆ, ಬೆದರಿಕೆ ಮುಂತಾದ ಆರೋಪಗಳಿಂದ ಪೊಲೀಸರು ಅಮಾನತುಗೊಳ್ಳುತ್ತಿರುವ ಪ್ರಕರಣಗಳು ವರದಿಯಾಗುತ್ತಲೇ ಇವೆ. ಅನ್ಯಾಯಕ್ಕೆ ಒಳಗಾದವರು ರಕ್ಷಣೆಗಾಗಿ ಪೊಲೀಸರ ಬಳಿಗೆ ಬರುತ್ತಿದ್ದರು. ಅಂಥ ಪೊಲೀಸರೇ ಈಗ ಆರೋಪಿಗಳ ಸ್ಥಾನದಲ್ಲಿ ನಿಲ್ಲುತ್ತಿರುವ ಪ್ರವೃತ್ತಿ ಕಂಡು ಬರುತ್ತಿದೆ

• ಆದಿತ್ಯ ಕೆ.ಎ.

ರಸ್ತೆಯಲ್ಲಿ ಒಂಟಿಯಾಗಿ ಸಾಗುವಾಗ, ಪರಿಚಯಸ್ಥರಿಲ್ಲದ ಊರಿನಲ್ಲಿ ಮಧ್ಯರಾತ್ರಿ ಬಸ್ ಇಳಿದಾಗ, ಚಿನ್ನ ಧರಿಸಿಕೊಂಡು ರಸ್ತೆಯಲ್ಲಿ ನಡೆದು ತೆರಳುವಾಗ, ವ್ಯಾಪಾರಕ್ಕಾಗಿ ಉದ್ಯಮಿಗಳು ಚಿನ್ನವನ್ನು ಕೊಂಡೊಯ್ಯುವಾಗ ಆ ಮಾರ್ಗದಲ್ಲಿ ಕರ್ತವ್ಯದಲ್ಲಿದ್ದ ಪೊಲೀಸರು ರಕ್ಷಕರಂತೆ ಕಾಣಿಸುತ್ತಿದ್ದರು. ಅವರು ನಮ್ಮ ರಕ್ಷಣೆಗಿದ್ದಾರೆ ಎನ್ನುವ ನಂಬಿಕೆ, ಆತ್ಮವಿಶ್ವಾಸದಿಂದಲೇ ಮಹಿಳೆಯರು ಹಾಗೂ ಮಕ್ಕಳು ಹೆಜ್ಜೆ ಹಾಕುತ್ತಿದ್ದರು. ಆದರೆ, ಇತ್ತೀಚಿನ ಬೆಳವಣಿಗೆಗಳಿಂದ ರಾಜ್ಯದ ಪೊಲೀಸರ ಮೇಲಿದ್ದ ನಂಬಿಕೆ, ವಿಶ್ವಾಸ ನಿಧಾನವಾಗಿ ಮಾಸುತ್ತಿದೆ. ಬೇಲಿಯೇ ಎದ್ದು ಹೊಲ ಮೇಯ್ದಂತಾಗಿದೆ ಪೊಲೀಸರ ಕಥೆ.

ಸಾಲು ಸಾಲು ಅಪರಾಧ ಪ್ರಕರಣಗಳಲ್ಲಿ ಪೊಲೀಸರು ಸಿಕ್ಕಿಹಾಕಿಕೊಳ್ಳುತ್ತಿದ್ದಾರೆ. ಆರೋಪಿಗಳನ್ನು ಬಂಧಿಸಬೇಕಾದ ಪೊಲೀಸರೇ ಕಾನೂನು ವಿರೋಧಿ ಕೃತ್ಯಗಳಲ್ಲಿ ಭಾಗಿಯಾಗುತ್ತಿರುವುದು ಅವರ ಮೇಲಿದ್ದ ನಂಬಿಕೆ ಕ್ಷೀಣಿಸುವಂತೆ ಮಾಡಿದೆ. ಕಳ್ಳರ ಸ್ಥಾನದಲ್ಲಿ ಪೊಲೀಸರು ನಿಂತಿದ್ದಾರೆ. ದರೋಡೆ ನಡೆಸಲು ಸಂಚು ರೂಪಿಸಿದ್ದ, ಆರೋಪಿಯ ಕಾರಿನಲ್ಲಿದ್ದ ನಗದು ಕದ್ದ, ಚಿನ್ನಾಭರಣ ವ್ಯಾಪಾರಿಯಿಂದ ಸುಲಿಗೆ ನಡೆಸಿದ, ದೂರು ನೀಡಲು ಬಂದ ಯುವತಿಯನ್ನು ನಂಬಿಸಿ ಅತ್ಯಾಚಾರ ಎಸಗಿದ, ಉದ್ಯಮಿಗಳನ್ನು ಸುಲಿಗೆ ಮಾಡಿದ ಹಾಗೂ ಡ್ರಗ್ಸ್ ಪೆಡ್ಲರ್‌ಗಳ ಜತೆಗೆ ಶಾಮೀಲಾದ ಪ್ರಕರಣಗಳಲ್ಲಿ ಪೊಲೀಸರು ಅಮಾನತುಗೊಂಡಿದ್ದಾರೆ.

ಅಪರಾಧ ಪ್ರಕರಣಗಳನ್ನು ಭೇದಿಸುವುದರಲ್ಲಿ, ಬಂದೋಬಸ್ತ್, ಅನ್ಯಾಯಕ್ಕೆ ಒಳಗಾದ ಮಹಿಳೆಯರು ಹಾಗೂ ಮಕ್ಕಳಿಗೆ ನ್ಯಾಯ ಕೊಡಿಸುವುದರಲ್ಲಿ ರಾಜ್ಯದ ಪೊಲೀಸರು ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದ್ದರು. ಕಾರ್ಯದಕ್ಷತೆ ಹಾಗೂ ವೃತಿಪರತೆಗೆ ರಾಜ್ಯದ ಪೊಲೀಸರು ಹೆಸರಾಗಿದ್ದರು. ಈಗ ಖಾಕಿಗೆ ಕಳಂಕ ಅಂಟಿದೆ. 'ಕೆಲವರಿಂದಾಗಿ ನಮ್ಮ ಇಲಾಖೆಗಿದ್ದ ಮರ್ಯಾದೆಯೇ ಮಣ್ಣು ಪಾಲಾಗುತ್ತಿದೆ' ಎಂದು ಸಿಬ್ಬಂದಿ ಅಲವತ್ತುಕೊಳ್ಳುತ್ತಾರೆ.

ಬೆಂಗಳೂರಿನಲ್ಲಿ ಹೆಚ್ಚು: ರಾಜಧಾನಿ ಬೆಂಗಳೂರಿನಲ್ಲಿ ಅಪರಾಧ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿವೆ. ಉದ್ಯೋಗ, ಶಿಕ್ಷಣದ ಕಾರಣಕ್ಕೆ ನಗರಕ್ಕೆ ವಲಸೆ ಬರುತ್ತಿರುವವರ ಸಂಖ್ಯೆಯೂ ಹೆಚ್ಚಿದೆ. ಕಾನೂನು ಸುವ್ಯವಸ್ಥೆ ಕಾಪಾಡುವುದು, ಜನರ ರಕ್ಷಣೆ, ಅಪರಾಧ ಪ್ರಕರಣಗಳನ್ನು ತಡೆಯುವುದು, ಪತ್ತೆಹಚ್ಚುವಿಕೆ ಪೊಲೀಸರ ಕರ್ತವ್ಯ. ಆದರೆ, ಅಪರಾಧ ತಡೆಯಬೇಕಾದ ಪೊಲೀಸರೇ ಅಪರಾಧ ಕೃತ್ಯಗಳಲ್ಲಿ ಭಾಗಿ ಆಗುತ್ತಿದ್ದಾರೆ. ಇತರೆ ನಗರದ ಪೊಲೀಸರದ್ದೂ ಅದೇ ಕಥೆ. ದಾವಣಗೆರೆ, ಬೆಳಗಾವಿ, ಮೈಸೂರು, ಮಂಗಳೂರಿನಲ್ಲೂ ಇಂಥ ಉದಾಹರಣೆಗಳು ಇವೆ.

ಬೆಂಗಳೂರು ನಗರ ಕಮಿಷನರೇಟ್ ವ್ಯಾಪ್ತಿಯ 11 ವಿಭಾಗಗಳಲ್ಲಿ 11 ತಿಂಗಳಲ್ಲಿ 130 ಪೊಲೀಸರು ದರೋಡೆ, ಸುಲಿಗೆ, ಕರ್ತವ್ಯ ಲೋಪ, ಮಾದಕ ವಸ್ತುಗಳ ಮಾರಾಟಗಾರರ ಜತೆಗೆ ಶಾಮೀಲು, ಕಳ್ಳರಿಗೆ ಸಹಾಯ ಮಾಡಿದ್ದ ಪ್ರಕರಣದಲ್ಲಿ ಅಮಾನತುಗೊಂಡಿದ್ದಾರೆ. ಮೂರು ತಿಂಗಳಲ್ಲಿಯೇ ಐವರು ಇನ್‌ಸ್ಪೆಕ್ಟರ್‌ಗಳು ಸೇರಿದಂತೆ 32 ಮಂದಿಯ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗಿದೆ. ಶಿಸ್ತು ಕ್ರಮಕ್ಕೆ ಒಳಗಾದವರ ಪೈಕಿ ಕಾನ್‌ಸ್ಟೆಬಲ್‌ಗಳಿಂದ ಹಿಡಿದು ಹಿರಿಯ ಅಧಿಕಾರಿಗಳವರೆಗೂ ಇದ್ದಾರೆ. ಒಂದೇ ತಿಂಗಳಲ್ಲಿ ಇಬ್ಬರು ಕಾನ್‌ಸ್ಟೆಬಲ್‌ಗಳ ಬಂಧನವಾಗಿದೆ. ದಾವಣಗೆರೆಯಲ್ಲಿ ಇಬ್ಬರು ಪಿಎಸ್‌ಐಗಳ ಸೆರೆಯಾಗಿದೆ.

ಅಮಾನತುಗೊಂಡವರು ಎರಡು ತಿಂಗಳಲ್ಲಿ ಬೇರೊಂದು ಠಾಣೆಯಲ್ಲಿ ಕರ್ತವ್ಯಕ್ಕೆ ಮರಳುತ್ತಿದ್ದಾರೆ. ಕೃತ್ಯ ಮುಂದುವರಿಸುತ್ತಿದ್ದಾರೆ.

ಇಲಾಖೆಗೆ ನೇಮಕವಾದ ಬಳಿಕ ಕೆಲವು ತಿಂಗಳು ಕಠಿಣ ತರಬೇತಿಗೆ ಪೊಲೀಸರು ಒಡ್ಡಿಕೊಳ್ಳುತ್ತಾರೆ. ತರಬೇತಿ ಅವಧಿಯಲ್ಲಿ ದೈಹಿಕ ಕಸರತ್ತಿಗಷ್ಟೇ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗುತ್ತಿದೆ. ಕೆಲಸದ ವೇಳೆ ನಡವಳಿಕೆ ಹೇಗಿರಬೇಕು ಎಂಬುದನ್ನು ಕಲಿಸುತ್ತಿಲ್ಲ.

ಸುತ್ತೋಲೆಗೂ ಕಿಮ್ಮತ್ತಿಲ್ಲ

ಅಧಿಕಾರಿಗಳು, ಸಿಬ್ಬಂದಿ ಕರ್ತವ್ಯ ನಿರ್ವಹಿಸುವಾಗ ಪಾರದರ್ಶಕತೆ, ಸೌಜನ್ಯದ ವರ್ತನೆ, ನಿಷ್ಠೆ ತೋರಬೇಕು. ಅಧಿಕಾರ ದುರುಪಯೋಗ ಪಡಿಸಿಕೊಂಡು ಸಾರ್ವಜನಿಕರ ಮೇಲೆ ಅನಗತ್ಯ ಬಲ ಪ್ರಯೋಗ ಅಥವಾ ದರ್ಪದ ವರ್ತನೆ ಇಲಾಖೆ ಘನತೆಗೆ ತಕ್ಕುದಾದ ನಡವಳಿಕೆ ಅಲ್ಲ. ಸಿವಿಲ್ ವ್ಯಾಜ್ಯಗಳಲ್ಲಿ ಪೊಲೀಸರು ಮಧ್ಯಸ್ಥಿಕೆ ವಹಿಸುವಂತಿಲ್ಲ ಎಂದು ಡಿಜಿಪಿ ಸುತ್ತೋಲೆ ಹೊರಡಿಸಿದ್ದರು. ಆದರೆ, ಆದೇಶ ಪಾಲನೆ ಮಾತ್ರ ಆಗುತ್ತಿಲ್ಲ. ನಡವಳಿಕೆ ಬದಲಾಗುತ್ತಿಲ್ಲ.

ಪಾರದರ್ಶಕತೆ ಮುಖ್ಯ: ಕೆಲವು ವರ್ಷಗಳ ಹಿಂದೆ ನೇಮಕಾತಿ ವಿಭಾಗದ ಎಡಿಜಿಪಿ ಸೇರಿದಂತೆ ವಿವಿಧ ಹಂತದ ಅಧಿಕಾರಿಗಳು ಪಿಎಸ್‌ಐ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಸಿಲುಕಿಕೊಂಡಿದ್ದರು (ಈ ಪ್ರಕರಣದಲ್ಲಿ ಮರು ಪರೀಕ್ಷೆ ನಡೆದಿದೆ). ಈ ರೀತಿ ವಾಮಮಾರ್ಗದಲ್ಲಿ ಇಲಾಖೆ ಸೇರಿದವರಿಂದ ನ್ಯಾಯ ನಿರೀಕ್ಷೆ ಸಾಧ್ಯವೇ ಎನ್ನುವ ಪ್ರಶ್ನೆಯಿದೆ. ನೇಮಕಾತಿಯಲ್ಲಿ ಪಾರದರ್ಶಕತೆ ತಂದರೆ ಮಾತ್ರ ಇಲಾಖೆಗೆ ಸೇರಿದವರ ನಡವಳಿಕೆಯೂ ಉತ್ತಮವಾಗಿರಲು ಸಾಧ್ಯ ಎಂದು ನಿವೃತ್ತ ಪೊಲೀಸ್ ಅಧಿಕಾರಿಯೊಬ್ಬರು ಹೇಳುತ್ತಾರೆ.

ಆಯಕಟ್ಟಿನ ಸ್ಥಳ, ಚಿನ್ನಾಭರಣ ಮಾರಾಟ ಅಂಗಡಿಗಳಿರುವ ವ್ಯಾಪ್ತಿ, ರಿಯಲ್ ಎಸ್ಟೇಟ್ ವ್ಯವಹಾರ ಹೆಚ್ಚಿರುವ, ಬಾರ್ ಅಂಡ್ ರೆಸ್ಟೋರೆಂಟ್‌ಗಳು ಅಧಿಕ ಸಂಖ್ಯೆಯಲ್ಲಿರುವ ವ್ಯಾಪ್ತಿಯ ಠಾಣೆಗಳಿಗೆ ವರ್ಗಾವಣೆ ಆಗುವುದಕ್ಕೆ ಬೇಡಿಕೆಯಿದೆ. ಪೈಪೋಟಿಯೇ ನಡೆಯುತ್ತಿದೆ. ಇಂತಹ ಠಾಣೆಗಳಿಗೆ ವರ್ಗವಾಗಲು ಸಚಿವರು, ಶಾಸಕರು, ಹಿರಿಯ ಅಧಿಕಾರಿಗಳಿಗೆ ಹಣ ನೀಡಬೇಕು. ಹೂಡಿಕೆ ಮಾಡಿ ವರ್ಗಾವಣೆಯಾದ ಅಧಿಕಾರಿ 'ಅಕ್ರಮ' ವ್ಯವಹಾರಕ್ಕೆ ಇಳಿಯುತ್ತಿದ್ದಾರೆ ಎಂದೂ ಅವರು ತಿಳಿಸುತ್ತಾರೆ.

'ಬೆಂಗಳೂರು ಸಮೀಪವೇ ಎಸಿಪಿ ಹುದ್ದೆ ಖಾಲಿಯಿತ್ತು. ಅಲ್ಲಿಗೆ ವರ್ಗಾವಣೆ ಮಾಡಿಸಿಕೊಡುವಂತೆ ಶಾಸಕರೊಬ್ಬರ ಬಳಿ ಮನವಿ ಮಾಡಿದ್ದೆ. ಅವರು ₹75 ಲಕ್ಷ ಕೇಳಿದ್ದರು. ನನ್ನ ಬಳಿ ಅಷ್ಟು ಹಣವಿಲ್ಲ. 'ನಾನ್ ಎಕ್ಸಿಕ್ಯೂಟಿವ್' ಹುದ್ದೆಯಲ್ಲೇ ಇರುತ್ತೇನೆ ಎಂಬುದಾಗಿ ಹೇಳಿದ್ದೆ' ಎಂದು ಹೆಸರು ಬಹಿರಂಗಪಡಿಸದ ಅಧಿಕಾರಿಯೊಬ್ಬರು ಹೇಳಿದರು.



ಎಐ ಚಿತ್ರ: ಈಶ್ವರ ಬಡಿಗೇರ

ಅಮಾನತು, ಬಂಧನಕ್ಕೆ ಒಳಗಾದವರು

- **ಡ್ರಗ್ಸ್ ಪೆಡ್ಲರ್‌ಗಳ ಜತೆಗೆ ಶಾಮೀಲು:** ಚಾಮರಾಜಪೇಟೆ ಠಾಣೆಯ ಇನ್‌ಸ್ಪೆಕ್ಟರ್ ಟಿ.ಮಂಜಣ್ಣ, ಹೆಡ್‌ಕಾನ್‌ಸ್ಟೆಬಲ್‌ಗಳಾದ ರಮೇಶ್, ಶಿವರಾಜ್, ಕಾನ್‌ಸ್ಟೆಬಲ್‌ಗಳಾದ ಮಧುಸೂದನ್, ಪ್ರಸನ್ನ, ಶಂಕರ್ ಬೆಳಗಲಿ, ಆನಂದ್, ಜೆ.ಜೆ.ನಗರ ಠಾಣೆಯ ಎಎಸ್‌ಐ ಕುಮಾರ್, ಹೆಡ್‌ಕಾನ್‌ಸ್ಟೆಬಲ್ ಆನಂದ್, ಸಿಬ್ಬಂದಿ ಬಸವನಗೌಡ ಅಮಾನತು
- **ಆಭರಣ ಮಾರಾಟಗಾರರಿಂದ ಲಂಚ:** ಹಲಸೂರು ಗೇಟ್ ಠಾಣೆಯ ಇನ್‌ಸ್ಪೆಕ್ಟರ್ ಹನುಮಂತ ಭಜಂತ್ರಿ, ಎಎಸ್‌ಐ ಹಾಗೂ ಕಾನ್‌ಸ್ಟೆಬಲ್ ವಿರುದ್ಧ ಶಿಸ್ತು ಕ್ರಮ
- **ಅತ್ಯಾಚಾರ, ಲೈಂಗಿಕ ದೌರ್ಜನ್ಯ:** ದೇವರಜೀವನಹಳ್ಳಿ (ಡಿಜೆ ಹಳ್ಳಿ) ಠಾಣೆಯ ಇನ್‌ಸ್ಪೆಕ್ಟರ್ ಸುನಿಲ್, ಎಎಸ್‌ಐ ಪ್ರಕಾಶ್ ವಿರುದ್ಧ ಎಫ್‌ಐಆರ್
- **ಕಳ್ಳತನ ಪ್ರಕರಣದಲ್ಲಿ ಠಾಣೆಗೆ ಮಹಿಳೆ ಕರೆದೊಯ್ದು ಹಲ್ಲೆ:** ವರ್ತೂರು ಠಾಣೆಯ ಅಪರಾಧ ವಿಭಾಗದ ಸಂಜಯ್ ರಾಥೋಡ್, ಸಂತೋಷ್ ಕುದ್ರಿ, ಅರ್ಚನಾ ವಿರುದ್ಧ ಕ್ರಮ
- **ಅಂಗವಿಕಲ ವ್ಯಕ್ತಿಯಿಂದ ಸುಲಿಗೆ:** ಇಂದಿರಾನಗರ ಠಾಣೆಯ ಹೆಡ್‌ಕಾನ್‌ಸ್ಟೆಬಲ್ ಶರಣ ಬಸಪ್ಪ ಪೂಜಾರಿ, ಕಾನ್‌ಸ್ಟೆಬಲ್ ಪರಮೇಶ್ವರ ನಾಯಕ್ ಅಮಾನತು
- **ಕರ್ತವ್ಯ ಲೋಪ:** ಕೋರಮಂಗಲ ಠಾಣೆಯ ಇನ್‌ಸ್ಪೆಕ್ಟರ್ ಲೂಯಿರಾಮ ರೆಡ್ಡಿ ಅಮಾನತು
- **ಆರೋಪಿಯ ಕಾರಿನಲ್ಲಿದ್ದ ₹11 ಲಕ್ಷ ಹಣ ಕಳ್ಳತನ:** ಸೈಬರ್ ಅಪರಾಧ ಠಾಣೆ ಹೆಡ್ ಕಾನ್‌ಸ್ಟೆಬಲ್ ಜಬೀವುಲ್ಲಾ ವಿರುದ್ಧ ಕ್ರಮ
- **ಬಿಟ್ ಕಾಯಿನ್ ಪ್ರಕರಣ (2024):** ಇನ್‌ಸ್ಪೆಕ್ಟರ್‌ಗಳಾದ ಲಕ್ಷ್ಮೀಕಾಂತಯ್ಯ, ಚಂದ್ರಾಧರ್, ಡಿವೈಎಸ್‌ಪಿ ಶ್ರೀಧರ್ ಕೆ.ಪೂಜಾರ್, ಆಡುಗೋಡಿ ಟೆಕ್ನಿಕಲ್ ಸಪೋರ್ಟ್ ಸೆಂಟರ್‌ನ ಇನ್‌ಸ್ಪೆಕ್ಟರ್ ಡಿ.ಎಂ.ಪ್ರಶಾಂತ್ ಬಾಬು ಬಂಧನ
- **ನಟಿ ರನ್ಯಾ ರಾವ್ ಪ್ರಕರಣ:** ಶಿಷ್ಟಾಚಾರ ಉಲ್ಲಂಘನೆಯ ವಿಚಾರದಲ್ಲಿ ಹಿರಿಯ ಐಪಿಎಸ್ ಅಧಿಕಾರಿ, ಮಲತಂದೆ ಕೆ.ರಾಮಚಂದ್ರ ರಾವ್ ಅವರ ಹೆಸರು ಕೇಳಿಬಂದಿತ್ತು. ರಾಮಚಂದ್ರರಾವ್ ಅವರನ್ನು ಸರ್ಕಾರ ಕಡ್ಡಾಯ ರಜೆಯ ಮೇಲೆ ಕಳುಹಿಸಿತ್ತು

ದರೋಡೆಯ ಭಾರಿ ಸಂಚು

ಬೆಂಗಳೂರಿನಲ್ಲಿ ಎಟಿಎಂ ಕೇಂದ್ರಕ್ಕೆ ಹಣ ತುಂಬಿಸಲು ತೆರಳುತ್ತಿದ್ದ ಸಿಎಂಎಸ್ ಏಜೆನ್ಸಿ ವಾಹನವನ್ನು ಅಡ್ಡಗಟ್ಟಿ ₹7.11 ಕೋಟಿ ದರೋಡೆ ಮಾಡಿದ್ದ ಪ್ರಕರಣದ ಸಂಚುಕೋರ ಗೋವಿಂದಪುರ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್ ಅಣ್ಣಪ್ಪ ನಾಯ್ಕ ಎಂಬುದು ತನಿಖೆಯಿಂದ ಬಯಲಾಗಿತ್ತು. ಬಳಿಕ ಅವರನ್ನು ಬಂಧಿಸಲಾಗಿದೆ.

ಕಳ್ಳ ಬಾಂಬೆ ಸಲೀಂಗೆ ತನ್ನ ಮನೆಯಲ್ಲಿ ಆಶ್ರಯ ನೀಡಿದ್ದ ಗೋವಿಂದಪುರ ಠಾಣೆ ಕಾನ್‌ಸ್ಟೆಬಲ್ ಸೋನಾರ ಅವರನ್ನು ಅಮಾನತು ಮಾಡಲಾಗಿತ್ತು.

ಕಾರು ಹತ್ತಿಸಲು ಯತ್ನಿಸಿದ ಡಿವೈಎಸ್‌ಪಿ

ಬಿಟ್‌ಕಾಯಿನ್ ಹಗರಣದಲ್ಲಿ ಆಂತರಿಕ ಭದ್ರತಾ ವಿಭಾಗದ ಡಿವೈಎಸ್‌ಪಿಯಾಗಿದ್ದ ಶ್ರೀಧರ್ ಅವರನ್ನು ಬಂಧಿಸಲು 2024ರ ಫೆಬ್ರುವರಿಯಲ್ಲಿ ಎಸ್‌ಐಟಿಯ ಇಬ್ಬರು ಅಧಿಕಾರಿಗಳು ತೆರಳಿದ್ದರು. ಆ ಸಂದರ್ಭದಲ್ಲಿ ಅವರ ಮೇಲೆ ಡಿವೈಎಸ್‌ಪಿ ಶ್ರೀಧರ್ ಅವರು ಕಾರು ಹತ್ತಿಸಲು ಯತ್ನಿಸಿ ಪರಾರಿಯಾಗಿದ್ದರು.

> ಅಪರಾಧ ಕೃತ್ಯಗಳಲ್ಲಿ ಪೊಲೀಸರು ಭಾಗಿಯಾದರೆ ಮುಲಾಜಿಲ್ಲದೇ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಎಫ್‌ಐಆರ್ ಆದ ತಕ್ಷಣವೇ ಸೇವೆಯಿಂದ ವಜಾ ಮಾಡುತ್ತಿದ್ದೇವೆ. ಇಬ್ಬರನ್ನು ಈಗಾಗಲೇ ವಜಾ ಮಾಡಿದ್ದೇವೆ
>
> **ಜಿ.ಪರಮೇಶ್ವರ,** ಗೃಹ ಸಚಿವ

ಪೋಸ್ಟಿಂಗ್: ಕೋಟಿ ಮೀರಿದ 'ವ್ಯವಹಾರ'

'ಪಿಎಸ್‌ಐ, ಇನ್‌ಸ್ಪೆಕ್ಟರ್, ಡಿವೈಎಸ್‌ಪಿ, ಎಸಿಪಿ, ಎಸ್‌.ಪಿಗಳ ವರ್ಗಾವಣೆಗೆ ಹಣದ ವ್ಯವಹಾರ ನಡೆಯುತ್ತಿದೆ. ಆಯಕಟ್ಟಿನ ಠಾಣೆಗೆ ಇನ್‌ಸ್ಪೆಕ್ಟರ್ ವರ್ಗಾವಣೆ ಆಗಬೇಕಿದ್ದರೆ ₹20 ಲಕ್ಷದಿಂದ ₹50 ಲಕ್ಷ ಕೊಡಬೇಕು. ಅದೇ ಎಸಿಪಿ ದರ್ಜೆಯ ಅಧಿಕಾರಿಯ ಪೋಸ್ಟಿಂಗ್‌ಗೆ ₹75 ಲಕ್ಷ, ಎಸ್‌ಪಿ ದರ್ಜೆಯ ಅಧಿಕಾರಿಗೆ ₹2 ಕೋಟಿಯಿಂದ ₹5 ಕೋಟಿವರೆಗೆ ಇದೆ. ಸ್ಥಳ, ಠಾಣೆಗೆ ಅನುಗುಣವಾಗಿ ಹಣದ ಮೊತ್ತದಲ್ಲಿ ವ್ಯತ್ಯಾಸ ಆಗುತ್ತದೆ. ಹಣಕೊಟ್ಟು ವರ್ಗಾವಣೆ ಮಾಡಿಸಿಕೊಂಡವರು 'ಅಕ್ರಮ'ದ ಹಾದಿ ತುಳಿಯುತ್ತಿದ್ದಾರೆ' ಎಂದು ನಿವೃತ್ತ ಅಧಿಕಾರಿಯೊಬ್ಬರು ಹೇಳಿದರು.

'ಲಂಚ ಪಡೆದು ಪೋಸ್ಟಿಂಗ್ ಮಾಡಿಲ್ಲ'



'ನಾನು ಯಾರಿಂದಲೂ ಲಂಚ ಪಡೆದಿಲ್ಲ. ಹಣ ಪಡೆದು ಯಾವುದೇ ಪೊಲೀಸರಿಗೆ ಪೋಸ್ಟಿಂಗ್ ಮಾಡಿಲ್ಲ' ಎಂದು ಜಿ. ಪರಮೇಶ್ವರ ಹೇಳಿದರು.

'ವರ್ಗಾವಣೆಗೆ ಲಂಚ ಪಡೆದಿರುವುದನ್ನು ಸಾಬೀತುಪಡಿಸಿದರೆ ಒಂದು ಕ್ಷಣವೂ ಸಚಿವ ಸ್ಥಾನದಲ್ಲಿ ಇರುವುದಿಲ್ಲ. ವರ್ಗಾವಣೆ ದಂಧೆಯಲ್ಲಿ ತೊಡಗುವ ಏಜೆಂಟ್‌ಗಳ ವಿರುದ್ಧವೂ ಕ್ರಮ ಜರುಗಿಸುತ್ತೇವೆ' ಎಂದು ಹೇಳಿದರು.

'ಪೊಲೀಸ್ ಸಿಬ್ಬಂದಿ ಭ್ರಷ್ಟಾಚಾರ, ಅಕ್ರಮ ಚಟುವಟಿಕೆಗಳಲ್ಲಿ ತೊಡಗಿರುವುದು ಕಂಡುಬಂದರೆ ಅಮಾನತು ಅಥವಾ ಸೇವೆಯಿಂದ ವಜಾ ಮಾಡಲಾಗುತ್ತಿದೆ. ಬೆಂಗಳೂರಿನಲ್ಲಿ ನಡೆದ ₹7.11 ಕೋಟಿ ದರೋಡೆ ಪ್ರಕರಣದಲ್ಲಿ ಭಾಗಿಯಾಗಿರುವ ಪೊಲೀಸ್ ಕಾನ್‌ಸ್ಟೆಬಲ್‌ನನ್ನು ಸೇವೆಯಿಂದ ವಜಾಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ' ಎಂದರು.

ಸಂಶಯದಿಂದ ನೋಡುವ ಸನ್ನಿವೇಶ ಸೃಷ್ಟಿ: ಡಿಜಿಪಿ ಸಲೀಂ



ಅಪರಾಧ ಕೃತ್ಯಗಳಲ್ಲಿ ಕೆಲವು ಪೊಲೀಸರ ಹೆಸರು ತಳಕು ಹಾಕಿಕೊಂಡಿರುವುದಕ್ಕೆ ಸಾರ್ವಜನಿಕ ವಲಯದಲ್ಲಿ ಆಕ್ರೋಶ ಹೆಚ್ಚಾದ ಬೆನ್ನಲ್ಲೇ ರಾಜ್ಯ ಪೊಲೀಸ್ ನಿರ್ದೇಶಕ ಡಾ.ಎಂ.ಎ.ಸಲೀಂ ಅವರು ಎಲ್ಲ ಘಟಕದ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಶುಕ್ರವಾರ ಪತ್ರ ಬರೆದು ಸೂಚನೆ ನೀಡಿದ್ದಾರೆ.

'ಇಂತಹ ಪ್ರವೃತ್ತಿಗಳು ಪೊಲೀಸ್ ಇಲಾಖೆಯ ಮೇಲಿನ ವಿಶ್ವಾಸಾರ್ಹತೆಗೆ ಧಕ್ಕೆ ತರುತ್ತವೆ. ಇಲಾಖೆಯನ್ನು ಅಪಕೀರ್ತಿಗೆ ಗುರಿ ಮಾಡುತ್ತವೆ. ಈ ರೀತಿಯ ಕೃತ್ಯಗಳು ಸಾರ್ವಜನಿಕರಿಗೆ ಪೊಲೀಸರ ಮೇಲಿನ ನಂಬಿಕೆ ಕುಂದಿಸುತ್ತದೆ. ಕಾನೂನು ಜಾರಿಯ ಸಂಪೂರ್ಣ ವ್ಯವಸ್ಥೆಯ ಮೂಲ ಸಿದ್ಧಾಂತವನ್ನೇ ಸಂಶಯದಿಂದ ನೋಡುವ ಸನ್ನಿವೇಶ ಸೃಷ್ಟಿ ಆಗುತ್ತದೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಅಪರಾಧ ಕೃತ್ಯಗಳಲ್ಲಿ ತೊಡಗಿಕೊಳ್ಳುವ ಪೊಲೀಸ್ ಇಲಾಖೆಯ ಪ್ರತಿಯೊಬ್ಬ ಅಧಿಕಾರಿ, ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು' ಎಂದೂ ಎಚ್ಚರಿಸಿದ್ದಾರೆ.

'ಸಿಬ್ಬಂದಿಯ ಪೂರ್ವಾಪರವನ್ನು ಪರಿಶೀಲನೆ ನಡೆಸಬೇಕು. ಮೌಲ್ಯಮಾಪನ ಮಾಡಬೇಕು. ಜತೆಗೆ, ತರಬೇತಿಯನ್ನೂ ನೀಡಬೇಕು' ಎಂದು ಘಟಕಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ರಾಜ್ಯದ ವಿವಿಧೆಡೆಯ ಪ್ರಕರಣಗಳು

- **ದಾವಣಗೆರೆಯಲ್ಲಿ ಆಭರಣ ತಯಾರಕರೊಬ್ಬರಿಂದ ₹7.5 ಲಕ್ಷ ಮೌಲ್ಯದ ಚಿನ್ನಾಭರಣ ದರೋಡೆ:** ಪ್ರೊಬೆಷನರಿ ಪಿಎಸ್‌ಐ ಮಾಳಪ್ಪ ಚಿಪ್ಪಲಕಟ್ಟಿ ವಜಾ; ಮತ್ತೊಬ್ಬ ಪಿಎಸ್‌ಐ ಪ್ರವೀಣ್‌ಕುಮಾರ್ ಅಮಾನತು
- **ಚಾಮರಾಜನಗರ:** ಲಾಡ್ಜ್‌ವೊಂದರಲ್ಲಿ ಕೇರಳದ ವ್ಯಕ್ತಿಯನ್ನು ಬೆದರಿಸಿ ಹಣ ಸುಲಿಗೆ (ಜುಲೈ 29) ಮಾಡಿದ ಆರೋಪ; ಚಾಮರಾಜನಗರ ಠಾಣೆಯ ಪಿಎಸ್‌ಐ ಅಯ್ಯನಗೌಡ, ಹೆಡ್‌ಕಾನ್‌ಸ್ಟೆಬಲ್ ಬಸವಣ್ಣ, ಕಾನ್‌ಸ್ಟೆಬಲ್‌ಗಳಾದ ಮಹೇಶ್ ಹಾಗೂ ಯೋಗೇಶ್ ಅಮಾನತು, ಪ್ರಕರಣ ದಾಖಲು
- **ಚಿಕ್ಕಬಳ್ಳಾಪುರ:** ಕಪ್ಪು ಹಣ ವರ್ಗಾವಣೆ ಜಾಲದಿಂದ ವಶಕ್ಕೆ ಪಡೆದ ಹಣ ದುರ್ಬಳಕೆ (2023ರ ಆಗಸ್ಟ್) ಆರೋಪ; ಬಾಗೇಪಲ್ಲಿ ಪೊಲೀಸ್ ಠಾಣೆಯ ಪಿಎಸ್‌ಐ ರವಿಕುಮಾರ್, ಕಾನ್‌ಸ್ಟೆಬಲ್‌ಗಳಾದ ನರಸಿಂಹಮೂರ್ತಿ, ಅಶೋಕ್ ಅಮಾನತು
- **ಯಾದಗಿರಿ:** ಹಲ್ಲೆ, ಜೀವ ಬೆದರಿಕೆ ಪ್ರಕರಣದ ಆರೋಪಿಗಳನ್ನು ಬಂಧಿಸಲು ದೂರುದಾರರಿಂದ ಹಣ ಪಡೆದ ಆರೋಪ; ಗುರುಮಠಕಲ್ ಠಾಣೆಯ ಎಎಸ್‌ಐ ಗೋಪಾಲರೆಡ್ಡಿ ಹಾಗೂ ಹೆಡ್‌ಕಾನ್‌ಸ್ಟೆಬಲ್ ವಿಶ್ವನಾಥರೆಡ್ಡಿ ಅಮಾನತು, ಜೀವ ಬೆದರಿಕೆ ಹಾಕಿ ಮಹಿಳೆ ಮೇಲೆ ಅತ್ಯಾಚಾರ ಎಸಗಿದ್ದ ಆರೋಪದಡಿ ಗುರುಮಠಕಲ್ ಠಾಣೆಯ ಕಾನ್‌ಸ್ಟೆಬಲ್ ರಮೇಶ ಮಲ್ಲಪ್ಪ ಸೇರಿ ಇಬ್ಬರ ವಿರುದ್ಧ ಪ್ರಕರಣ ದಾಖಲು
- **ಮೈಸೂರು:** ಸುಳ್ಳು ಪ್ರಕರಣ ದಾಖಲಿಸಿ ಹಣ ವಸೂಲಿಗೆ ಯತ್ನಿಸಿದ ಪ್ರಕರಣದಲ್ಲಿ (2021ರ ಡಿಸೆಂಬರ್) ನಜರ್‌ಬಾದ್ ಠಾಣೆಯ ಎಎಸ್‌ಐ ಗೋವಿಂದನಾಯಕ ಹಾಗೂ ಹೆಡ್‌ಕಾನ್‌ಸ್ಟೆಬಲ್ ಚೆನ್ನಬಸಪ್ಪ ಅವರನ್ನು ಅಮಾನತು ಮಾಡಲಾಗಿತ್ತು
- **ಕೋಲಾರ:** ಆಂಧ್ರ ಪ್ರದೇಶದಲ್ಲಿ ಟಿಡಿಪಿ ಶಾಸಕರೊಬ್ಬರ ಬೆಂಬಲಿಗನ ಕೊಲೆ ಯತ್ನ ಪ್ರಕರಣದಲ್ಲಿ (2024ರ ಆಗಸ್ಟ್) ಸಂಚು ರೂಪಿಸಿದ ಆರೋಪದ ಮೇಲೆ ಚಿತ್ತೂರು ಜಿಲ್ಲೆಯ ಪೊಲೀಸರಿಂದ ಬಂಧಿತರಾಗಿದ್ದ ಕೋಲಾರ ಗ್ರಾಮಾಂತರ ಠಾಣೆಯ ಕಾನ್‌ಸ್ಟೆಬಲ್ ವಿನಾಯಕ ಅಮಾನತು; ಇದೇ ಪ್ರಕರಣದಲ್ಲಿ ವಿನಾಯಕ್ ಅವರಿಗೆ ನೆರವಾಗಿದ್ದಾರೆ ಎಂದು ಎಸ್‌ಪಿ ಕಚೇರಿಯಲ್ಲಿರುವ ಸಿಡಿಆರ್ ತೆಗೆಯುವ ಪೊಲೀಸ್ ಕಾನ್‌ಸ್ಟೆಬಲ್ ನಾಗರಾಜ್ ಕೂಡ ಅಮಾನತು
- ಪಾನಮತ್ತರಾಗಿ ಬಾರ್ ಸಿಬ್ಬಂದಿ ಮೇಲೆ ಹಲ್ಲೆಗೆ ಯತ್ನಿಸಿದ್ದ (2023ರ ನವೆಂಬರ್) ಕೋಲಾರ ಗ್ರಾಮಾಂತರ ಠಾಣೆಯ ಎಎಸ್‌ಐ ಕೆ.ಸಿ. ನಾರಾಯಣಸ್ವಾಮಿ ಅಮಾನತು
- **ಬಳ್ಳಾರಿ:** ಕೌಟುಂಬಿಕ ಸಮಸ್ಯೆ ಹೇಳಿಕೊಂಡು ಬಂದ ಮಹಿಳೆಯೊಬ್ಬರನ್ನು ಲೈಂಗಿಕವಾಗಿ ಬಳಸಿಕೊಂಡ ಆರೋಪದ ಮೇಲೆ 2024ರ ಡಿಸೆಂಬರ್‌ನಲ್ಲಿ ಬಳ್ಳಾರಿಯ ಕೌಲ್ ಬಜಾರ್ ಠಾಣೆಯ ಹೆಡ್ ಕಾನ್ಸ್‌ಟೇಬಲ್ ಸೈಯದ್ ಇಮ್ರಾನ್ ಮತ್ತು ಆತನ ಅಕ್ಕನ ಮಗನಾದ, ಬಳ್ಳಾರಿ ಸಂಚಾರ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದ ಆಜಾದ್ ವಿರುದ್ಧ ಬಳ್ಳಾರಿಯ ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲು; ಇಬ್ಬರ ಬಂಧನ, ಅಮಾನತು
- **ದರೋಡೆ:** ಬಳ್ಳಾರಿಯಲ್ಲಿ 2024ರ ಸೆಪ್ಟೆಂಬರ್ 12ರಂದು ನಡೆದಿದ್ದ ₹38.89 ಲಕ್ಷ ಹಣ, ಆಭರಣ ದರೋಡೆ ಪ್ರಕರಣದಲ್ಲಿ ಬ್ರೂಸ್‌ಪೇಟೆ ಹೆಡ್‌ಕಾನ್‌ಸ್ಟೆಬಲ್ ಮಹಬೂಬ್, ಗೃಹರಕ್ಷಕ ದಳದ ಮಾಜಿ ಸಿಬ್ಬಂದಿ ಆರೀಫ್ ಸೇರಿ 7 ಆರೋಪಿಗಳ ಬಂಧನ; ಮಹಬೂಬ್ ಅಮಾನತು, ಇಲಾಖಾ ತನಿಖೆ
- **ಬೆಳಗಾವಿ:** ಸವದತ್ತಿ ತಾಲ್ಲೂಕಿನ ರಾಮಾಪುರ ಸೈಟ್ ಬಡಾವಣೆಯಲ್ಲಿ ಅ.13ರಂದು ನಿಪ್ಪಾಣಿ ಶಹರ ಠಾಣೆಯ ಕಾನ್‌ಸ್ಟೆಬಲ್ ಸಂತೋಷ ಕಾಂಬಳೆಯಿಂದ ಆತನ ವಿಚ್ಛೇದಿತ ಪತ್ನಿಯ ಬರ್ಬರ ಕೊಲೆ; ಸಂತೋಷ ಸೇವೆಯಿಂದ ಅಮಾನತು
- **ಮಹಿಳೆಗೆ ಅಶ್ಲೀಲ ಕರೆ:** ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆ ಠಾಣೆಗೆ 2025ರ ಆ.25ರಂದು ದೂರು ನೀಡಲು ಬಂದ ಮಹಿಳೆಯ ಮೊಬೈಲ್‌ಗೆ ಪದೇ ಪದೇ ಕರೆ ಮಾಡಿ ಅಶ್ಲೀಲವಾಗಿ ಮಾತನಾಡಿದ ಆರೋಪದ ಮೇಲೆ ಠಾಣೆಯ ಕಾನ್‌ಸ್ಟೆಬಲ್ ಶಾಂತಪ್ಪ ಅಮಾನತು; ಬಂಧನ
- ಮನೆಯೊಂದಕ್ಕೆ (2025ರ ಡಿ.3) ಅಕ್ರಮವಾಗಿ ಪ್ರವೇಶಿಸಿ, ಗಲಾಟೆ ಮಾಡಿ ಹಲ್ಲೆ ನಡೆಸಿದ ಆರೋಪದ ಮೇಲೆ ದಕ್ಷಿಣ ಕನ್ನಡ ಜಿಲ್ಲೆಯ ಕಡಬ ಠಾಣೆಯ ಹೆಡ್ ಕಾನ್‌ಸ್ಟೆಬಲ್ ರಾಜು ನಾಯ್ಕ ಅಮಾನತು; ಆರೋಪಿಯ ಬಂಧನ

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

06 ಡಿಸೆಂಬರ್ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ದ್ವಿತೀಯ ಗಂ. 21-26 ನಕ್ಷತ್ರ: ಮೃಗಶಿರ ಗಂ. 8-49 ನಂತರ ಆರ್ದ್ರಾ ಗಂ. 30-14 ಯೋಗ: ಶುಭ ಗಂ. 23-46 ಕರಣ: ತೈತಿಲ ಗಂ. 11-08 ವೃಶ್ಚಿಕ ಮಾಸದ 20 ನೇ ದಿನ. ಮಳೆ ನಕ್ಷತ್ರ : ಜ್ಯೇಷ್ಠ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 - 10-30 ಸೂರ್ಯೋದಯ : 06-44 ಸೂರ್ಯಾಸ್ತ : 05-59, ಮುಸ್ಲಿಂ ದಿನಾಂಕ : 14 ಜುಮಾದುಸ್ಸಾನಿ, ಅದೃಷ್ಟ ಸಂಖ್ಯೆ : 4, 9

ಮೇಷ: ಬ್ಯಾಂಕ್ ಉದ್ಯೋಗಿಯಾಗುವ ಸಾಮರ್ಥ್ಯವಿದೆ ಎಂದು ಧೈರ್ಯ ವಿದ್ದರಷ್ಟೇ ಪರೀಕ್ಷೆ ಕಟ್ಟುವ ಸಾಹಸ ಮಾಡಿ. ಇನ್ನೊಬ್ಬರ ಜೀವನದಲ್ಲಿ ನಿಮ್ಮ ಪಾತ್ರ ಮಹತ್ವದ್ದು ಎಂದು ತಿಳಿದು ಸಂತೋಷವಾಗುವುದು.

ವೃಷಭ: ಕೈಗೊಂಡ ಕೆಲಸಗಳ ಬಗೆಗೆ ಮುತುವರ್ಜಿ ವಹಿಸುವುದರಿಂದ ಮನಸ್ಸಿಗೆ ಒಪ್ಪುವ ರೀತಿಯಲ್ಲಿ ಕೆಲಸ ಪೂರ್ಣಗೊಳ್ಳುವುದು. ಮಾನಸಿಕವಾಗಿ ಕಾಡುತ್ತಿರುವ ಚಿಂತೆಗೆ ಉತ್ತಮ ಪರಿಹಾರ ಸಿಗಲಿದೆ.

ಮಿಥುನ: ಲೋಹದ ಕಾರ್ಖಾನೆ ಉದ್ಯಮಿಗಳು, ಚಿನ್ನಾಭರಣ ವ್ಯಾಪಾರಿಗಳು ಉದ್ಯೋಗದಲ್ಲಿ ಅಧಿಕ ಲಾಭವನ್ನು ಹೊಂದುವಿರಿ. ಶಿಕ್ಷಕರ ಹೆಸರನ್ನು ವಿದ್ಯಾರ್ಥಿಗಳು ಉನ್ನತಮಟ್ಟಕ್ಕೆ ಕೊಂಡೊಯ್ಯುವರು.

ಕರ್ಕಾಟಕ: ಕೆಲವೊಂದು ಅರ್ಥವಿಲ್ಲದ ಕುಟುಂಬದ ನಡೆಗಳನ್ನು ವಿರೋಧಿಸಿ ಧ್ವನಿಯನ್ನು ಎತ್ತುವಿರಿ. ಸ್ನೇಹಿತರ ಸಹಕಾರದಿಂದ ಪ್ರಾರಂಭಿಸಿದ ವ್ಯವಹಾರ ದಲ್ಲಿ ಉತ್ತಮ ಫಲಿತಾಂಶ ಸಿಗಲಿದೆ.

ಸಿಂಹ: ಗುರು-ಹಿರಿಯರ ಅನುಗ್ರಹದಿಂದ, ಶಾಂತಿಯುತ ಸ್ವಭಾವದಿಂದ ನೆಮ್ಮದಿ ಕಾಣುವಿರಿ. ಚರ ಆಸ್ತಿಯನ್ನು ಮಾರಾಟ ಮಾಡುವಲ್ಲಿ ನಷ್ಟ ಸಂಭವಿಸುವುದು. ವಾಹನ ಖರೀದಿಗೆ ಕಾಯಿರಿ.

ಕನ್ಯಾ: ದೇವರ ಕೃಪೆಯಿಂದಾಗಿ ವ್ಯವಹಾರ ಕ್ಷೇತ್ರದಲ್ಲಿ ಆಗಬೇಕಾದ ಅನಾಹುತಗಳು ನಿವಾರಣೆಯಾಗಲಿವೆ. ನಿಮ್ಮ ಪ್ರವಾಸದ ಕನಸು ನನಸಾಗು ವಂಥ ಲಕ್ಷಣಗಳಿವೆ. ಸಂತಸದ ವಿಚಾರವನ್ನು ಎಲ್ಲರಿಗೂ ತಿಳಿಸುವಿರಿ.

ತುಲಾ: ಮಗಳ ಮಾತಿಗೆ ಬೆಲೆ ಕೊಟ್ಟು ಆಕೆಯ ಇಚ್ಛೆಯಂತೆಯೇ ಆಗಲು ಬಿಟ್ಟರೂ ಮನಸ್ಸಿಗೆ ನೋವು ಮಾಡಬಹುದು. ಪ್ರಾರಂಭಿಸಿದ ಕಾರ್ಯಗಳು ಸೂಕ್ತ ಸಮಯದಲ್ಲಿ ಪೂರ್ಣಗೊಳ್ಳಲಿವೆ.

ವೃಶ್ಚಿಕ: ಮನೋಭಿಲಾಷೆಯಂತೆ ತವರು ಮನೆಯಂತೆಯೇ ಪತಿಯ ಗೃಹದಲ್ಲಿಯು ಜೀವನ ಪ್ರಾರಂಭಿಸುವಿರಿ. ಸ್ಪರ್ಧಾತ್ಮಕ ಮನೋಭಾವ ಹೊಸ ಸಾಹಸಕ್ಕೆ ಕೈ ಹಾಕಲು ಪ್ರೇರೇಪಿಸುವುದು.

ಧನು: ನೂತನ ಮನೆ ನಿರ್ಮಾಣ ಅಥವಾ ನಿವೇಶನಗಳ ಖರೀದಿಯ ಆಲೋಚನೆಗಳಿಗೆ ಪೂರಕ ವಾತಾವರಣ ಸ್ನೇಹಿತರಿಂದ ಸಿಗಲಿದೆ. ಆರಾಧ್ಯ ದೇವತೆಯು ಅಭೀಷ್ಟವನ್ನು ನೆರವೇರಿಸಿದ್ದರಿಂದ ಹರಕೆ ತೀರಿಸುವಿರಿ.

ಮಕರ: ಶ್ರಮವಹಿಸಿ ಕೆಲಸ ನಿರ್ವಹಿಸಿದ ಕಾರಣದಿಂದಾಗಿ ದೇಹಾಯಾಸ ಕಾಡುವುದು. ಹೊರಗೆ ಸಂತೋಷವನ್ನು ಹುಡುಕುವ ಬದಲು ಮನೆಯವರೊಂದಿಗೆ ಖುಷಿಯಾಗಿ ಕಾಲಕಳೆಯಿರಿ.

ಕುಂಭ: ಸೂಕ್ತ ಸಮಯದಲ್ಲಿ ಕೆಲಸಗಳನ್ನು ಮಾಡಿಕೊಳ್ಳದೆ ಕಡೇಯ ಗಳಿಗೆಯಲ್ಲಿ ಕಷ್ಟಪಡುವಿರಿ. ಗ್ರಹದ ಫಲಗಳು ಅನುಕೂಲಕರವಾಗಿರುವು ದರಿಂದ ವ್ಯಾಪಾರ ನಿರೀಕ್ಷೆಗೂ ಮಿಕ್ಕಿ ಲಾಭದಾಯಕವಾಗುವುದು.

ಮೀನ: ಅಜ್ಞಾನದಿಂದ ಮಾಡಿದ ತಪ್ಪು ಕೆಲಸವು ಭವಿಷ್ಯದ ಮೇಲೆ ಪರಿಣಾಮವನ್ನು ಬೀರುತ್ತದೆ. ನೂತನ ವಸ್ತ್ರವನ್ನು ಇತರರಿಗೆ ಕೊಡಲು ಯೋಚನೆ ಮಾಡುವಿರಿ.

ಪದಬಂಧ 6245


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನಮ್ಮ ಕನ್ನಡದ ಕಂಪು ಈ ಸುಗಂಧ ದ್ರವ್ಯದಂತೆ! (3)
3.ಬೆದರಿದಾಗ ಹೊರ ಬಂದಿರುವ ಸ್ವೇದ! (3)
4.ನುಡಿಸುವ ಸಂಗೀತ ಸಾಧನ (2)
5.ಗೊಮ್ಮಟೇಶ್ವರನ ಮೂರ್ತಿ ಇರುವ ಊರು (3)
6.ತೆಂಗಿನಕಾಯಿಯ ಮೇಲಿರುವ ನಾರು (2)
9.ಕಿವಿ ಅಥವಾ ಹಡಗಿನ ಚುಕ್ಕಾಣಿ (2)
10.ಗೋಳಗುಮ್ಮಟವಿರುವ ಊರು (5)
12.ಬಿಸಿಲಲ್ಲಿ ಡೊಗರು ಕಾಣುತ್ತಿದೆಯೇ?(2)
13.ಪಗಡೆಯಾಟದಲ್ಲಿ ದಾಳಗಳಿಂದ ಸೂಚಿತವಾಗುವ ಸಂಖ್ಯೆ (2)
14.ದಾರದೊಳಗಿರುವ ಉದಾರಿ! (3)
15.ಪ್ರತ್ಯಯ ಸಹಿತವಾದ ಶಬ್ದ (2)
16.ಈತ ತಿರುಗಾಡುವವನು (3)
17.ಗಣಿಯ ಹತ್ತಿರ ಕಲಿತಿರುವ ಲೆಕ್ಕ ಶಾಸ್ತ್ರ (3)

ಮೇಲಿಂದ ಕೆಳಕ್ಕೆ

1.ಹಸುವಿನ ಮರಿ (2)
2.ರೀತಿಯೊಡಗೂಡುವ ಜೋಡು ನುಡಿ (3)
3.ಸಿಹಿತಿಂಡಿ ಕುಂದಾಕ್ಕೆ ಪ್ರಸಿದ್ಧ ಪಡೆದ ಜಿಲ್ಲೆ (4)
5.ಮಳೆಬಿಲ್ಲನ್ನು ಹೀಗೂ ಕರೆಯುತ್ತಾರೆ (5)
7.ಬೇರೆ ಬೇರೆ ಜಾತಿಗಳು ಬೆರೆಯುವಿಕೆ (5)
8. ಸಂಚಾರಕ್ಕೊಂದು ಪರ್ಯಾಯ ಪದ (3)
11.ದಾರಿಯ ಕೊನೆಯಲ್ಲಿ ಪಡೆದುಕೊಂಡಿರುವ ಅಪ್ಪಣೆಚೀಟಿ (4)
13.ಕುಮಾರವ್ಯಾಸ ಹುಟ್ಟಿದ ಜಿಲ್ಲೆಯಿದು (3)
16.ಸಂತತಿಯಲ್ಲಿರುವ ಋಷಿ ಕಾಣುತ್ತಿದ್ದಾನೆಯೇ? (2)



6244ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಸೆರೆಮನೆ 3.ತೊಡಪು 5.ಗುಲಾಮ 7.ಛಳುಕು 8.ವಿಶ್ವಾಸಘಾತ 11.ರುಮಾಲು 12.ನಿಗಮ 15.ಗುದಾಮು 16.ಪರೀಕ್ಷಕ

ಮೇಲಿಂದ ಕೆಳಕ್ಕೆ:

1.ಸೆರಗು 2.ನೆಪ 3.ತೊಡಕು 4.ಪುರೋಗಾಮಿ 6.ಮನವಿ 7.ಛಡಸವಾಲು 9.ತರ್ಜನಿ 10.ಹುಸಿನಗು 11.ರುಸುಮು 13.ಮಣಕ 14.ಕೂಪ

ಸುಡೊಕು 6629


ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7			9	8		6	
1		9	6			5		3
	6		5		2		9	
9		2				3		6
	4			5			7	
8		7	2		4	1		9
		6	4		5		2	
				2		7		4
		4	1		9		3	

6628 ಸುಡೊಕು

6	4	2	9	5	7	1	8	3
8	9	5	1	3	6	2	4	7
7	1	3	2	8	4	6	5	9
3	2	6	5	4	9	7	1	8
9	8	7	6	1	2	4	3	5
1	5	4	3	7	8	9	6	2
5	7	9	8	6	1	3	2	4
2	6	8	4	9	3	5	7	1
4	3	1	7	2	5	8	9	6

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	26,033
ಇಂದಿನ ಅಂತ್ಯ:	26,186
ದಿನದ ಕನಿಷ್ಠ:	25,985
	152

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹675
	12 ಕ್ಕೆ	₹96
ಮೈಸೂರು:	100 ಕ್ಕೆ	₹675

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹400-718
ದ್ವಿತಳಿ (ಬಿ.ವಿ)	₹500-899

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹180
ಆರ್‌ಎಸ್‌ಎಸ್-5	₹175
ಗುಡ್ ಲಾಟ್	₹163

ಮುದ್ರೆ-ಮನೆ ಕಾಫಿ (50 ಕೆಜಿಗೆ)

ಎಪಿ	₹28750
ಎಸಿ	₹15820
ಆರ್‌ಪಿ	₹18900
ಆರ್‌ಸಿ	₹10475

ಈರುಳ್ಳಿ ಧಾರಣೆ (ಪ್ರತಿ ಕ್ವಿಂಟಾಲ್) ಬೆಂಗಳೂರು

ದೊಡ್ಡ	₹1500-2600
ಮಧ್ಯಮ	₹1000-1500
ಸಣ್ಣ	₹200-1000

ಹೊನ್ನಾಳಿ	
ಇಡಿ	27000-27000
ರಾಶಿ	56499-57409
ಸಿಪ್ಪೆಗೋಟು	10000-10000
ತೀರ್ಥಹಳ್ಳಿ	
ಸಿಪ್ಪೆಗೋಟು	14000-14000
ಸಿ.ಆರ್.ನಗರ	
ಇತರೆ	13000-13000
ಹೊಳಲ್ಕೆರೆ	
ಇತರೆ	28000-30000

ರೆಪೊ ದರ ಇಳಿಕೆ, ಸಾಲ ಅಗ್ಗ ಸಾಧ್ಯತೆ

'ತಟಸ್ಥ' ಹಣಕಾಸಿನ ನಿಲುವನ್ನು ಉಳಿಸಿಕೊಂಡ ಆರ್‌ಬಿಐ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರವನ್ನು ಶೇಕಡ 0.25ರಷ್ಟು ಕಡಿಮೆ ಮಾಡಿದ್ದು, ಇದರ ಪರಿಣಾಮವಾಗಿ ಗೃಹಸಾಲ, ವಾಹನ ಸಾಲ ಮತ್ತು ಇತರ ಸಾಲಗಳ ಮೇಲಿನ ಬಡ್ಡಿಯ ಹೊರೆ ತುಸು ಇಳಿಕೆಯಾಗುವ ನಿರೀಕ್ಷೆ ಇದೆ.



ಸಂಜಯ್ ಮಲ್ಹೋತ್ರಾ

ಆರ್‌ಬಿಐ ಆರು ತಿಂಗಳ ಅವಧಿಯಲ್ಲಿ ಇದೇ ಮೊದಲ ಬಾರಿಗೆ ರೆಪೊ ದರ ತಗ್ಗಿಸಿದೆ. ದೇಶದ ಅರ್ಥ ವ್ಯವಸ್ಥೆಯು ಬಹಳ ಉತ್ತಮವಾದ ಸ್ಥಿತಿಯಲ್ಲಿ ಇದ್ದು, ಇದಕ್ಕೆ ಬೆಂಬಲವಾಗಿ ನಿಲ್ಲಲು ಬ್ಯಾಂಕಿಂಗ್ ವ್ಯವಸ್ಥೆಗೆ ಹೆಚ್ಚಿನ ನಗದು ಲಭ್ಯವಾಗುವಂತೆ ನೋಡಿಕೊಳ್ಳಲಾಗುತ್ತದೆ ಎಂದು ಆರ್‌ಬಿಐ ಹೇಳಿದೆ.

ರೆಪೊ ದರವನ್ನು ತೀರ್ಮಾನಿಸುವ, ಆರು ಜನ ಸದಸ್ಯರ ಹಣಕಾಸು ನೀತಿ ಸಮಿತಿಯು (ಎಂಪಿಸಿ) ದರ ಇಳಿಕೆಗೆ ಸರ್ವಾನುಮತದಿಂದ ಒಪ್ಪಿಗೆ ನೀಡಿದೆ.

ಮುಖ್ಯಾಂಶಗಳು

- ರೆಪೊ ದರ ಈಗ ಶೇ 5.25
- ದರ ಇಳಿಕೆಗೆ ಸರ್ವಾನುಮತದ ಒಪ್ಪಿಗೆ
- ಮುಂದೆಯೂ ದರ ಇಳಿಕೆಗೆ ಇದೆ ಅವಕಾಶ

ಸಮಿತಿಗೆ ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರ ಮುಖ್ಯಸ್ಥರು. ಈ ಇಳಿಕೆಯೊಂದಿಗೆ ರೆಪೊ ದರವು ಶೇ 5.25ರಷ್ಟು ಆಗಿದೆ.

ಆರ್‌ಬಿಐ 'ತಟಸ್ಥ' ಹಣಕಾಸು ನಿಲುವನ್ನು ಕಾಯ್ದುಕೊಂಡಿದೆ, ಮುಂದೆಯೂ ರೆಪೊ ದರ ಇಳಿಕೆಗೆ ಅವಕಾಶ ಉಳಿಸಿಕೊಂಡಿದೆ.

ಅಮೆರಿಕವು ಭಾರತದ ಸರಕುಗಳ ಮೇಲೆ ಶೇ 50ರಷ್ಟು ಸುಂಕ ವಿಧಿಸಿದ ಪರಿಣಾಮವಾಗಿ ಆರ್ಥಿಕತೆಯ ಮೇಲೆ ಆಗಿರುವ ಕೆಟ್ಟ ಪರಿಣಾಮವನ್ನು ನಿಭಾಯಿಸುವ ಉದ್ದೇಶದೊಂದಿಗೆ ಆರ್‌ಬಿಐ ರೆಪೊ ದರ ಇಳಿಸಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

> **ರೆಪೊ ಇಳಿಕೆಯು ಮುಂದಿನ ಹಣಕಾಸು ವರ್ಷದಲ್ಲಿ ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡಬಹುದು. ಹಣಕಾಸು ನೀತಿಗಳಿಗೆ ಸಂಬಂಧಿಸಿದ ನಿರ್ಣಯಗಳ ಪರಿಣಾಮವು ಸಾಮಾನ್ಯವಾಗಿ ವಿಳಂಬವಾಗಿ ಕಾಣಿಸಿಕೊಳ್ಳುತ್ತದೆ.**
> **ಧರ್ಮಕೀರ್ತಿ ಜೋಶಿ,** ಕ್ರಿಸಿಲ್ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞ

ಜಿಎಸ್‌ಟಿ ದರ ಪರಿಷ್ಕರಣೆ, ಕಾರ್ಮಿಕ ನಿಯಮಗಳಲ್ಲಿ ಬದಲಾವಣೆ, ಹಣಕಾಸು ವಲಯಕ್ಕೆ ಸಂಬಂಧಿಸಿದ ನಿಯಮಗಳನ್ನು ಸುಲಭವಾಗಿಸುವ ಮೂಲಕ ಕೇಂದ್ರ ಸರ್ಕಾರವು ಅರ್ಥ ವ್ಯವಸ್ಥೆಯ ಉತ್ತೇಜನಕ್ಕೆ ಒಂದಿಷ್ಟು ಕ್ರಮ ಕೈಗೊಂಡಿದೆ. ಅದಕ್ಕೆ ಪೂರಕವಾಗಿ ರೆಪೊ ದರ ಇಳಿಕೆ ಮಾಡಲಾಗಿದೆ ಎಂದೂ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ರೆಪೊ ದರ ಇಳಿಕೆಯ ಪ್ರಯೋಜನವನ್ನು ಬ್ಯಾಂಕ್‌ಗಳು ಗ್ರಾಹಕರಿಗೆ ವರ್ಗಾವಣೆ ಮಾಡಿದ ನಂತರದಲ್ಲಿ ವಿವಿಧ ಬಗೆಯ ಸಾಲಗಳ ಮೇಲಿನ ಇಎಂಐ ಮೊತ್ತವು ಕಡಿಮೆ ಆಗಲಿದೆ.

ರೆಪೊ ಇಳಿಕೆಗೆ ಉದ್ಯಮ ವಲಯ ಹರ್ಷ

ನವದೆಹಲಿ (ಪಿಟಿಐ): ರೆಪೊ ದರ ಇಳಿಕೆ ನಿರ್ಧಾರವನ್ನು ಆಟೊಮೊಬೈಲ್ ಹಾಗೂ ರಿಯಲ್ ಎಸ್ಟೇಟ್ ಉದ್ಯಮ ವಲಯಗಳು ಸ್ವಾಗತಿಸಿವೆ.

ರೆಪೊ ದರವನ್ನು ಶುಕ್ರವಾರ ಶೇ 0.25ರಷ್ಟು ತಗ್ಗಿಸಿರುವುದು ಹಾಗೂ ಈ ಹಿಂದಿನ ರೆಪೊ ದರ ಇಳಿಕೆ ಕ್ರಮಗಳು ದೇಶದ ಗ್ರಾಹಕರ ವಿಶ್ವಾಸವನ್ನು ಹೆಚ್ಚಿಸಲು ಹಣಕಾಸಿನ ಪೂರಕ ಕ್ರಮಗಳಾಗಿ ಒದಗಿಬಂದಿವೆ ಎಂದು ಭಾರತೀಯ ಆಟೊಮೊಬೈಲ್ ತಯಾರಕರ ಸಂಘದ (ಎಸ್‌ಐಎಎಂ) ಅಧ್ಯಕ್ಷ ಶೈಲೇಶ್ ಚಂದ್ರ ಹೇಳಿದ್ದಾರೆ.

'2025–26ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದ ಆದಾಯ ತೆರಿಗೆ ವಿನಾಯಿತಿ ಕ್ರಮ, ಜಿಎಸ್‌ಟಿ ದರ ಪರಿಷ್ಕರಣೆಯು ವಾಹನಗಳು ಇನ್ನಷ್ಟು ಕೈಗೆಟಕುವಂತೆ ಮಾಡಿವೆ' ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

'ಆರ್‌ಬಿಐನ ಕ್ರಮವು ಸಾಲದ ಬಡ್ಡಿಯನ್ನು ಕಡಿಮೆ ಮಾಡುತ್ತದೆ, ಸಾಲ ನೀಡಿಕೆಯನ್ನು ಹೆಚ್ಚಿಸುತ್ತದೆ, ರಿಯಲ್ ಎಸ್ಟೇಟ್ ಸೇರಿದಂತೆ ಬೇರೆ ಬೇರೆ ವಲಯಗಳಲ್ಲಿ ಬೇಡಿಕೆ ಹೆಚ್ಚಿಸುತ್ತದೆ' ಎಂದು ಕ್ರೆಡಾಯ್ ಅಧ್ಯಕ್ಷ ಶೇಖರ್ ಪಟೇಲ್ ಹೇಳಿದ್ದಾರೆ.

ರೆಪೊ ದರವನ್ನು ಇಳಿಕೆ ಮಾಡಿರುವುದು ಅರ್ಥ ವ್ಯವಸ್ಥೆಗೆ ಹೊಸ ವೇಗವನ್ನು ನೀಡಲು ಬಹಳ ಮುಖ್ಯವಾದ ಹೆಜ್ಜೆ ಎಂದು ರಾಷ್ಟ್ರೀಯ ರಿಯಲ್ ಎಸ್ಟೇಟ್ ಅಭಿವೃದ್ಧಿ ಮಂಡಳಿಯ (ನಾರೆಡ್ಕೊ) ಅಧ್ಯಕ್ಷ ಪ್ರವೀಣ್ ಜೈನ್ ಹೇಳಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದ ಮೊದಲ ಆರು ತಿಂಗಳ ಅವಧಿಯಲ್ಲಿ ಹಣದುಬ್ಬರ ಪ್ರಮಾಣವು ಶೇ 2.2ರಷ್ಟು ಇದೆ. ಈ ಅವಧಿಯಲ್ಲಿ ಜಿಡಿಪಿ ಬೆಳವಣಿಗೆ ದರವು ಶೇ 8ರಷ್ಟು ಆಗಿದೆ. ಇದು ಅರ್ಥ ವ್ಯವಸ್ಥೆಯು ಬಹಳ ಉತ್ತಮ ಸ್ಥಿತಿಯಲ್ಲಿರುವುದನ್ನು ಹೇಳುತ್ತಿದೆ ಎಂದು ಮಲ್ಹೋತ್ರಾ ಅವರು ಸುದ್ದಿಗಾರರಿಗೆ ತಿಳಿಸಿದರು.

ಇಡೀ ಹಣಕಾಸು ವರ್ಷದಲ್ಲಿ ಹಣದುಬ್ಬರ ಪ್ರಮಾಣವು ಶೇ 2ರಷ್ಟು ಮಾತ್ರ ಇರಲಿದೆ ಎಂದು ಆರ್‌ಬಿಐ ಅಂದಾಜು ಮಾಡಿದೆ. ಅಲ್ಲದೆ, ದೇಶದ ಜಿಡಿಪಿ ಬೆಳವಣಿಗೆ ಪ್ರಮಾಣವು ಶೇ 7.3ರಷ್ಟು ಆಗಲಿದೆ ಎಂದು ಕೂಡ ಅದು ಅಂದಾಜಿಸಿದೆ.

ಬಡ್ಡಿ ದರ ಇಳಿಸಿದ ಬಿಒಬಿ

ನವದೆಹಲಿ (ಪಿಟಿಐ): ರೆಪೊ ದರ ತಗ್ಗಿಸುವ ತೀರ್ಮಾನವನ್ನು ಆರ್‌ಬಿಐ ಪ್ರಕಟಿಸಿದ ನಂತರ, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಬರೋಡ (ಬಿಒಬಿ) ರೆಪೊ ದರಕ್ಕೆ ಹೊಂದಿಕೊಂಡಿರುವ ಸಾಲಗಳ ಮೇಲಿನ ಬಡ್ಡಿ ದರವನ್ನು ಶೇ 0.25ರಷ್ಟು ಕಡಿತ ಮಾಡುತ್ತಿರುವುದಾಗಿ ಪ್ರಕಟಿಸಿದೆ.

ಬ್ಯಾಂಕ್‌ನ ಈ ತೀರ್ಮಾನದ ಪರಿಣಾಮವಾಗಿ ರೆಪೊ ದರಕ್ಕೆ ಹೊಂದಿಕೊಂಡಿರುವ ಸಾಲದ ಮೇಲಿನ ಬಡ್ಡಿ ದರವು ಶೇ 8.15ರಷ್ಟು ಇರುವುದು ಶೇ 7.90ಗೆ ಇಳಿಕೆಯಾಗಲಿದೆ. ಬ್ಯಾಂಕ್ ಆಫ್ ಬರೋಡ ಈ ಸಂಗತಿಯನ್ನು ಷೇರುಪೇಟೆಗೆ ತಿಳಿಸಿದೆ. ಪರಿಷ್ಕೃತ ಬಡ್ಡಿ ದರವು ಡಿಸೆಂಬರ್ 6ರಿಂದಲೇ ಅನ್ವಯವಾಗಲಿದೆ ಎಂದೂ ಬ್ಯಾಂಕ್ ತಿಳಿಸಿದೆ.

ಮುಂಬೈ ಧಾರಣೆ (ಶೇಂಗಾ)	
05-12-2025	
ಜಾವಾ 70/80(ಹೊಸ)	10500-10600
ಜಾವಾ 80/90(ಹೊಸ)	9800-9900
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8800-8900
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1510 (1500)
ಒಂದು ವಾರದ ಡೆಲಿವರಿ	1505 (1495)
ಪಾಮ್ ವಾರದ ಡೆಲಿವರಿ	1248 (1243)
ಸೂರ್ಯಕಾಂತಿ ಎಣ್ಣೆ ಕಚ್ಚಾ	1425 (1425)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,28,250
ಬೆಳ್ಳಿ ಕೆ.ಜಿಗೆ	1,78,250 (1,76,600)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1500 (1490)
ಸೋಯಾ (ರಿಫೈನ್ಡ್)	₹1280 (1280)
ಪಾಮೋಲಿನ್	₹1250 (1245)

'ಯುಪಿಐ: 8 ದೇಶಗಳೊಂದಿಗೆ ಮಾತುಕತೆ'

ನವದೆಹಲಿ (ಪಿಟಿಐ): ಯುಪಿಐ ಪಾವತಿ ವ್ಯವಸ್ಥೆಯನ್ನು ವಿವಿಧೆಡೆ ಜಾರಿಗೆ ತರಲು ಕೇಂದ್ರ ಸರ್ಕಾರವು ಪೂರ್ವ ಏಷ್ಯಾದ ಕೆಲವು ದೇಶಗಳು ಸೇರಿದಂತೆ ಒಟ್ಟು ಎಂಟು ದೇಶಗಳ ಜೊತೆ ಮಾತುಕತೆ ನಡೆಸುತ್ತಿದೆ ಎಂದು ಕೇಂದ್ರ ಹಣಕಾಸು ಸೇವೆಗಳ ಕಾರ್ಯದರ್ಶಿ ಎಂ. ನಾಗರಾಜು ತಿಳಿಸಿದ್ದಾರೆ.

ಬೇರೆ ಕೆಲವು ದೇಶಗಳ ಜೊತೆ ವ್ಯಾಪಾರ ಒಪ್ಪಂದ ಕುರಿತ ಮಾತುಕತೆ ನಡೆಸುವಾಗ ಕೇಂದ್ರ ಸರ್ಕಾರವು ಈಗ ಯುಪಿಐ ಬಗ್ಗೆಯೂ ಪ್ರಸ್ತಾಪ ಮಾಡುತ್ತಿದೆ ಎಂದು ನಾಗರಾಜು ಅವರು ಹೇಳಿದ್ದಾರೆ.


ಕೆಐಎಡಿಬಿ ನೂತನ ಕಟ್ಟಡ ಉದ್ಘಾಟನೆ

ಮುಖ್ಯಮಂತ್ರಿ ಪರಿಹಾರ ನಿಧಿಗೆ ₹2 ಕೋಟಿ ಲಾಭಾಂಶ ನೀಡಿದ ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಾಂಧಿನಗರದಲ್ಲಿ ನಿರ್ಮಿಸಲಾಗಿರುವ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ (ಕೆಐಎಡಿಬಿ) ಹೊಸ ಕಟ್ಟಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಉದ್ಘಾಟಿಸಿದರು.

ಗಾಂಧಿನಗರದ ಆಚಾರ್ಯ ತುಳಸಿ ಮಾರ್ಗದಲ್ಲಿ ₹32 ಕೋಟಿ ವೆಚ್ಚದಲ್ಲಿ ಈ ಬಹುಮಹಡಿ ಕಟ್ಟಡವನ್ನು ನಿರ್ಮಿಸಲಾಗಿದೆ. ಒಟ್ಟು 2,618 ಚದರ ಮೀಟರ್ ಅಳತೆಯ ನಿವೇಶನದಲ್ಲಿ ತಲೆಯೆತ್ತಿರುವ ಈ ಕಟ್ಟಡವು ಎರಡು ನೆಲ ಅಂತಸ್ತುಗಳು, ಐದು ಮಹಡಿಗಳು ಹಾಗೂ ತಾರಸಿ ಮಹಡಿಯನ್ನು ಒಳಗೊಂಡಿದೆ. ಕೆಳ ಬೇಸ್‌ಮೆಂಟ್‌ನಲ್ಲಿ 58 ಕಾರುಗಳು ಹಾಗೂ ಮೇಲಿನ ಬೇಸ್‌ಮೆಂಟ್‌ನಲ್ಲಿ 38 ಕಾರುಗಳ ನಿಲುಗಡೆಗೆ ಜಾಗ ಕಲ್ಪಿಸಲಾಗಿದೆ.



ಮುಖ್ಯಮಂತ್ರಿ ಅವರ ಪರಿಹಾರ ನಿಧಿಗೆ ಕೆಐಎಡಿಬಿಯ ₹2 ಕೋಟಿ ಲಾಭಾಂಶದ ಚೆಕ್ ಅನ್ನು ಸಿದ್ದರಾಮಯ್ಯ ಅವರಿಗೆ ಎಂ.ಬಿ.ಪಾಟೀಲ ಹಸ್ತಾಂತರಿಸಿದರು

ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರು ಕೆಐಎಡಿಬಿಯ ₹2 ಕೋಟಿ ಲಾಭಾಂಶವನ್ನು ಮುಖ್ಯಮಂತ್ರಿ ಅವರ ಪರಿಹಾರ ನಿಧಿಗೆ ಹಸ್ತಾಂತರಿಸಿದರು.

ಹಿಂದೆ ಆರ್.ವಿ. ದೇಶಪಾಂಡೆ ಕೈಗಾರಿಕಾ ಸಚಿವರಾಗಿದ್ದಾಗ ಈ ಕಟ್ಟಡ ಕಟ್ಟಲು ತೀರ್ಮಾನ ತೆಗೆದುಕೊಂಡಿದ್ದರು. ಈ ಸಂದರ್ಭದಲ್ಲಿ ಅವರನ್ನು ಸನ್ಮಾನಿಸಲಾಯಿತು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವ ಕುಮಾರ್, ಕೆಐಎಡಿಬಿ ಸಿಇಒ ಮಹೇಶ ಉಪಸ್ಥಿತರಿದ್ದರು.

ಆವಲಹಳ್ಳಿಗೆ 2ನೇ ಬಾರಿ ಗಾಂಧಿ ಗ್ರಾಮ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬೆಂಗಳೂರು ಪೂರ್ವ ತಾಲ್ಲೂಕು ವ್ಯಾಪ್ತಿಯ ಆವಲಹಳ್ಳಿ ಗ್ರಾಮ ಪಂಚಾಯಿತಿ ಎರಡನೇ ಬಾರಿಗೆ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಭಾಜನವಾಗಿದೆ.

ವಿವಿಧ ಇಲಾಖೆಗಳಲ್ಲಿನ ಪ್ರಗತಿಯನ್ನು ಪರಿಗಣಿಸಿ ಗ್ರಾಮ ಪಂಚಾಯಿತಿಯನ್ನು 2023-24ನೇ ಸಾಲಿಗೆ ಆಯ್ಕೆ ಮಾಡಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ₹ 5 ಲಕ್ಷ ಹಾಗೂ ಪ್ರಮಾಣಪತ್ರ ನೀಡಿ ಗೌರವಿಸಲಾಗಿದೆ. 2021-22ರಲ್ಲಿಯೂ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ್ದಕ್ಕೆ ಈ ಪ್ರಶಸ್ತಿಯನ್ನು ಆವಲಹಳ್ಳಿ ಗ್ರಾಮ ಪಂಚಾಯಿತಿ ಮುಡಿಗೇರಿಸಿಕೊಂಡಿತ್ತು.

'ಕುಡಿಯುವ ನೀರಿನ ಸಮರ್ಪಕ ವ್ಯವಸ್ಥೆ, ಕೆರೆ ಕಟ್ಟೆಗಳ ದಡದಲ್ಲಿ ಗಿಡ ನೆಡುವ ಕಾರ್ಯಕ್ರಮ, ಸ್ವಚ್ಛತೆ, ರಸ್ತೆ ನಿರ್ಮಾಣ, ಸರ್ಕಾರಿ ಕಟ್ಟಡಗಳನ್ನು ಉತ್ತಮ ರೀತಿಯಲ್ಲಿ ಇರಿಸಿಕೊಳ್ಳುವ ಹಲವಾರು ಚಟುವಟಿಕೆ ರೂಪಿಸಿಕೊಂಡಿರುವುದರಿಂದ ಪಂಚಾಯಿತಿಗೆ ಪ್ರಶಸ್ತಿ ಲಭಿಸಿದೆ' ಎಂದು ಅಧ್ಯಕ್ಷೆ ಶಿಲ್ಪಾ ನಾಗರಾಜ್ ಹೇಳಿದರು.

> **ನರೇಗಾ ಅನುದಾನ ಬಳಕೆ, ಸರ್ಕಾರಿ ದಾಖಲೆಗಳ ನಿರ್ವಹಣೆ, ಗ್ರಾಮಸಭೆ, ಎಸ್ಸಿ, ಎಸ್ಟಿ ಹಾಗೂ ವಿಶೇಷ ಚೇತನರಿಗೆ ಅಗತ್ಯ ಸೌಕರ್ಯ ಒದಗಿಸಿ ಜನ ಜೀವನ ಮಟ್ಟ ಸುಧಾರಣೆಗೆ ಪಂಚಾಯಿತಿ ಶ್ರಮಿಸಿದೆ**
> **ವಸಂತ್ ಕುಮಾರ್** ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರಿಂದ ಶಿಲ್ಪಾ ನಾಗರಾಜ್ ಹಾಗೂ ನವಿತಾ ಅವರು ಗಾಂಧಿ ಗ್ರಾಮ ಪುರಸ್ಕಾರ ಸ್ವೀಕರಿಸಿದರು

ಸುದ್ದಿ 2 ನಿಮಿಷ


ಬಾಕಿ ದೂರುಗಳ ಇತ್ಯರ್ಥಕ್ಕೆ ರಿಸರ್ವ್ ಬ್ಯಾಂಕ್ ಅಭಿಯಾನ

ಮುಂಬೈ (ಪಿಟಿಐ): ಒಂಬುಡ್ಸ್‌ಮನ್ ವ್ಯವಸ್ಥೆಯಲ್ಲಿ ಒಂದು ತಿಂಗಳಿಗಿಂತ ಹೆಚ್ಚಿನ ಅವಧಿಯಿಂದ ಬಾಕಿ ಉಳಿದಿರುವ ದೂರುಗಳನ್ನು ಇತ್ಯರ್ಥಪಡಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಅಭಿಯಾನವೊಂದನ್ನು ಆರಂಭಿಸಲಿದೆ.

ಈ ಅಭಿಯಾನವು ಮುಂದಿನ ತಿಂಗಳು ಆರಂಭವಾಗಲಿದ್ದು, ಎರಡು ತಿಂಗಳ ಅವಧಿಗೆ ನಡೆಯಲಿದೆ. ಆರ್‌ಬಿಐನ ಒಂಬುಡ್ಸ್‌ಮನ್ ವ್ಯವಸ್ಥೆಯು ಗ್ರಾಹಕರ ದೂರುಗಳನ್ನು ಉಚಿತವಾಗಿ ಪರಿಹರಿಸಿಕೊಡುವ ಕೆಲಸ ಮಾಡುತ್ತದೆ.

'ನಾವು ಗ್ರಾಹಕ ಸೇವೆಗಳನ್ನು ಸುಧಾರಿಸುವ ಕಡೆ ಗಮನ ಹರಿಸುತ್ತಿದ್ದೇವೆ. ಈ ವಿಚಾರವಾಗಿ ಹಲವು ಕ್ರಮಗಳನ್ನು ಕೈಗೊಂಡಿದ್ದೇವೆ' ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

'ಶೇಕಡ 99.8ರಷ್ಟಕ್ಕಿಂತ ಹೆಚ್ಚಿನ ಪ್ರಮಾಣದ ದೂರುಗಳನ್ನು ನಿಗದಿತ ಅವಧಿಯಲ್ಲಿ ಇತ್ಯರ್ಥಪಡಿಸಲಾಗುತ್ತಿದೆ' ಎಂದು ಮಲ್ಹೋತ್ರಾ ತಿಳಿಸಿದ್ದಾರೆ.



ಆದರೆ ಈಚಿನ ದಿನಗಳಲ್ಲಿ ದೂರುಗಳು ದಾಖಲಾಗುವುದು ಹೆಚ್ಚಾಗಿರುವ ಕಾರಣದಿಂದಾಗಿ ಆರ್‌ಬಿಐ ಒಂಬುಡ್ಸ್‌ಮನ್ ವ್ಯವಸ್ಥೆಯಲ್ಲಿ ದೂರುಗಳು ಬಾಕಿಯಾಗುವುದು ಹೆಚ್ಚಾಗಿದೆ ಎಂದೂ ತಿಳಿಸಿದ್ದಾರೆ.

ಸೋಮಾಲಿಯಾ ವಲಸಿಗರು ಕಸವಿದ್ದಂತೆ: ಟ್ರಂಪ್

ನ್ಯೂಯಾರ್ಕ್ (ಎಪಿ): 'ಅಮೆರಿಕದಲ್ಲಿರುವ ಸೋಮಾಲಿಯಾ ದೇಶದ ವಲಸಿಗರು ಕಸ ಇದ್ದಂತೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಈ ಹೇಳಿಕೆಯನ್ನು ಅವರು ಏಳು ಸೆಕೆಂಡ್‌ನಲ್ಲಿ ಮೂರು ಬಾರಿ ಪುನರುಚ್ಚರಿಸಿದ್ದಾರೆ. ಸಂಪುಟ ಸಭೆಯಲ್ಲಿ ಮಾತನಾಡಿದ ಅವರು, 'ನಮ್ಮ ದೇಶಕ್ಕೆ ಅವರು ಬೇಕಿಲ್ಲ' ಎಂದು ಅಕ್ರಮ ವಲಸಿಗರ ವಿರುದ್ಧ ವಾಗ್ದಾಳಿ ನಡೆಸಿದರು.

'ಅವರು ಎಲ್ಲಿಂದ ಬಂದಿದ್ದರೋ ಅಲ್ಲಿಗೇ ಹೋಗಲಿ' ಎಂದು ಹೇಳಿದರು. ಟ್ರಂಪ್ ಅವರ ಮಾತಿಗೆ ಸಂಪುಟ ಸದಸ್ಯರು ಕರತಾಡನದ ಮೂಲಕ ಪ್ರಶಂಸೆ ವ್ಯಕ್ತಪಡಿಸಿದರು.

ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಮುಷ್ಠಿಯನ್ನು ಬಿಗಿಹಿಡಿದು ಸಂತಸದ ಸನ್ನೆ ಮಾಡಿದರು. ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್‌ಸೆಥ್ ಅವರು 'ಸರಿಯಾಗಿ ಹೇಳಿದಿರಿ' ಎಂದರು.

ಟ್ರಂಪ್ ಅವರು ವಲಸಿಗರ ವಿರುದ್ಧ ಮಾತಿನ ಪ್ರಹಾರ ನಡೆಸುತ್ತಿರುವುದು ಇದೇ ಮೊದಲೇನಲ್ಲ. ದಶಕದ ಹಿಂದೆ ಅಧ್ಯಕ್ಷೀಯ ಚುನಾವಣೆಯ ಪ್ರಚಾರ ಸಂದರ್ಭದಲ್ಲಿಯೂ 'ಅತ್ಯಾಚಾರಿಗಳನ್ನು ಅಮೆರಿಕದ ಒಳಗೆ ಮೆಕ್ಸಿಕೊ ಕಳುಹಿಸುತ್ತಿದೆ' ಎಂದು ಕಟುವಾಗಿ ಟೀಕಿಸಿದ್ದರು.

ತಂತ್ರಜ್ಞಾನ ಪಾರ್ಕ್: ₹1,000 ಕೋಟಿ ಹೂಡಿಕೆಗೆ ತೈವಾನ್ ಒಡಂಬಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೈಗಾರಿಕಾ ತಂತ್ರಜ್ಞಾನ ನಾವೀನ್ಯತಾ ಪಾರ್ಕ್‌ಗೆ ತೈವಾನಿನ ಅಲಿಜನ್ಸ್ ಇಂಟರ್‌ನ್ಯಾಷನಲ್ ಗ್ರೂಪ್ ₹1,000 ಕೋಟಿ ಹೂಡಿಕೆ ಮಾಡಲಿದೆ.

ಈ ಕುರಿತು ಮಾಹಿತಿ ತಂತ್ರಜ್ಞಾನ–ಜೈವಿಕ ತಂತ್ರಜ್ಞಾನ ಇಲಾಖೆ (ಐಟಿ–ಬಿಟಿ) ನಿರ್ದೇಶಕ ರಾಹುಲ್ ಎಸ್. ಸಂಕನೂರ ಹಾಗೂ ಅಲಿಜನ್ಸ್ ಗ್ರೂಪ್‌ನ ಉಪಾಧ್ಯಕ್ಷ ಲಾರೆನ್ಸ್ ಚೆನ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಸಮ್ಮುಖದಲ್ಲಿ ಒಪ್ಪಂದಕ್ಕೆ ಶುಕ್ರವಾರ ಸಹಿ ಹಾಕಿದರು.

ಬಳಿಕ ಮಾತನಾಡಿದ ಸಿದ್ದರಾಮಯ್ಯ, 'ತೈವಾನ್ ಕಂಪನಿಯು ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್ ಕಂಪನಿಗಳಿಗೆ ಮೀಸಲಾದ ಕೇಂದ್ರವಾಗಿ ಕಾರ್ಯನಿರ್ವಹಿಸಲಿದೆ. ಅತ್ಯಾಧುನಿಕ ತಯಾರಿಕೆ, ಸಂಶೋಧನೆ, ಅಭಿವೃದ್ಧಿ ಮತ್ತು ನಾವೀನ್ಯಕ್ಕೆ ಉತ್ತೇಜನ ನೀಡಲಿದೆ. ಎಲೆಕ್ಟ್ರಾನಿಕ್ಸ್ ಸಿಸ್ಟಂ ಡಿಸೈನ್ ಮತ್ತು ತಯಾರಿಕಾ (ಇಎಸ್‌ಡಿಎಂ) ವಲಯದಲ್ಲಿ ಭಾರತದ ಪ್ರಮುಖ ತಾಣವಾಗಿ ಕರ್ನಾಟಕದ ಸ್ಥಾನ ಬಲಗೊಳ್ಳಲಿದೆ. ರಾಜ್ಯದಲ್ಲಿ ಸೆಮಿಕಂಡಕ್ಟರ್ ವಲಯದ ಬೆಳವಣಿಗೆಗೂ ವೇಗ ದೊರೆಯಲಿದೆ. 800 ನೇರ ಉದ್ಯೋಗಗಳು ಸೃಷ್ಟಿಯಾಗಲಿವೆ' ಎಂದರು.

ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, 'ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್ ವಲಯಗಳಲ್ಲಿ ತೈವಾನ್ ಕಂಪನಿಗಳಿಗೆ ನೆಲೆಯಾಗಲು ವಿಶ್ವ ದರ್ಜೆಯ ಕೈಗಾರಿಕಾ ಪಾರ್ಕ್ ಸ್ಥಾಪಿಸಲಾಗುವುದು, ಬಿಡಿಭಾಗಗಳು, ಪಿಸಿಬಿ ಮತ್ತು ಚಿಪ್ ಡಿಸೈನ್‌ಗೆ ಸದೃಢ ಪೂರೈಕೆ ಸರಪಳಿ ವ್ಯವಸ್ಥೆಯ ಅಭಿವೃದ್ಧಿಪಡಿಸಲಾಗುವುದು. ಶೈಕ್ಷಣಿಕ ಸಂಸ್ಥೆಗಳ ಸಹಯೋಗದಲ್ಲಿ ಗರಿಷ್ಠ ಮೌಲ್ಯದ ಉದ್ಯೋಗಗಳ ಸೃಷ್ಟಿ ಮತ್ತು ಕೌಶಲ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ವೇಗ ಸಿಗಲಿದೆ' ಎಂದು ಹೇಳಿದರು.

'ಸಂಸತ್‌ಗೆ ಕಬ್ಬು, ಮೆಕ್ಕೆಜೋಳ ಸಮಸ್ಯೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕಬ್ಬು ಮತ್ತು ಮೆಕ್ಕೆಜೋಳ ಬೆಳೆಗಾರರ ಸಮಸ್ಯೆಗಳನ್ನು ಸಂಸತ್ ಅಧಿವೇಶನದಲ್ಲಿ ಪ್ರಸ್ತಾಪಿಸಿ, ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಬೇಕು ಎಂದು ಕೋರಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಅವರು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮನವಿ ಮಾಡಿದರು.

ಬೆಂಗಳೂರಿನಲ್ಲಿರುವ ನಿವಾಸದಲ್ಲಿ ಖರ್ಗೆ ಅವರನ್ನು ಭೇಟಿ ನೀಡಿದ ಪಾಟೀಲ, ಕಬ್ಬು, ಮೆಕ್ಕೆಜೋಳ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿದರು.

'ಉತ್ತರ ಕರ್ನಾಟಕದಲ್ಲಿ ಕಬ್ಬು ಬೆಳೆಗಾರರು ಪ್ರತಿ ಟನ್‌ಗೆ ₹3,500 ನೀಡಬೇಕು ಎಂದು ಆಗ್ರಹಿಸಿ ಧರಣಿ ಹಾಗೂ ರಸ್ತೆ ತಡೆ ಚಳವಳಿ ಮಾಡಿದ್ದರು. ಸಕ್ಕರೆ ಕಾರ್ಖಾನೆಗಳ ಮಾಲೀಕರು, ರೈತ ಮುಖಂಡರ ಸಭೆ ನಡೆಸಿದ ಸರ್ಕಾರ, ಪ್ರತಿ ಟನ್‌ಗೆ ₹3,250 ನೀಡಲು ಕಾರ್ಖಾನೆ ಮಾಲೀಕರನ್ನು ಒಪ್ಪಿಸಿದೆ. ಸರ್ಕಾರ ಪ್ರತಿ ಟನ್‌ಗೆ ₹50 ಪ್ರೋತ್ಸಾಹಧನ ನೀಡಲು ನಿರ್ಧರಿಸಿದೆ. ಇದರಿಂದ ಪ್ರತಿ ಟನ್‌ಗೆ ₹3,300 ಸಿಗಲಿದೆ' ಎಂದು ವಿವರ ನೀಡಿದರು.

'ಕೇಂದ್ರ ಸರ್ಕಾರದ ನೀತಿಯ ಪರಿಣಾಮ ಸಕ್ಕರೆ ಉದ್ಯಮ ಸಂಕಷ್ಟದಲ್ಲಿದೆ. ಕಬ್ಬು ಬೆಳೆಗಾರರಿಗೂ ಸಮಸ್ಯೆಯಾಗುತ್ತಿದೆ. ಕಬ್ಬಿಗೆ ನಿಗದಿ ಮಾಡುವ ನ್ಯಾಯಯುತ ಮತ್ತು ಲಾಭದಾಯಕ ದರ (ಎಫ್‌ಆರ್‌ಪಿ) ಹೆಚ್ಚಳ ಮಾಡಿದಂತೆ ಸಕ್ಕರೆಯ ಕನಿಷ್ಠ ಬೆಂಬಲ ಬೆಲೆಯನ್ನೂ ಹೆಚ್ಚಳ ಮಾಡಬೇಕು. ಆದರೆ, ಸಕ್ಕರೆ ದರ ಹೆಚ್ಚಳ ಮಾಡುತ್ತಿಲ್ಲ. ಸಕ್ಕರೆ ರಫ್ತಿಗೆ ಅನುಮತಿ ನೀಡುತ್ತಿಲ್ಲ. ರಾಜ್ಯಕ್ಕೆ ನಿಗದಿಯಾಗಿರುವ ಎಥೆನಾಲ್ ಉತ್ಪಾದನಾ ಪ್ರಮಾಣವನ್ನು ಕಡಿತ ಮಾಡಿದೆ. ಈ ಎಲ್ಲ ಕಾರಣಗಳಿಂದ ಸಕ್ಕರೆ ಕಾರ್ಖಾನೆ ಮಾಲೀಕರು ಕಬ್ಬಿಗೆ ಹೆಚ್ಚಿನ ದರ ನೀಡಲು ಸಾಧ್ಯವಾಗುತ್ತಿಲ್ಲ. ಹಾಗಾಗಿ, ಈ ಸಮಸ್ಯೆ ಕುರಿತು ವಿಸ್ತೃತವಾಗಿ ಚರ್ಚೆ ಮಾಡಬೇಕು' ಎಂದು ಕೋರಿದರು.

'ಕೇಂದ್ರ ಸರ್ಕಾರ ಪ್ರತಿ ಕ್ವಿಂಟಲ್ ಮೆಕ್ಕೆಜೋಳಕ್ಕೆ ₹2,400 ನಿಗದಿಪಡಿಸಿದೆ. ಮಾರುಕಟ್ಟೆಯಲ್ಲಿ ₹1,600ರಿಂದ ₹1800 ಇದೆ. ಬೆಲೆ ವ್ಯತ್ಯಾಸ ಯೋಜನೆ ಅಡಿಯಲ್ಲಿ ಖರೀದಿ ಮಾಡಲು ಅನುಮತಿ ನೀಡಬೇಕು ಎಂದು ರಾಜ್ಯ ಸರ್ಕಾರ ಕೇಂದ್ರಕ್ಕೆ ಪತ್ರ ಬರೆದರೂ ಸ್ಪಂದಿಸಿಲ್ಲ. ಕೇಂದ್ರದ ಮೇಲೆ ಒತ್ತಡ ತರಬೇಕಿದ್ದ ರಾಜ್ಯದ ಬಿಜೆಪಿ ಮುಖಂಡರು ರೈತರ ಹೋರಾಟವನ್ನು ರಾಜಕಾರಣಕ್ಕೆ ಬಳಸಿಕೊಳ್ಳುತ್ತಿದ್ದಾರೆ' ಎಂದು ದೂರಿದರು.

ಕಬ್ಬು ಬೆಳೆಗಾರರ ಸಮಸ್ಯೆ ರಾಜ್ಯಸಭೆಯಲ್ಲಿ ಪ್ರಸ್ತಾಪ

ನವದೆಹಲಿ: ಸಕ್ಕರೆಯ ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ಹೆಚ್ಚಿಸಬೇಕು. ಕಬ್ಬಿನ ರಿಕವರಿ ದರ ಇಳಿಕೆ ಮಾಡಬೇಕು. ಕಬ್ಬು ಕಟಾವು ಮತ್ತು ಸಾರಿಗೆ ಹೊರತುಪಡಿಸಿ ಎಫ್‌ಆರ್‌ಪಿ ದರ ನಿಗದಿ ಮಾಡಬೇಕು ಎಂದು ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಒತ್ತಾಯಿಸಿದರು.

ಕರ್ನಾಟಕದ ಕಬ್ಬು ಬೆಳೆಗಾರರ ಸಮಸ್ಯೆ ಬಗ್ಗೆ ರಾಜ್ಯಸಭೆಯಲ್ಲಿ ಶುಕ್ರವಾರ ಶೂನ್ಯ ವೇಳೆಯಲ್ಲಿ ಗಮನ ಸೆಳೆದ ಅವರು, '2019 ರಿಂದ ಸಕ್ಕರೆಯ ಎಂಎಸ್‌ಪಿ ಪ್ರತಿ ಕೆ.ಜಿಗೆ ಕೇವಲ ₹31 ಇದೆ. ಅದನ್ನು ಹೆಚ್ಚಿಸಿಲ್ಲ. ಈ ಕಾರಣದಿಂದ ಸಕ್ಕರೆ ಕಾರ್ಖಾನೆಗಳು ರೈತರ ಕಬ್ಬಿಗೆ ಹೆಚ್ಚಿನ ದರ ನೀಡಲು ಹಿಂದೇಟು ಹಾಕುತ್ತಿವೆ. ಆದರೆ, ಈಗಾಗಲೇ ಮುಕ್ತ ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿಗೆ ಸುಮಾರು 40ರಂತೆ ಸಕ್ಕರೆ ಮಾರಾಟವಾಗುವ ಕಾರಣ ಎಂಎಸ್‌ಪಿ ಹೆಚ್ಚಿಸುವುದು ಅನಿವಾರ್ಯ. ಇದರಿಂದ ಕಬ್ಬು ಬೆಳೆಗಾರರು ಮತ್ತು ಸಕ್ಕರೆ ಉದ್ಯಮಕ್ಕೆ ಹೆಚ್ಚು ಸಹಾಯವಾಗಲಿದೆ' ಎಂದರು.

'ಕರ್ನಾಟಕದಲ್ಲಿ 270 ಕೋಟಿ ಲೀಟರ್ ಎಥೆನಾಲ್ ಉತ್ಪಾದನೆ ಆಗುತ್ತಿದೆ. ರಾಜ್ಯದಲ್ಲಿ ಎಥೆನಾಲ್ ಮಾರಾಟಕ್ಕೆ ಹೆಚ್ಚಿನ ಅವಕಾಶ ನೀಡಬೇಕು ಇದರಿಂದಾಗಿ ಕೋಟ್ಯಂತರ ಜನರಿಗೆ ಲಾಭವಾಗಲಿದೆ. ಹೀಗಾಗಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಕಬ್ಬು ಬೆಳೆಗಾರರ ಸಹಾಯಕ್ಕೆ ಬರಬೇಕು' ಎಂದು ಅವರು ಆಗ್ರಹಿಸಿದರು.

'ದೇಶದ ಸಕ್ಕರೆ ಉತ್ಪಾದನೆಯಲ್ಲಿ ಕರ್ನಾಟಕ ರಾಜ್ಯವು ಮೂರನೇ ಸ್ಥಾನದಲ್ಲಿದೆ. ರಾಜ್ಯದಲ್ಲಿ 45 ಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗುತ್ತಿದೆ. ಎಫ್‌ಆರ್‌ಪಿ ನಿಗದಿ ಸಂದರ್ಭದಲ್ಲಿ ರಾಜ್ಯದ ಕಬ್ಬಿನ ರಿಕವರಿ ಪ್ರಮಾಣವನ್ನು ಶೇ 9.5ಕ್ಕೆ ಇಳಿಸಬೇಕು. ಇದರಿಂದ ರೈತರಿಗೆ ಅನುಕೂಲವಾಗಲಿದೆ ಎಂದರು.


ಚಿತ್ರದ ಪೋಸ್ಟರ್

ಡಿ.15ಕ್ಕೆ ‘45’ ಟ್ರೇಲರ್

ಅರ್ಜುನ್ ಜನ್ಯ ನಿರ್ದೇಶಿಸಿ, ಶಿವರಾಜಕುಮಾರ್, ಉಪೇಂದ್ರ ಹಾಗೂ ರಾಜ್ ಬಿ ಶೆಟ್ಟಿ ಪ್ರಮುಖಪಾತ್ರದಲ್ಲಿ ನಟಿಸಿರುವ ‘45’ ಚಿತ್ರ ಡಿ.25ಕ್ಕೆ ತೆರೆಗೆ ಬರುವುದು ಖಚಿತವಾಗಿದೆ. ಡಿ.15ರಂದು ಚಿತ್ರದ ಟ್ರೇಲರ್ ಬಿಡುಗಡೆಗೊಳ್ಳಲಿದ್ದು, ಈ ಸಮಾರಂಭವನ್ನು ವಿಶಿಷ್ಟವಾಗಿಸಲು ಚಿತ್ರತಂಡ ಮುಂದಾಗಿದೆ.


ಅರ್ಜುನ್ ಜನ್ಯ

ಸೂರಜ್ ಪ್ರೊಡಕ್ಷನ್ ಲಾಂಛನದಲ್ಲಿ ರಮೇಶ್ ರೆಡ್ಡಿ ನಿರ್ಮಿಸಿರುವ ಪ್ಯಾನ್ ಇಂಡಿಯಾ ಚಿತ್ರ ಹಲವು ಭಾಷೆಗಳಲ್ಲಿ ತೆರೆ ಕಾಣುತ್ತಿದೆ. ‘ನಮ್ಮ ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭ ಬೆಂಗಳೂರಿನಲ್ಲಿ ನಡೆಯಲಿದೆ. ಈ ಕಾರ್ಯಕ್ರಮವನ್ನು ಕರ್ನಾಟಕದ ಏಳು ಪ್ರಮುಖ ಜಿಲ್ಲೆಗಳ ಆಯ್ದ ಚಿತ್ರಮಂದಿಗಳಲ್ಲಿ ಕ್ಯೂಬ್ ಮೂಲಕ ನೇರ ಪ್ರಸಾರ ಮಾಡಲಾಗುವುದು. ಮೈಸೂರು, ಮಂಗಳೂರು, ತುಮಕೂರು, ದಾವಣಗೆರೆ, ಶಿವಮೊಗ್ಗ, ಹೊಸಪೇಟೆ, ಹುಬ್ಬಳ್ಳಿಯ ಚಿತ್ರಮಂದಿರಗಳಲ್ಲಿ ಈ ವ್ಯವಸ್ಥೆ ಮಾಡಲಾಗಿದೆ. ಅಭಿಮಾನಿಗಳಿಗೆ ಆಯಾ ಜಿಲ್ಲೆಗಳಲ್ಲಿ ಪಾಸ್ ವ್ಯವಸ್ಥೆ ಮಾಡಲಾಗಿದ್ದು, ಉಚಿತ ಪ್ರವೇಶವಿರುತ್ತದೆ. ಏಕಕಾಲಕ್ಕೆ ಏಳು ಜಿಲ್ಲೆಗಳಲ್ಲೂ ಟ್ರೇಲರ್ ಅನಾವರಣವಾಗಲಿದೆ’ ಎಂದು ಮಾಹಿತಿ ನೀಡಿದರು ಅರ್ಜುನ್ ಜನ್ಯ.

‘ಭಾರತದ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಚಿತ್ರವನ್ನು ನಿರ್ಮಿಸಿರುವ ಹೆಮ್ಮೆ ಇದೆ. ಅದನ್ನು ಜನರು ಮೆಚ್ಚಿಕೊಳ್ಳುತ್ತಾರೆ ಎಂಬ ಭರವಸೆಯೂ ಇದೆ. ವಿಭಿನ್ನ ಕಥಾಹಂದರ ಹೊಂದಿರುವ ಚಿತ್ರ ಅಂತಿಮವಾಗಿ ಬಿಡುಗಡೆಗೆ ಸಿದ್ಧವಾಗಿದೆ. ಗ್ರಾಫಿಕ್ಸ್ ಕೆಲಸಗಳಿಂದ ಚಿತ್ರ ಬಿಡುಗಡೆ ವಿಳಂಬವಾಯ್ತು’ ಎಂದರು ರಮೇಶ್ ರೆಡ್ಡಿ.

ಕೌಸ್ತುಭ ಮಣಿ ಚಿತ್ರದ ನಾಯಕಿ. ಅರ್ಜುನ್ ಜನ್ಯ ಅವರೇ ಸಂಗೀತ ನೀಡಿದ್ದು, ಸತ್ಯ ಹೆಗಡೆ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ ಚಿತ್ರಕ್ಕಿದೆ.

₹118 ಕೋಟಿ ಗಳಿಸಿದ ‘ತೇರೆ ಇಷ್ಕ್ ಮೇ’

ನಟ ಧನುಷ್ ಹಾಗೂ ಕೃತಿ ಸೆನನ್ ನಟನೆಯ ‘ತೇರೆ ಇಷ್ಕ್ ಮೇ’ ಸಿನಿಮಾ ಮೊದಲ ವಾರದಲ್ಲಿ ವಿಶ್ವದಾದ್ಯಂತ ₹118 ಕೋಟಿ ಗಳಿಸಿದೆ ಎಂದು ನಿರ್ಮಾಣ ಸಂಸ್ಥೆ ತಿಳಿಸಿದೆ.

ಆನಂದ್ ಎಲ್ ರೈ ನಿರ್ದೇಶನದ ಈ ರೊಮ್ಯಾನ್ಸ್ ಡ್ರಾಮಾ ಸಿನಿಮಾ ಕಳೆದ ನ.28ಕ್ಕೆ ರಿಲೀಸ್ ಆಗಿತ್ತು. 2013ರಲ್ಲಿ ತೆರೆಕಂಡ ಧನುಷ್ ನಟನೆಯ ‘ರಾಂಝನ’ ಸಿನಿಮಾವನ್ನೂ ಆನಂದ್ ನಿರ್ದೇಶಿಸಿದ್ದರು. ಇದೀಗ ತೆರೆಕಂಡಿರುವ ಸಿನಿಮಾ ‘ರಾಂಝನ’ ಸಿನಿಮಾದ ಸೀಕ್ವೆಲ್ ಆಗಿದೆ. ‘ಅತರಂಗೀ ರೆ’ ಸಿನಿಮಾದಲ್ಲೂ ಧನುಷ್‌ಗೆ ಆನಂದ್ ಆ್ಯಕ್ಷನ್ ಕಟ್ ಹೇಳಿದ್ದರು. ‘ತೇರೆ ಇಷ್ಕ್ ಮೇ’ ಸಿನಿಮಾವನ್ನು ಟಿ–ಸೀರೀಸ್ ಮತ್ತು ಕಲರ್ ಯೆಲ್ಲೋ ಪ್ರೊಡಕ್ಷನ್ಸ್ ಪ್ರಸ್ತುಪಡಿಸಿದೆ. ಎ.ಆರ್.ರಹಮಾನ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ಪ್ರಕಾಶ್ ರಾಜ್, ಟೊಟಾ ರಾಯ್ ಚೌಧರಿ, ಪರಮ್‌ವೀರ್ ಸಿಂಗ್ ಚೀಮಾ ಚಿತ್ರದ ತಾರಾಬಳಗದಲ್ಲಿದ್ದಾರೆ.


ಕೃತಿ ಸೆನನ್

‘ಫಸ್ಟ್ ಸ್ಯಾಲರಿ’ಗೆ ಶ್ರುತಿ ಸಾಥ್

ಶ್ರೀರಾಘವೇಂದ್ರ ಚಿತ್ರವಾಣಿ ಸಂಸ್ಥೆಯ ಸುಧೀಂದ್ರ ವೆಂಕಟೇಶ್ ನಿರ್ಮಾಣ ಮಾಡಿರುವ ‘ಫಸ್ಟ್ ಸ್ಯಾಲರಿ’ ಕಿರುಚಿತ್ರ ಇತ್ತೀಚೆಗೆ ಬಿಡುಗಡೆಯಾಯಿತು. ನಟಿ ಶ್ರುತಿ ಹಾಗೂ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಸೇರಿದಂತೆ ಗಣ್ಯರ ಸಮ್ಮುಖದಲ್ಲಿ ಚಿತ್ರದ ಪ್ರದರ್ಶನ ನಡೆಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಶ್ರುತಿ, ‘ನಾನು ಡಿ.ವಿ.ಸುಧೀಂದ್ರ ಅವರ ನಿರ್ಮಾಣದ ‘ನಗುನಗುತಾ ನಲಿ’ ಚಿತ್ರದಲ್ಲಿ ಅಭಿನಯಿಸಿದ್ದೆ. ಇಂದು ಅವರ ಕುಟುಂಬದ ಪವನ್ ವೆಂಕಟೇಶ್ ಕಿರುಚಿತ್ರ ನಿರ್ಮಾಣ ಮಾಡಿದ್ದಾನೆ. ತಾಯಿ-ಮಗನ ಭಾವನಾತ್ಮಕ ಸನ್ನಿವೇಶಗಳು ಮನಸ್ಸಿಗೆ ಬಹಳ ಹತ್ತಿರವಾಯಿತು, ಕಣ್ಣಂಚಲಿ ನೀರು ತರಿಸಿತು’ ಎನ್ನುತ್ತಾ ‘ನನ್ನ ಮೊದಲ ವೇತನ ಐನೂರು ರೂಪಾಯಿಯಿತ್ತು’ ಎಂದು ನೆನಪಿಸಿಕೊಂಡರು.

‘ನನ್ನ ಚಿಕ್ಕಪ್ಪ ಡಿ.ವಿ.ಸುಧೀಂದ್ರ ಅವರು ಪಾಲುದಾರಿಕೆಯಲ್ಲಿ ಆರು ಚಿತ್ರಗಳನ್ನು ನಿರ್ಮಾಣ ಮಾಡಿದ್ದರು. ಈಗ ನಾನು ಮೊದಲ ಬಾರಿಗೆ ಈ ಕಿರುಚಿತ್ರ ನಿರ್ಮಾಣ ಮಾಡಿದ್ದೇನೆ. ಮಗ ಪವನ್ ಹಾಗೂ ಸ್ನೇಹಿತರು ಒಂದೊಳ್ಳೆ ಕಿರುಚಿತ್ರ ಮಾಡುತ್ತಿದ್ದೇವೆ ಎಂದು ಹೇಳಿದಾಗ ನಾನು ಅವರ ಜೊತೆಗೆ ನಿಂತೆ’ ಎಂದರು ಸುಧೀಂದ್ರ ವೆಂಕಟೇಶ್.


‘ಫಸ್ಟ್ ಸ್ಯಾಲರಿ’ ತಂಡದೊಂದಿಗೆ ಶ್ರುತಿ ಹಾಗೂ ರಾಕ್‌ಲೈನ್ ವೆಂಕಟೇಶ್

‘ನನ್ನ ಗೆಳೆಯ ವಿಜಯ್ ಶಿವಕುಮಾರ್ ಅವರು ಬರೆದ ಕಥೆ ಇದಾಗಿದೆ. ಅವರೇ ಮುಖ್ಯಪಾತ್ರದಲ್ಲೂ ಅಭಿನಯಿಸಿದ್ದಾರೆ. ಹರಿಣಿ ಶ್ರೀಕಾಂತ್, ಯತಿರಾಜ್, ತ್ರಿಶೂಲ್, ಸ್ನೇಹಶ್ರೀ, ರಕ್ಷಿತ್ ಇದರಲ್ಲಿ ನಟಿಸಿದ್ದಾರೆ. ನಾನು ನಿರ್ದೇಶಕನಾಗುವ ಕನಸನ್ನು ನನ್ನ ತಂದೆ ಸುಧೀಂದ್ರ ವೆಂಕಟೇಶ್ ಅವರು ಈ ಕಿರುಚಿತ್ರವನ್ನು ನಿರ್ಮಾಣ ಮಾಡುವ ಮೂಲಕ ನನಸು ಮಾಡಿದ್ದಾರೆ’ ಎನ್ನುತ್ತಾರೆ ಪವನ್ ವೆಂಕಟೇಶ್.


ಜೀವನ್, ಮೌಲ್ಯ

ಡಿ.8ರಿಂದ ರಥಸಪ್ತಮಿ

ನಟ ಉಮೇಶ್ ಅವರು ನಟಿಸಿದ್ದ ಕೊನೆಯ ಧಾರಾವಾಹಿ ‘ರಥಸಪ್ತಮಿ’ ಡಿ.8ರಿಂದ ಉದಯ ಟಿ.ವಿ.ಯಲ್ಲಿ ಪ್ರಸಾರವಾಗಲಿದೆ.

ಡಿ.8ರಿಂದ ಪ್ರತಿ ಸೋಮವಾರದಿಂದ ಶನಿವಾರ ಸಂಜೆ 6 ಗಂಟೆಗೆ ಈ ಧಾರಾವಾಹಿ ಬರಲಿದ್ದು, ರಂಗಭೂಮಿ ಹಿನ್ನೆಲೆಯ ನಟ, ನಿರ್ದೇಶಕ ಪೂರ್ಣಚಂದ್ರ ತೇಜಸ್ವಿ ನಿರ್ದೇಶಿಸುತ್ತಿದ್ದಾರೆ. ನಾಯಕನಾಗಿ ಜೀವನ್, ನಾಯಕಿಯಾಗಿ ಮೌಲ್ಯಾ ಗೌಡ ಬಣ್ಣಹಚ್ಚಿದ್ದು, ಉಳಿದಂತೆ ನಾಗೇಶ್ ಮಯ್ಯ, ಸುನಿಲ್, ವಂದನ, ಭೂಮಿಕಾ, ಪುಷ್ಪಾ ಬೆಳವಾಡಿ, ಪ್ರಮೀಳಾ, ಸುಮೋಕ್ಷ, ಮಧುಸೂದನ್, ನೀನಾಸಂ ಪ್ರದೀಪ್, ಚಂದನ, ಅಥರ್ವ ಮುಂತಾದವರು ಅಭಿನಯಿಸಿದ್ದಾರೆ. ಕೃಷ್ಣ ಅವರ ಛಾಯಾಚಿತ್ರಗ್ರಹಣ, ವಿಶಾಲ್ ವಿನಾಯಕ್ ಸಂಕಲನ ಧಾರಾವಾಹಿಗಿದೆ. ಆರಂಭಿಕ ಕಂತುಗಳಲ್ಲಿ ನಟ ಉಮೇಶ್ ನಟಿಸಿದ್ದಾರೆ.

ನಿಸ್ವಾರ್ಥ ಹಾಗೂ ಉದಾರ ಮನೋಭಾವದ, ಮಧ್ಯಮ ವರ್ಗದ ಪದವಿ ಮುಗಿಸಿರುವ ಹುಡುಗಿ ಸಪ್ತಮಿ. ಈಕೆಗೆ ಶ್ರೀಮಂತ್ ಎನ್ನುವ ಒಬ್ಬ ಜಿಪುಣನ ಜೊತೆ ಮದುವೆ ನಿಶ್ಚಯವಾಗುತ್ತದೆ. ಇವರ ಬದುಕಿನ ಕಥೆಯೇ ‘ರಥಸಪ್ತಮಿ’. ಸ್ಟೋರಿ ಬ್ರೀವ್ ಸ್ಟುಡಿಯೋಸ್ ಬ್ಯಾನರ್ ಅಡಿಯಲ್ಲಿ ಹ್ಯಾರಿಸ್ ಇದನ್ನು ನಿರ್ಮಾಣ ಮಾಡಿದ್ದಾರೆ.

ಸೆಮಿಫೈನಲ್‌ಗೆ ಲಗ್ಗೆಯಿಟ್ಟ ಭಾರತ

ಎಫ್‌ಐಎಚ್ ಜೂನಿಯರ್ ಪುರುಷರ ಹಾಕಿ ವಿಶ್ವಕಪ್ • ಪೆನಾಲ್ಟಿ ಶೂಟೌಟ್‌ನಲ್ಲಿ ಜಯ

ಚೆನ್ನೈ (ಪಿಟಿಐ): ರೋಚಕ ಹೋರಾಟದ ನಂತರ ಪೆನಾಲ್ಟಿ ಶೂಟೌಟ್‌ನಲ್ಲಿ ಬೆಲ್ಜಿಯಂ ತಂಡವನ್ನು ಮಣಿಸಿದ ಭಾರತ ಹಾಕಿ ತಂಡವು ಶುಕ್ರವಾರ ಎಫ್‌ಐಎಚ್ ಜೂನಿಯರ್ ಪುರುಷರ ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಮೇಯರ್ ರಾಧಾಕೃಷ್ಣನ್ ಹಾಕಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯವು ನಿಗದಿತ ಅವಧಿಯಲ್ಲಿ 2–2 ಗೋಲು ಗಳಿಂದ ಸಮಬಲಗೊಂಡಿತ್ತು. ಪೆನಾಲ್ಟಿ ಶೂಟೌಟ್‌ನಲ್ಲಿ ಭಾರತದ ಆಟಗಾರರು 4–3ರಿಂದ ಜಯ ಗಳಿಸಿದರು.

ಭಾರತದ ಗೆಲುವಿನಲ್ಲಿ ಗೋಲ್ ಕೀಪರ್ ಪ್ರಿನ್ಸ್‌ದೀಪ್ ಸಿಂಗ್ ಮತ್ತು ಶಾರದಾನಂದ ತಿವಾರಿ ನಿರ್ಣಾಯಕ ಪಾತ್ರ ವಹಿಸಿದರು. ರೋಮಾಂಚಕಾರಿ ಶೂಟೌಟ್‌ನಲ್ಲಿ ಪ್ರಿನ್ಸ್‌ದೀಪ್ ಅವರು ದಿಗ್ಗಜ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅವರ ಪ್ರಭಾವಳಿಯಲ್ಲಿ ಬೆಲ್ಜಿಯಂ ತಂಡದ ಎರಡು ಪ್ರಯತ್ನಗಳಿಗೆ ತಡೆಗೋಡೆಯಾದರು.

ಪಿ.ಆರ್. ಶ್ರೀಜೇಶ್ ಗರಡಿಯಲ್ಲಿ ಪಳಗಿರುವ ಭಾರತ ತಂಡವು ಭಾನುವಾರ ಸೆಮಿಫೈನಲ್‌ನಲ್ಲಿ ಏಳು ಬಾರಿಯ ಚಾಂಪಿಯನ್ ಜರ್ಮನಿಯನ್ನು ಎದುರಿಸಲಿದೆ. 2016ರಲ್ಲಿ (ಲಖನೌ) ಭಾರತ ತಂಡವು ಬೆಲ್ಜಿಯಂ ತಂಡವನ್ನು ಮಣಿಸಿ, ಕೊನೆಯ ಬಾರಿ ಪ್ರಶಸ್ತಿ ಗೆದ್ದಿತ್ತು. 2001ರಲ್ಲಿ ಮೊದಲ ಬಾರಿ ಚಾಂಪಿಯನ್ ಆಗಿತ್ತು.

ನಿಗದಿತ ಅವಧಿಯ ಭಾರತದ ಪರ ನಾಯಕ ರೋಹಿತ್ (45ನೇ ನಿಮಿಷ) ಮತ್ತು ಶಾರದಾನಂದ ತಿವಾರಿ (48ನೇ) ಗೋಲು ಗಳಿಸಿದ್ದರು. ಬೆಲ್ಜಿಯಂ ತಂಡದ ಕಾರ್ನೆಜ್ ಮ್ಯಾಸಾಂಟ್ ಗ್ಯಾಸ್ಪರ್ಡ್ (13ನೇ) ಮತ್ತು ರೋಗ್ ನಾಥನ್ (59ನೇ) ಚೆಂಡನ್ನು ಗುರಿ ಸೇರಿಸಿದ್ದರು. ಪೆನಾಲ್ಟಿ ಶೂಟೌಟ್‌ನಲ್ಲಿ ತಿವಾರಿಯ ಮೂರು ಪ್ರಯತ್ನ ಮತ್ತು ಅಂಕಿತ್ ಪಾಲ್ ಅವರ ಒಂದು ಪ್ರಯತ್ನ ಯಶಸ್ವಿಯಾಯಿತು.

ಪಂದ್ಯದ ಆರಂಭದಲ್ಲೇ ಚುರುಕಿನ ಆಟ ಪ್ರದರ್ಶಿಸಿದ ಬೆಲ್ಜಿಯಂ ತಂಡವು ಮೊದಲ ನಿಮಿಷದಲ್ಲೇ ಗೋಲು ಗಳಿಸುವ ಪ್ರಯತ್ನ ನಡೆಸಿತು. ಆದರೆ, ಭಾರತದ ರಕ್ಷಣಾ ಗೋಡೆಯನ್ನು ಭೇದಿಸಲು ಸಾಧ್ಯವಾಗಲಿಲ್ಲ. ನಿಧಾನವಾಗಿ ಲಯ ಕಂಡುಕೊಂಡ ಭಾರತ ತಂಡವು 10ನೇ ನಿಮಿಷದಲ್ಲಿ ಮೊದಲ ಪೆನಾಲ್ಟಿ ಕಾರ್ನರ್ ಪಡೆಯಿತು. ಆದರೆ ಗೋಲು ಲಭಿಸಲಿಲ್ಲ.

ಸಮಬಲದ ಹೋರಾಟ ಸಾಗುತ್ತಿರುವಾಗಲೇ ಕಾರ್ನೆಜ್, ಫೀಲ್ಡ್ ಗೋಲು ದಾಖಲಿಸಿ ಬೆಲ್ಜಿಯಂ ತಂಡಕ್ಕೆ ಮುನ್ನಡೆ ಒದಗಿಸಿದರು. ಮೊದಲ ಕ್ವಾರ್ಟರ್‌ನಲ್ಲಿ ಒಂದು ಗೋಲಿನ ಹಿನ್ನಡೆಯೊಂದಿಗೆ ಭಾರತ ಒತ್ತಡಕ್ಕೆ ಒಳಗಾಯಿತು.

ಎರಡನೇ ಕ್ವಾರ್ಟರ್‌ನಲ್ಲಿ ಯಾವುದೇ ತಂಡಕ್ಕೆ ಗೋಲು ಲಭಿಸಲಿಲ್ಲ. ಸತತ ಎರಡು ಪೆನಾಲ್ಟಿ ಕಾರ್ನರ್ ಅವಕಾಶವನ್ನು ಕೈಚೆಲ್ಲಿದ ಭಾರತ ಮತ್ತಷ್ಟು ಆತಂಕಕ್ಕೆ ಒಳಗಾಯಿತು. ಆದರೆ, 45ನೇ ನಿಮಿಷದಲಿ ನಾಯಕ ರೋಹಿತ್ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಚೆಂಡನ್ನು ಗುರಿ ಸೇರಿಸಿದರು. ಹೀಗಾಗಿ, ಸ್ಕೋರ್ ಸಮಬಲಗೊಂಡಿತು.

ಕೊನೆಯ ಕ್ವಾರ್ಟರ್‌ನ ಆರಂಭದಲ್ಲಿ ಶಾರದಾನಂದ ಅವರು ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಆಕರ್ಷಕವಾಗಿ ಚೆಂಡನ್ನು ಗುರಿ ಮುಟ್ಟಿಸಿ ಭಾರತಕ್ಕೆ 2–1 ಮುನ್ನಡೆ ಒದಗಿಸಿದರು. ಆದರೆ, ಈ ಸಂಭ್ರಮ ಹೆಚ್ಚು ಹೊತ್ತು ಇರಲಿಲ್ಲ. ಪಂದ್ಯ ಮುಕ್ತಾಯಕ್ಕೆ ಒಂದು ನಿಮಿಷ ಇರುವಾಗ ಬೆಲ್ಜಿಯಂನ ರೋಗ್ ನಾಥನ್ ಫೀಲ್ಡ್ ಗೋಲು ಗಳಿಸಿದರು. ತಂಡಗಳ ಸ್ಕೋರ್ ಮತ್ತೆ ಸಮಬಲಗೊಂಡಿತು.


ಬೆಲ್ಜಿಯಂ ವಿರುದ್ಧ ಗೆದ್ದ ಭಾರತ ಜೂನಿಯರ್ ಹಾಕಿ ತಂಡದ ಆಟಗಾರರ ಸಂಭ್ರಮ ಪಿಟಿಐ ಚಿತ್ರ

ಮಹಿಳೆಯರ ವಿಶ್ವಕಪ್: ಭಾರತಕ್ಕೆ ಸುಲಭ ತುತ್ತಾದ ಐರ್ಲೆಂಡ್

ಸ್ಯಾಂಟಿಯಾಗೊ (ಚಿಲಿ), (ಪಿಟಿಐ): ಪೂರ್ಣಿಮಾ ಯಾದವ್ ಅವರ ಅಮೋಘ ಆಟದ ನೆರವಿನಿಂದ ಭಾರತ ಹಾಕಿ ತಂಡವು ಶುಕ್ರವಾರ ನಡೆದ ಎಫ್‌ಐಎಚ್ ಜೂನಿಯರ್ ಮಹಿಳಾ ವಿಶ್ವಕಪ್‌ನ ಸಿ ಗುಂಪಿನ ಪಂದ್ಯದಲ್ಲಿ 4–0 ಗೋಲುಗಳಿಂದ ಐರ್ಲೆಂಡ್ ವಿರುದ್ಧ ಸುಲಭ ಜಯ ಸಾಧಿಸಿತು.


ಪೂರ್ಣಿಮಾ

ಭಾರತದ ಪರ ಪೂರ್ಣಿಮಾ (42ನೇ ಮತ್ತು 58ನೇ ನಿಮಿಷ) ಎರಡು ಗೋಲು ಗಳಿಸಿದರೆ, ಕನಿಕಾ ಸಿವಾಚ್ (12ನೇ) ಮತ್ತು ಸಾಕ್ಷಿ ರಾಣಾ (57ನೇ) ತಲಾ ಒಂದು ಗೋಲು ಗಳಿಸಿದರು.

ನಮೀಬಿಯಾ ಎದುರು 13–0ಯಿಂದ ಗೆದ್ದು ಅಭಿಯಾನ ಆರಂಭಿಸಿದ್ದ ಭಾರತ ವನಿತೆಯರು, ತನ್ನ ಎರಡನೇ ಪಂದ್ಯದಲ್ಲಿ 1–3ರಿಂದ ಜರ್ಮನಿ ವಿರುದ್ಧ ಸೋತಿದ್ದರು. ಆರು ಅಂಕ ಗಳಿಸಿರುವ ಭಾರತ ತಂಡವು ಸಿ ಗುಂಪಿನಲ್ಲಿ ಎರಡನೇ ಸ್ಥಾನದಲ್ಲಿದೆ. ಆಡಿರುವ ಮೂರೂ ಪಂದ್ಯಗಳನ್ನು ಗೆದ್ದ ಜರ್ಮನಿ (9 ಅಂಕ) ಅಗ್ರಸ್ಥಾನದೊಂದಿಗೆ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದಿದೆ.

ಆರು ಗುಂಪುಗಳಲ್ಲಿ ಅಗ್ರಸ್ಥಾನ ಪಡೆದ ಆರು ತಂಡಗಳು ಮತ್ತು ಎರಡನೇ ಸ್ಥಾನ ಪಡೆದ ತಂಡಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಎರಡು ತಂಡಗಳು ಕ್ವಾರ್ಟರ್‌ಫೈನಲ್ ಪ್ರವೇಶಿಸಲಿವೆ. ಹೀಗಾಗಿ, ಭಾರತ ತಂಡದ ನೌಕೌಟ್ ಭವಿಷ್ಯ ಇತರ ಪಂದ್ಯಗಳ ಫಲಿತಾಂಶಗಳ ಮೇಲೆ ಅವಲಂಬಿತವಾಗಿದೆ.

ಇತರ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಅರ್ಜೇಂಟೀನಾ 1–0ರಿಂದ ನೆದರ್ಲೆಂಡ್ಸ್ ವಿರುದ್ಧ; ಸ್ಪೇನ್ 4–3ರಿಂದ ನ್ಯೂಜಿಲೆಂಡ್ ವಿರುದ್ಧ ಗೆದ್ದು ಸೆಮಿಫೈನಲ್ ಪ್ರವೇಶಿಸಿದವು. ಹಾಲಿ ಚಾಂಪಿಯನ್ ಜರ್ಮನಿ ತಂಡವು 3–1ರಿಂದ ಫ್ರಾನ್ಸ್ ತಂಡವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ ಮಣಿಸಿ ನಾಲ್ಕರ ಘಟ್ಟ ಪ್ರವೇಶಿಸಿತು. ನಿಗದಿತ ಅವಧಿಯ ಪಂದ್ಯವು 2–2ರಿಂದ ಸಮಬಲಗೊಂಡಿತ್ತು. ಭಾನುವಾರ ಮತ್ತೊಂದು ಸೆಮಿಫೈನಲ್‌ನಲ್ಲಿ ಅರ್ಜೇಂಟೀನಾ–ಸ್ಪೇನ್ ಸೆಣಸಲಿವೆ.

ಜೈನ್ ವಿಶ್ವವಿದ್ಯಾಲಯಕ್ಕೆ 50 ಪದಕ

ವಿ.ವಿ ಖೇಲೊ ಇಂಡಿಯಾ: ಶ್ರೀಹರಿ ನಟರಾಜ್‌ಗೆ 9 ಚಿನ್ನ

ಜೈಪುರ (ಪಿಟಿಐ): ಒಲಿಂಪಿಯನ್ ಈಜುತಾರೆ ಶ್ರೀಹರಿ ನಟರಾಜ್ ಅವರು ಇಲ್ಲಿ ಶುಕ್ರವಾರ ಮುಕ್ತಾಯಗೊಂಡ ಖೇಲೊ ಇಂಡಿಯಾ ವಿಶ್ವವಿದ್ಯಾಲಯ ಕ್ರೀಡಾಕೂಟ (ಕೆಐಯುಜಿ)ದಲ್ಲಿ ಅತ್ಯಂತ ಯಶಸ್ವಿ ಕ್ರೀಡಾಪಟು ಎನಿಸಿದರು. ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿದ ಅವರು ಒಂಬತ್ತು ಚಿನ್ನ ಮತ್ತು ಎರಡು ಬೆಳ್ಳಿ ಪದಕಗಳಿಗೆ ಕೊರಳೊಡ್ಡಿದರು.

ಕಳೆದ ಬಾರಿಯ ಚಾಂಪಿಯನ್ ಚಂಡೀಗಢ ವಿಶ್ವವಿದ್ಯಾಲಯವು ಸಮಗ್ರ ಪ್ರಶಸ್ತಿಯನ್ನು ತನ್ನಲ್ಲೇ ಉಳಿಸಿಕೊಂಡಿತು. 42 ಚಿನ್ನ, 14 ಬೆಳ್ಳಿ ಮತ್ತು 11 ಕಂಚು ಸೇರಿದಂತೆ ಒಟ್ಟು 67 ಪದಕಗಳೊಂದಿಗೆ ತನ್ನ ಅಭಿಯಾನವನ್ನು ಮುಗಿಸಿತು.

ಜೈನ್ ವಿಶ್ವವಿದ್ಯಾಲಯವು 30 ಚಿನ್ನ, ಒಂಬತ್ತು ಬೆಳ್ಳಿ ಮತ್ತು 11 ಕಂಚು ಸೇರಿದಂತೆ ಒಟ್ಟು 50 ಪದಕಗಳೊಂದಿಗೆ ನಾಲ್ಕನೇ ಸ್ಥಾನ ಗಳಿಸಿತು. ಈ ಪೈಕಿ 45 ಪದಕಗಳನ್ನು ಈಜು ಸ್ಪರ್ಧೆಯಲ್ಲಿ ಗೆದ್ದರೆ, ಅಥ್ಲೆಟಿಕ್ಸ್‌ನಲ್ಲಿ ಮೂರು, ಟೇಬಲ್ ಟೆನಿಸ್ ಮತ್ತು ಬಾಸ್ಕೆಟ್‌ಬಾಲ್‌ನಲ್ಲಿ ತಲಾ ಒಂದು ಪದಕಗಳನ್ನು ಜಯಿಸಿತು.

ಕೆಐಯುಜಿಯಲ್ಲಿ ಈ ಬಾರಿ ಪರಿಚಯಿಸಲಾದ ಕೆನೋಯಿಂಗ್ ಮತ್ತು ಕಯಾಕಿಂಗ್‌ನಲ್ಲಿ ನೀಡಲಾದ 30 ಚಿನ್ನದ ಪದಕಗಳಲ್ಲಿ 23, ಈಜು ಸ್ಪರ್ಧೆಯಲ್ಲಿ ಆರು, ಅಥ್ಲೆಟಿಕ್ಸ್‌ನಲ್ಲಿ ಐದು, ಕುಸ್ತಿಯಲ್ಲಿ ಎರಡು, ವೇಟ್‌ಲಿಫ್ಟಿಂಗ್, ಶೂಟಿಂಗ್, ಸೈಕ್ಲಿಂಗ್, ಆರ್ಚರಿ, ಟೇಬಲ್ ಟೆನಿಸ್ ಮತ್ತು ಕಬಡ್ಡಿಯಲ್ಲಿ ತಲಾ ಒಂದು ಚಿನ್ನದ ಪದಕಗಳನ್ನು ಚಂಡೀಗಢ ವಿ.ವಿ ಗೆದ್ದಿದೆ.


ಒಲಿಂಪಿಯನ್ ಈಜುಪಟು ಬೆಂಗಳೂರಿನ ಶ್ರೀಹರಿ ನಟರಾಜ್

ಪಂಜಾಬ್‌ನ ಲವ್ಲಿ ಪ್ರೊಫೆಷನಲ್ ಯೂನಿವರ್ಸಿಟಿ (ಎಲ್‌ಪಿಯು) 78 ಪದಕಗಳೊಂದಿಗೆ ರನ್ನರ್ ಅಪ್ ಆಗಿ ಆಯಿತು. 32 ಚಿನ್ನ, 24 ಬೆಳ್ಳಿ ಮತ್ತು 22 ಕಂಚುಗಳನ್ನು ಗೆದ್ದುಕೊಂಡಿತು.

ಅಮೃತಸರದ ಗುರುನಾನಕ್ ದೇವ್ ವಿಶ್ವವಿದ್ಯಾಲಯ (ಜಿಎನ್‌ಡಿಯು) 32 ಚಿನ್ನ, 22 ಬೆಳ್ಳಿ ಮತ್ತು 18 ಕಂಚಿನೊಂದಿಗೆ ಮೂರನೇ ಸ್ಥಾನ ಗಳಿಸಿತು.

ಮಂಗಳೂರು ವಿಶ್ವವಿದ್ಯಾಲಯ ಏಳು ಪದಕಗಳೊಂದಿಗೆ (4 ಚಿನ್ನ, 2 ಬೆಳ್ಳಿ, 1 ಕಂಚು) 12ನೇ ಸ್ಥಾನ ಪಡೆಯಿತು. ಬೆಂಗಳೂರಿನ ಕ್ರೈಸ್ಟ್ ವಿ.ವಿ ಎಂಟು ಪದಕ (2 ಚಿನ್ನ, 3 ಬೆಳ್ಳಿ, 3 ಕಂಚು), ರೇವಾ ವಿ.ವಿ 3 ಪದಕ (1 ಚಿನ್ನ, 2 ಬೆಳ್ಳಿ), ಕರ್ನಾಟಕ ವಿ.ವಿ 3 ಪದಕ (1 ಚಿನ್ನ, 1 ಬೆಳ್ಳಿ, 1 ಕಂಚು) ಗೆದ್ದುಕೊಂಡಿತು.

ಐದನೇ ಆವೃತ್ತಿಯ ಕ್ರೀಡಾಕೂಟವು ರಾಜಸ್ಥಾನದ ಏಳು ನಗರಗಳಲ್ಲಿ ನಡೆಯಿತು. ದೇಶದ 222 ವಿಶ್ವವಿದ್ಯಾಲಯಗಳಿಂದ 4,448 ಸ್ಪರ್ಧಿಗಳು 23 ಕ್ರೀಡಾ ವಿಭಾಗಗಳಲ್ಲಿ ಭಾಗವಹಿಸಿದ್ದರು. 12 ದಿನ ನಡೆದ ಸ್ಪರ್ಧೆಯಲ್ಲಿ ಎರಡು ಅಖಿಲ ಭಾರತ ವಿ.ವಿ ದಾಖಲೆ ಮತ್ತು 12 ಹೊಸ ಕೂಟ ದಾಖಲೆಗಳು ನಿರ್ಮಾಣವಾದವು.

ಡಬ್ಲ್ಯುಐಎಂ ಮೊದಲ ನಾರ್ಮ್ ಪಡೆದ ಚಾರ್ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ದಿನಗಳ ಹಿಂದಷ್ಟೇ 2300 ಇಎಲ್‌ಒ ರೇಟಿಂಗ್ ದಾಟಿದ ವಿಶ್ವದ ಎರಡನೇ ಅತಿ ಕಿರಿಯ ಆಟಗಾರ್ತಿ ಎನಿಸಿದ್ದ ನಗರದ ಪ್ರತಿಭಾನ್ವಿತ ಚೆಸ್ ಆಟಗಾರ್ತಿ ಚಾರ್ವಿ ಅನಿಲ್ ಕುಮಾರ್ ಈಗ ಸ್ಪೇನ್‌ನ ಟೂರ್ನಿಯೊಂದರಲ್ಲಿ ತನ್ನ ಮೊದಲ ‘ಮಹಿಳಾ ಇಂಟರ್‌ನ್ಯಾಷನಲ್ ಮಾಸ್ಟರ್’ (ಡಬ್ಲ್ಯುಐಎಂ) ನಾರ್ಮ್ ಪಡೆದಿದ್ದಾಳೆ.



‘ಚಾರ್ವಿ ಶುಕ್ರವಾರವಷ್ಟೇ ಸ್ಪೇನ್‌ನ ಬೆನಿಡೋರ್ಮ್‌ನಲ್ಲಿ ನಡೆದ 22ನೇ ಓಪನ್ ಇಂಟರ್‌ನ್ಯಾಷನಲ್ ಗ್ರ್ಯಾನ್ ಹೋಟೆಲ್ ಬಾಲಿ’ ಟೂರ್ನಿಯಲ್ಲಿ ಆಡಿದ್ದು, ಇದರಲ್ಲಿ ಮೊದಲ ಡಬ್ಲ್ಯುಐಎಂ ನಾರ್ಮ್ ಗಳಿಸಿದ್ದಾಳೆ. ಸರ್ಬಿಯಾದಲ್ಲಿ ಡಿಸೆಂಬರ್ 8 ರಿಂದ 16ರವರೆಗೆ ನಡೆಯಲಿರುವ ರೆಡನಿಕಿ ಚೆಸ್ ಐಎಂ ರೌಂಡ್‌ರಾಬಿನ್ ಟೂರ್ನಿಯಲ್ಲೂ ಆಡಲಿದ್ದಾಳೆ’ ಎಂದು ಈಕೆಯ ತಂದೆ ಅನಿಲ್ ಕುಮಾರ್ ಅವರು ಶುಕ್ರವಾರ ‘ಪ್ರಜಾವಾಣಿ’ಗೆ ತಿಳಿಸಿದರು. ಅನಿಲ್ ಕುಮಾರ್ ಅವರು ಎಚ್‌ಪಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದಾರೆ.

ಚೆಸ್‌ಗೆ ಹೆಸರಾಗಿರುವ ಚೆನ್ನೈನ ವೇಲಮ್ಮಾಳ್ ಶಾಲೆಗೆ ಚಾರ್ವಿ ಈ ವರ್ಷ ದಾಖಲಾಗಿದ್ದಾಳೆ.

ಚಾರ್ವಿ ಸಾಧನೆ: ಹಂಗೆರಿಯ ದಿಗ್ಗಜ ಆಟಗಾರ್ತಿ ಜುಡಿತ್ ಪೋಲ್ಗಾರ್ ಅವರನ್ನು ಬಿಟ್ಟರೆ 2300 ಇಎಲ್‌ಒ ರೇಟಿಂಗ್ ಪಡೆದ ವಿಶ್ವದ ಅತಿ ಕಿರಿಯ ಆಟಗಾರ್ತಿ ಎಂಬ ಶ್ರೇಯಸ್ಸಿಗೆ ಚಾರ್ವಿ ಪಾತ್ರಳಾಗಿದ್ದಳು. ಪ್ರಸ್ತುತ 11 ವರ್ಷದೊಳಗಿನವರ ವಿಭಾಗದಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ್ತಿಯಾಗಿದ್ದಾಳೆ.

ಚಾರ್ವಿಯ ಸಾಧನೆ ಗುರುತಿಸಿ, ದೇಶದ ಪ್ರಮುಖ ಚೆಸ್ ತರಬೇತುದಾರ ಆರ್.ಬಿ.ರಮೇಶ್ ಎಕ್ಸ್‌ನಲ್ಲಿ ಅಭಿನಂದನೆ ಸಲ್ಲಿಸಿದ್ದರು. ಚಾರ್ವಿ ಪ್ರಸ್ತುತ 2331ರ ಲೈವ್ ರೇಟಿಂಗ್‌ನಲ್ಲಿ ಆಡುತ್ತಿದ್ದಾಳೆ.

ವಿಶ್ವ ರ್‍ಯಾಪಿಡ್ ಟೂರ್ನಿಗೆ ಆಯ್ಕೆ: ದೋಹಾದಲ್ಲಿ ಇದೇ ತಿಂಗಳ 25ರಿಂದ 31ರವರೆಗೆ ನಡೆಯಲಿರುವ ವಿಶ್ವ ರ್‍ಯಾಪಿಡ್ ಮತ್ತು ಬ್ಲಿಟ್ಜ್ ಟೂರ್ನಿಯಲ್ಲಿ ಚಾರ್ವಿ ಪಾಲ್ಗೊಳ್ಳಲಿದ್ದು, ಭಾರತದಿಂದ ಪಾಲ್ಗೊಳ್ಳುತ್ತಿರುವ ಅತಿ ಕಿರಿಯ ಆಟಗಾರ್ತಿಯಾಗಿದ್ದಾಳೆ.

ಫಿಫಾ ವಿಶ್ವಕಪ್ ಮ್ಯಾಸ್ಕಟ್

ಚಿತ್ರ: ಎಎಫ್‌ಪಿ



ಅಮೆರಿಕ, ಕೆನಡಾ ಮತ್ತು ಮೆಕ್ಸಿಕೊದಲ್ಲಿ ಸಂಯುಕ್ತವಾಗಿ ನಡೆಯಲಿರುವ 2026ರ ಫಿಫಾ ವಿಶ್ವಕಪ್‌ಗೆ ವಾಷಿಂಗ್ಟನ್‌ನ ಕೆನಡಿ ಸೆಂಟರ್‌ನಲ್ಲಿ ಶುಕ್ರವಾರ ನಡೆದ ಡ್ರಾ ಸಮಾರಂಭದ ಸಂದರ್ಭದಲ್ಲಿ ಕಾಣಿಸಿಕೊಂಡ ವಿಶ್ವಕಪ್‌ನ ಮ್ಯಾಸ್ಕಟ್‌ಗಳಾದ ಕೆನಡಾದ ‘ಮೇಪಲ್’ (ಅಮೆರಿಕ ಖಂಡದಲ್ಲಿ ಕಂಡುಬರುವ ಕಡವೆ), ಮೆಕ್ಸಿಕೊದ ‘ಝಾಯು’ (ಜಾಗ್ವಾರ್) ಮತ್ತು ಅಮೆರಿಕದ ಕ್ಲಚ್ (ಗಿಡುಗ).

‘ಗ್ಲಾಂಡರ್ಸ್’: ಮೈಸೂರು ರೇಸ್ ರದ್ದು

ಮೈಸೂರು: ಇದೇ 10ರಂದು (ಬುಧವಾರ) ನಡೆಯಬೇಕಿದ್ದ ಮೈಸೂರು ರೇಸ್‌ಗಳನ್ನು ರದ್ದುಪಡಿಸಲಾಗಿದೆ ಎಂದು ಮೈಸೂರು ಟರ್ಫ್ ಕ್ಲಬ್ ಶುಕ್ರವಾರ ತಿಳಿಸಿದೆ.

ಮೈಸೂರು ರೇಸ್ ಕ್ಲಬ್‌ನಲ್ಲಿ ಬೀಡುಬಿಟ್ಟಿರುವ ಕೆಲವು ಕುದುರೆಗಳಲ್ಲಿ ‘ಗ್ಲ್ಯಾಂಡರ್ಸ್’ ರೋಗದ ಸೋಂಕು ಕಾಣಿಸಿಕೊಂಡಿರುವ ಕಾರಣ, ಮುಂದಿನ ವಾರದ ರೇಸ್ ಅನ್ನು ರದ್ದುಪಡಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸೀಮಾಗೆ 16 ತಿಂಗಳ ನಿಷೇಧ

ನವದೆಹಲಿ (ಪಿಟಿಐ): ಏಷ್ಯನ್ ಕ್ರೀಡೆಗಳ ಡಿಸ್ಕಸ್ ಥ್ರೊ ಸ್ಪರ್ಧೆಯ ಮಾಜಿ ಸ್ವರ್ಣ ವಿಜೇತೆ ಸೀಮಾ ಪೂನಿಯಾ ಅವರು ಉದ್ದೀಪನ ಮದ್ದು ಪರೀಕ್ಷೆಯಲ್ಲಿ ಸಿಲುಕಿದ ಕಾರಣ ಅವರಿಗೆ 16 ತಿಂಗಳ ನಿಷೇಧ ವಿಧಿಸಲಾಗಿದೆ.



ರಾಷ್ಟ್ರೀಯ ಉದ್ದೀಪನ ಮದ್ದು ಸೇವನೆ ತಡೆ ಘಟಕ (ನಾಡಾ)ದ ಪರಿಷ್ಕೃತ ಪಟ್ಟಿಯ ಪ್ರಕಾರ 42 ವರ್ಷ ವಯಸ್ಸಿನ ಪೂನಿಯಾ ಅವರ ಮೇಲೆ ಹೇರಿರುವ ನಿಷೇಧ ನ. 10ರಿಂದ ಜಾರಿಯಾಗಿದೆ. ಅವರು ಈ ಹಿಂದೆ ಎರಡು ಬಾರಿ ಮದ್ದು ಸೇವನೆ ನಿಯಮಗಳನ್ನು ಉಲ್ಲಂಘಿಸಿದ್ದರು. ಇದರಲ್ಲಿ ಒಂದು ಉಲ್ಲಂಘನೆ ಜೂನಿಯರ್ ಹಂತದಲ್ಲಿ ನಡೆದಿತ್ತು.

2023ರ ಹಾಂಗ್‌ಝೌ ಏಷ್ಯನ್ ಕ್ರೀಡೆಗಳು ಅವರ ಕೊನೆಯ ಪ್ರಮುಖ ಕೂಟವಾಗಿದ್ದು, ಇದರಲ್ಲಿ ಕಂಚಿನ ಪದಕ ಗಳಿಸಿದ್ದರು.

ಮಧ್ಯಮ ದೂರದ ಓಟಗಾರ್ತಿ ಪೂಜಾ ಯಾದವ್ (4 ವರ್ಷ ನಿಷೇಧ), ಶಾಟ್‌ಪಟ್ ಸ್ಪರ್ಧಿ ಮಂಜೀತ್ ಕುಮಾರ್ (6 ವರ್ಷ), ಮಧ್ಯಮ ದೂರದ ಓಟಗಾರ ನಿಕೇಶ್ ಧನರಾಜ್ ರಾಥೋಡ್ (4 ವರ್ಷ) ಅವರು ಡೋಪಿಂಗ್ ಪರೀಕ್ಷೆಯಲ್ಲಿ ಸಿಲುಕಿ ಅಮಾನತು ಶಿಕ್ಷೆಗೆ ಒಳಗಾಗಿದ್ದಾರೆ.

ಟೆನಿಸ್: ಪ್ರಶಸ್ತಿ ಸುತ್ತಿಗೆ ಆದಿಶ್, ಧನುಷ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿನ ಆದಿಶ್ ಪಿ.ಎಂ. ಅವರು ಅಗ್ರ ಶ್ರೇಯಾಂಕದ ತನುಷ್ ಶೇಖರ್ ಅವರಿಗೆ ಆಘಾತ ನೀಡಿ, ಎಐಟಿಎ 12 ವರ್ಷದೊಳಗಿನವರ ರಾಷ್ಟ್ರೀಯ ಸರಣಿಯ ಟೆನಿಸ್ ಟೂರ್ನಿಯ ಬಾಲಕರ ಸಿಂಗಲ್ಸ್‌ನಲ್ಲಿ ಶುಕ್ರವಾರ ಫೈನಲ್ ಪ್ರವೇಶಿಸಿದರು.


ಧನುಷ್

ಮೂರನೇ ಶ್ರೇಯಾಂಕದ ಆಟಗಾರ ಆದಿಶ್, ಜಕ್ಕೂರಿನ ಇನ್‌ಫಿನಿಟಿ ಟೆನಿಸ್ ಅಕಾಡೆಮಿಯಲ್ಲಿ ನಡೆಯುತ್ತಿರುವ ಟೂರ್ನಿಯ ಸೆಮಿಫೈನಲ್‌ನಲ್ಲಿ 6–3, 3–6, 6–3ರಿಂದ ಕನ್ನಡಿಗ ತನುಷ್ ಅವರನ್ನು ಮಣಿಸಿದರು. ಮತ್ತೊಂದು ಸೆಮಿಫೈನಲ್ ಪಂದ್ಯದಲ್ಲಿ ಕರ್ನಾಟಕದ ಧನುಷ್ ಎಸ್.ಎಂ. 7–5, 7–5 ರಿಂದ ಎರಡನೇ ಶ್ರೇಯಾಂಕದ ಗುಜರಾತ್‌ನ ಆಟಗಾರ ರಿಯಾನ್ ನಂದಕುಮಾರ್ ವಿರುದ್ಧ ನೇರ ಸೆಟ್‌ಗಳಲ್ಲಿ ಜಯಗಳಿಸಿದರು.

ಬಾಲಕಿಯರ ವಿಭಾಗದಲ್ಲಿ ಕರ್ನಾಟಕದ ರೂಹಿ ಸಿಂಗ್ ಹಾಗೂ ತೆಲಂಗಾಣದ ಅನೀಕ್ಷಾ ಜಿ. ಅವರು ಪ್ರಶಸ್ತಿ ಸುತ್ತು ಪ್ರವೇಶಿಸಿದರು.

ನಾಲ್ಕನೇ ಶ್ರೇಯಾಂಕದ ಆಟಗಾರ್ತಿ ರೂಹಿ ನಾಲ್ಕರ ಘಟ್ಟದ ಪಂದ್ಯದಲ್ಲಿ 6–1, 7–5ರಿಂದ ಅಗ್ರ ಶ್ರೇಯಾಂಕದ ಅನೀಷಾ ಮರಿಯನ್ ಕಾರ್ನೆಲಿಯೊ ವಿರುದ್ಧ ನೇರ ಸೆಟ್‌ಗಳಲ್ಲಿ ಜಯ ಸಾಧಿಸಿದರು. ಮೊದಲ ಸೆಟ್ ಅನ್ನು ಸುಲಭವಾಗಿ ಗೆದ್ದುಕೊಂಡ ರೂಹಿ, ಎರಡನೇ ಸೆಟ್‌ನಲ್ಲಿ ಪೈಪೋಟಿ ಎದುರಿಸಬೇಕಾಯಿತು. ಛಲ ಬಿಡದೆ ಆಡಿದ ಅವರು ತಮ್ಮದೇ ರಾಜ್ಯದ ಆಟಗಾರ್ತಿಯ ವಿರುದ್ಧ ಮೇಲುಗೈ ಸಾಧಿಸಿದರು.

ಇನ್ನೊಂದು ಸೆಮಿಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಅನೀಕ್ಷಾ ಅವರು ಕರ್ನಾಟಕದ ಕಾಶ್ವಿ ವಿ. ಕೋಣಂಕಿ ವಿರುದ್ಧ ಒಂದೂ ಪಾಯಿಂಟ್ಸ್ ಬಿಟ್ಟುಕೊಡದೆ (6–0, 6–0) ನಿರಾಯಾಸ ಜಯ ದಾಖಲಿಸಿದರು.

ಸರಣಿ ಜಯದತ್ತ ಭಾರತ ತಂಡ ಚಿತ್ತ

ದ.ಆಫ್ರಿಕಾ ವಿರುದ್ಧ ಅಂತಿಮ ಏಕದಿನ ಪಂದ್ಯ ಇಂದು: ರಾಹುಲ್ ನಾಯಕತ್ವಕ್ಕೆ ಸವಾಲು


ದಕ್ಷಿಣ ಆಫ್ರಿಕಾ ತಂಡದ ಯಾನ್ಸೆನ್


ಕೆ.ಎಲ್. ರಾಹುಲ್ ಮತ್ತು ವಿರಾಟ್ ಕೊಹ್ಲಿ ಪಿಟಿಐ ಚಿತ್ರಗಳು

ವಿಶಾಖಪಟ್ಟಣಂ (ಪಿಟಿಐ): ಶನಿವಾರ ಇಲ್ಲಿ ನಡೆಯಲಿರುವ ಏಕದಿನ ಪಂದ್ಯದಲ್ಲಿಯೂ ಯಥಾಪ್ರಕಾರ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರತ್ತಲೇ ಎಲ್ಲರ ಚಿತ್ತ ನೆಟ್ಟಿದೆ.

ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಸರಣಿಯ ಮೊದಲ ಎರಡೂ ಪಂದ್ಯಗಳಲ್ಲಿ ವಿರಾಟ್ ಶತಕ ದಾಖಲಿಸಿದ್ದಾರೆ. ರೋಹಿತ್ ಕೂಡ ಅಬ್ಬರಿಸಿದ್ದರು. ಆದರೆ ಎರಡನೇ ಪಂದ್ಯದಲ್ಲಿ ದೊಡ್ಡ ಮೊತ್ತವನ್ನೂ ಬೆನ್ನಟ್ಟಿದ್ದ ದಕ್ಷಿಣ ಆಫ್ರಿಕಾ ಗೆಲುವು ಸಾಧಿಸಿತ್ತು. ಅದರಿಂದಾಗಿ ಸರಣಿಯು 1–1ರ ಸಮಬಲವಾಗಿದೆ. ಅದರಿಂದಾಗಿಯೇ ಕೊನೆಯ ಪಂದ್ಯವು ಕುತೂಹಲದ ಕೇಂದ್ರಬಿಂದುವಾಗಿದೆ.

ಟೆಸ್ಟ್ ಸರಣಿಯಲ್ಲಿ 2–0ಯಿಂದ ಜಯಗಳಿಸಿರುವ ತೆಂಬಾ ಬವುಮಾ ಪಡೆಯು ಏಕದಿನ ಮಾದರಿಯಲ್ಲಿಯೂ ಮೇಲುಗೈ ಸಾಧಿಸುವ ಛಲದಲ್ಲಿದೆ. ಆದರೆ ತವರು ನೆಲದಲ್ಲಿಯೇ ಸತತ ಎರಡು ಸರಣಿ ಸೋಲುವುದು ಭಾರತ ತಂಡಕ್ಕೆ ನುಂಗಲಾರದ ತುತ್ತಾಗಬಹುದು. ಆದ್ದರಿಂದ ಈ ಪಂದ್ಯದಲ್ಲಿ ಕೆ.ಎಲ್. ರಾಹುಲ್ ನಾಯಕತ್ವದ ಬಳಗವು ಜಯಿಸಲೇಬೇಕಾದ ಒತ್ತಡದಲ್ಲಿದೆ.

ಏಕದಿನ ಕ್ರಿಕೆಟ್ ಮಾದರಿಯಲ್ಲಿ ರೋಹಿತ್ ಮತ್ತು ಕೊಹ್ಲಿ ಅವರು ಅಪ್ರತಿಮ ಆಟಗಾರರು ಎಂಬುದರಲ್ಲಿ ಎರಡು ಮಾತಿಲ್ಲ. ಅವರೊಂದಿಗೆ ಕೆಲವು ಯುವ ಆಟಗಾರರೂ ತಮ್ಮ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಾರೆ. ಕಳೆದ ಪಂದ್ಯದಲ್ಲಿ ಋತುರಾಜ್ ಗಾಯಕವಾಡ್ ಶತಕ ಬಾರಿಸಿದ್ದರು.

ಆದರೆ ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರು ಲಯ ಕಂಡುಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಎಡಗೈ ಬ್ಯಾಟರ್ ತಮ್ಮ ಸ್ಕೋರ್‌ಗಳನ್ನು ದೊಡ್ಡ ಮೊತ್ತದಲ್ಲಿ ಪರಿವರ್ತಿಸುವಲ್ಲಿ ಯಶಸ್ವಿಯಾದರೆ ತಂಡಕ್ಕೆ ಉಪಯುಕ್ತವಾಗಲಿದೆ. ಆದರೆ ಅವರು ಎಡಗೈ ಬೌಲರ್‌ಗಳಿಗೆ ವಿಕೆಟ್ ಒಪ್ಪಿಸುತ್ತಿರುವುದು ಚಿಂತೆಯ ವಿಷಯವಾಗಿದೆ. ಕಳೆದೆರಡೂ ಪಂದ್ಯಗಳಲ್ಲಿಯೂ ಅವರು ಕ್ರಮವಾಗಿ ಮಾರ್ಕೊ ಯಾನ್ಸೆನ್ ಮತ್ತು ನಾಂದ್ರೆ ಬರ್ಗರ್ ಅವರ ಎದುರು ಔಟಾಗಿದ್ದಾರೆ.

ಇಲ್ಲಿಯ ಪಿಚ್ ಬ್ಯಾಟರ್‌ಗಳಿಗೆ ಹೆಚ್ಚು ನೆರವು ನೀಡುವುದು ಈ ಹಿಂದಿನ ಪಂದ್ಯಗಳಲ್ಲಿ ಸಾಬೀತಾಗಿದೆ. ಆದ್ದರಿಂದ ಹೆಚ್ಚುವರಿ ಬ್ಯಾಟರ್ ಅವಕಾಶ ಪಡೆಯಬಹುದಾಗಿದೆ. ಕಳೆದ ಪಂದ್ಯದಲ್ಲಿ ಕೆ.ಎಲ್. ರಾಹುಲ್ ಅವರೂ ಮಿಂಚಿದ್ದರು.

ಆದರೆ ಭಾರತ ತಂಡದ ಬೌಲರ್‌ಗಳು ಶಿಸ್ತಿನ ಬೌಲಿಂಗ್ ಮಾಡುವುದು ಮುಖ್ಯವಾಗಿದೆ. ಅರ್ಷದೀಪ್ ಸಿಂಗ್ ಮತ್ತು ಹರ್ಷಿತ್ ರಾಣಾ ಅವರು ಹೋದ ಪಂದ್ಯದ ಆರಂಭದಲ್ಲಿ ವಿಕೆಟ್ ಗಳಿಸಿದರು. ಆದರೆ ನಂತರದ ಹಂತದಲ್ಲಿ ರನ್‌ಗಳನ್ನು ಬಿಟ್ಟುಕೊಟ್ಟರು. ಪ್ರಸಿದ್ಧಕೃಷ್ಣ, ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಕೂಡ ದುಬಾರಿಯಾದರು.

ಏಡನ್ ಮರ್ಕರಂ, ಡೆವಾಲ್ಡ್ ಬ್ರೆವಿಸ್ ಹಾಗೂ ನಾಯಕ ತೆಂಬಾ ಅವರು ಉತ್ತಮ ಲಯದಲ್ಲಿರುವುದು ಪ್ರವಾಸಿ ಬಳಗದಲ್ಲಿ ವಿಶ್ವಾಸ ಹೆಚ್ಚಿಸಿದೆ. ಎಡಗೈ ವೇಗಿ ಮಾರ್ಕೊ ಯಾನ್ಸೆನ್, ಲುಂಗಿ ಎನ್‌ಗಿಡಿ, ಕೇಶವ್ ಮಹಾರಾಜ್ ಅವರು ಆತಿಥೇಯ ಬ್ಯಾಟರ್‌ಗಳಿಗೆ ಕಠಿಣ ಸವಾಲೊಡ್ಡಲು ಸಿದ್ಧರಾಗಿದ್ದಾರೆ.

ತಂಡಗಳು

ಭಾರತ: ಕೆ.ಎಲ್. ರಾಹುಲ್ (ನಾಯಕ/ವಿಕೆಟ್‌ಕೀಪರ್), ರೋಹಿತ್ ಶರ್ಮಾ, ಯಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ, ತಿಲಕ್ ವರ್ಮಾ, ರಿಷಭ್ ಪಂತ್ (ವಿಕೆಟ್‌ಕೀಪರ್), ವಾಷಿಂಗ್ಟನ್ ಸುಂದರ್, ರವೀಂದ್ರ ಜಡೇಜ, ಕುಲದೀಪ್ ಯಾದವ್, ನಿತೀಶ್ ಕುಮಾರ್ ರೆಡ್ಡಿ, ಹರ್ಷಿತ್ ರಾಣಾ, ಋತುರಾಜ್ ಗಾಯಕವಾಡ್, ಪ್ರಸಿದ್ಧ ಕೃಷ್ಣ, ಅರ್ಷದೀಪ್ ಸಿಂಗ್, ಧ್ರುವ ಜುರೇಲ್,
ದಕ್ಷಿಣ ಆಫ್ರಿಕಾ: ತೆಂಬಾ ಬವುಮಾ (ನಾಯಕ), ಓಟ್ನೀಲ್ ಬಾರ್ತಮನ್, ಕಾರ್ಬಿನ್ ಬಾಷ್, ಮ್ಯಾಥ್ಯೂ ಬ್ರಿಝ್ಕಿ, ಡೆವಾಲ್ಡ್ ಬ್ರೆವಿಸ್, ನಾಂದ್ರೆ ಬರ್ಗರ್, ಕ್ವಿಂಟನ್ ಡಿಕಾಕ್, ಟೋನಿ ಡಿ ಝೂರ್ಜಿ, ರುಬಿನ್ ಹರ್ಮನ್, ಕೇಶವ್ ಮಹಾರಾಜ, ಮಾರ್ಕೊ ಯಾನ್ಸೆನ್, ಏಡನ್ ಮರ್ಕರಂ, ಲುಂಗಿ ಎನ್‌ಗಿಡಿ, ರಿಯಾನ್ ರಿಕೆಲ್ಟನ್, ಪ್ರೆನೆಲನ್ ಸುಬ್ರಾಯೆನ್.
ಪಂದ್ಯ ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ಏಷ್ಯನ್ ಗೇಮ್ಸ್: ಯಾದವ್ ಚೆಫ್ ಡಿ ಮಿಷನ್

ನವದೆಹಲಿ (ಪಿಟಿಐ): ಭಾರತ ಒಲಿಂಪಿಕ್ ಸಂಸ್ಥೆಯ ಖಜಾಂಚಿ ಸಹದೇವ್ ಯಾದವ್ ಅವರು ಮುಂದಿನ ವರ್ಷ ನಡೆಯಲಿರುವ ಏಷ್ಯನ್ ಕ್ರೀಡಾಕೂಟದಲ್ಲಿ ಚೆಫ್ ಡಿ ಮಿಷನ್ ಆಗಿ ಕಾರ್ಯನಿರ್ವಹಿಸುವರು.

ಭಾರತ ವೇಟ್‌ಲಿಫ್ಟಿಂಗ್ ಸಂಸ್ಥೆ ಮುಖ್ಯಸ್ಥರೂ ಆಗಿರುವ ಯಾದವ್ ಅವರೊಂದಿಗೆ ಟೇಬಲ್ ಟೆನಿಸ್ ದಂತಕತೆ ಅಚಂತಾ ಶರತ್ ಕಮಲ್ ಡೆಪ್ಯೂಟಿ ಚೆಫ್ ಡಿ ಮಿಷನ್ ಆಗಿರುವರು.



ಪ್ರೆಸಿಡೆಂಟ್ ಪುತಿನ್ ಭಾರತಕ್ಕೆ ಆಗಮಿಸಿದ್ದಾರೆ!

ಮಹಿಳಾ ಟಿ20: ಕ್ವಾರ್ಟರ್‌ಫೈನಲ್‌ಗೆ ಕರ್ನಾಟಕ ತಂಡ

ಬೆಂಗಳೂರು: ಕರ್ನಾಟಕ ತಂಡವು ಬಿಸಿಸಿಐ 23 ವರ್ಷದೊಳಗಿನ ಮಹಿಳೆಯರ ಟಿ20 ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಶುಕ್ರವಾರ ಪಂಜಾಬ್ ತಂಡವನ್ನು 5 ವಿಕೆಟ್‌ಗಳಿಂದ ಮಣಿಸಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿತು.

ಅಹಮದಾಬಾದ್‌ನಲ್ಲಿ ನಡೆದ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಟಾಸ್ ಗೆದ್ದ ರಾಜ್ಯ ತಂಡವು ಬೌಲಿಂಗ್ ಆಯ್ದುಕೊಂಡಿತು. ದೀಕ್ಷಾ ಜೆ.ಎಚ್. (15ಕ್ಕೆ4) ಹಾಗೂ ನಮಿತಾ ಡಿಸೋಜಾ (5ಕ್ಕೆ2) ಅವರು ಪಂಜಾಬ್ ತಂಡದ ರನ್ ಗಳಿಕೆಗೆ ಕಡಿವಾಣ ಹಾಕಿದರು.

ಹಿಮಾಂಶಿ ಸೈನಿ (ಔಟಾಗದೇ 51) ಅವರ ಹೋರಾಟದಿಂದ ಪಂಜಾಬ್ ತಂಡವು ನಿಗದಿತ ಓವರ್‌ಗಳಲ್ಲಿ 9 ವಿಕೆಟ್‌ಗೆ 95 ರನ್ ಗಳಿಸಿತು. ಸುಲಭ ಗುರಿ ಬೆನ್ನಟ್ಟಿದ ರೋಷಿನಿ ಕಿರಣ್ ಬಳಗವು ನಿಕಿ ಪ್ರಸಾದ್ (ಔಟಾಗದೇ 44) ಅವರ ತಾಳ್ಮೆಯ ಬ್ಯಾಟಿಂಗ್ ಬಲದಿಂದ 19.5 ಓವರ್‌ಗಳಲ್ಲಿ 96 ರನ್ ಗಳಿಸಿ, ಜಯ ಸಾಧಿಸಿತು.


ನಿಕಿ ಪ್ರಸಾದ್

ಸಂಕ್ಷಿಪ್ತ ಸ್ಕೋರು: ಪಂಜಾಬ್: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 95 (ಹಿಮಾಂಶಿ ಸೈನಿ ಔಟಾಗದೇ 51; ದೀಕ್ಷಾ ಜೆ.ಎಚ್. 15ಕ್ಕೆ4, ನಮಿತಾ ಡಿಸೋಜಾ 5ಕ್ಕೆ2). ಕರ್ನಾಟಕ: 19.5 ಓವರ್‌ಗಳಲ್ಲಿ 5 ವಿಕೆಟ್‌ಗೆ 96 (ನಿಕಿ ಪ್ರಸಾದ್ ಔಟಾಗದೇ 44; ಪ್ರಗತಿ ಸಿಂಗ್ 2ಕ್ಕೆ1, ಪ್ರಿಯಾಂಕಾ 12ಕ್ಕೆ1).

ಆ್ಯಷಸ್ ಪಿಂಕ್‌ಬಾಲ್ ಟೆಸ್ಟ್ • ವಿದರಾಲ್ಡ್, ಲಾಬುಷೇನ್ ಅರ್ಧಶತಕ

ಎರಡನೇ ದಿನ ಆಸ್ಟ್ರೇಲಿಯಾ ಮೇಲುಗೈ

ಬ್ರಿಸ್ಬೇನ್ (ಎಎಫ್‌ಪಿ): ಛಲದಿಂದ ಆಡಿದ ಆಸ್ಟ್ರೇಲಿಯಾ ತಂಡ ಆ್ಯಷಸ್ ಸರಣಿಯ ಎರಡನೇ ಟೆಸ್ಟ್ ಕ್ರಿಕೆಟ್ (ಹಗಲು ರಾತ್ರಿ) ಪಂದ್ಯದ ಎರಡನೇ ದಿನವಾದ ಶುಕ್ರವಾರ ಇಂಗ್ಲೆಂಡ್ ವಿರುದ್ಧ 44 ರನ್‌ಗಳ ಮುನ್ನಡೆ ಸಂಪಾದಿಸಿತು.

ಆಕ್ರಮಣಕಾರಿಯಾಗಿ ಆಡಿದ ಆರಂಭ ಆಟಗಾರ ಜೇಕ್ ವಿದರಾಲ್ಡ್ (72, 78ಎ, 4x12, 6x1), ಮಾರ್ನಸ್ ಲಾಬುಷೇನ್ (65, 78ಎ, 4x10) ಮತ್ತು ನಾಯಕ ಸ್ಟೀವ್ ಸ್ಮಿತ್ (61, 85ಎ) ಅರ್ಧ ಶತಕಗಳನ್ನು ಗಳಿಸಿದರು. ಗ್ಯಾಬಾದಲ್ಲಿ ಇಂಗ್ಲೆಂಡ್‌ನ 334 ರನ್‌ಗಳಿಗೆ ಉತ್ತರವಾಗಿ ಆತಿಥೇಯರು 6 ವಿಕೆಟ್‌ಗೆ 378 ರನ್ ಗಳಿಸಿ ಮೇಲುಗೈ ಸಾಧಿಸಿದರು. ಇಂಗ್ಲೆಂಡ್ ಫೀಲ್ಡರ್‌ಗಳು ನಾಲ್ಕು ಕ್ಯಾಚ್‌ಗಳನ್ನು ಕೈಚೆಲ್ಲಿದ್ದು ಆಸ್ಟ್ರೇಲಿಯಾಕ್ಕೆ ನೆರವಾಯಿತು.


ಜೇಕ್ ವಿದರಾಲ್ಡ್

ಪಿಚ್ ಮುಂದಿನ ದಿನಗಳಲ್ಲಿ ಹದಗೆಡುವ ಸಾಧ್ಯತೆಯಿರುವ ಕಾರಣ ಉತ್ತಮ ಲೀಡ್ ಪಡೆಯುವುದು ಆಸ್ಟ್ರೇಲಿಯಾದ ಪಾಲಿಗೆ ನಿರ್ಣಾಯಕವಾಗಿದೆ. ಆತಿಥೇಯ ತಂಡ ಮೊದಲ ಟೆಸ್ಟ್ ಪಂದ್ಯವನ್ನು ಎರಡೇ ದಿನಗಳ ಒಳಗೆ ಜಯಿಸಿತ್ತು.

ಮೊದಲ ಎಸೆತದಲ್ಲಿ ಮತ್ತು ನಂತರ 25 ರನ್ ಗಳಿಸಿದ್ದಾಗ ಜೀವದಾನ ಪಡೆದಿದ್ದ ಅಲೆಕ್ಸ್ ಕ್ಯಾರಿ 46 ರನ್ ಗಳಿಸಿದ್ದು, ಮೈಕೆಲ್ ನೆಸೆರ್ (ಔಟಾಗದೇ 15) ಜೊತೆ ಆಟವನ್ನು ಕಾದಿರಿಸಿದ್ದಾರೆ. ಕ್ಯಾರಿ ಜೊತೆ ಸ್ಟೀವನ್ ಸ್ಮಿತ್ ಅವರಿಗೂ ಜೀವದಾನ ದೊರಕಿತು. ಆರ್ಚರ್ ಬೌಲಿಂಗ್‌ನಲ್ಲಿ ಜೇಮಿ ಸ್ಮಿತ್ ಸುಲಭ ಕ್ಯಾಚ್ ಬಿಟ್ಟರು.


ಒಂದು ಹಂತದಲ್ಲಿ ಆಸ್ಟ್ರೇಲಿಯಾ 3 ವಿಕೆಟ್‌ಗೆ 291 ರನ್ ಗಳಿಸಿದ್ದು ಬಿಗಿ ಹಿಡಿತ ಸಾಧಿಸಿತ್ತು. ಆದರೆ ಬ್ರೈಡನ್ ಕಾರ್ಸ್ (113ಕ್ಕೆ3) ಅವರು ನಾಲ್ಕು ಎಸೆತಗಳ ಅಂತರದಲ್ಲಿ ಕ್ಯಾಮೆರಾನ್ ಗ್ರೀನ್ (45) ಮತ್ತು ಸ್ಮಿತ್ ಅವರ ವಿಕೆಟ್‌ಗಳನ್ನು ಪಡೆದರು. ಹೆಡ್ ಮತ್ತು ವಿದರಾಲ್ಡ್ ಮೊದಲ ವಿಕೆಟ್‌ಗೆ 77 ರನ್ ಸೇರಿಸಿದ್ದರು. ನಂತರ ವಿದರಾಲ್ಡ್ ಮತ್ತು ಲಾಬುಷೇನ್ ಎರಡನೇ ವಿಕೆಟ್‌ಗೆ 69 ರನ್ ಪೇರಿಸಿದರು.

ಇದಕ್ಕೆ ಮೊದಲು, ಗುರುವಾರ 9 ವಿಕೆಟ್‌ಗೆ 325 ರನ್ ಗಳಿಸಿದ್ದ ಇಂಗ್ಲೆಂಡ್ ತಂಡ, ಎರಡನೇ ದಿನ 14 ಎಸೆತಗಳಲ್ಲಿ ಆಲೌಟ್ ಆಯಿತು. ಆಸ್ಟ್ರೇಲಿಯಾದಲ್ಲಿ ಮೊದಲ ಟೆಸ್ಟ್ ಶತಕ ಗಳಿಸಿದ್ದ ಜೋ ರೂಟ್ 138 ರನ್ ಗಳಿಸಿ ಅಜೇಯರಾಗಿ ಉಳಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್: 76.2 ಓವರುಗಳಲ್ಲಿ 334 (ಜೋ ರೂಟ್ ಔಟಾಗದೇ 138, ಜೋಫ್ರಾ ಆರ್ಚರ್ 38; ಮಿಚೆಲ್ ಸ್ಟಾರ್ಕ್ 75ಕ್ಕೆ6); ಆಸ್ಟ್ರೇಲಿಯಾ: 73 ಓವರು ಗಳಲ್ಲಿ 6 ವಿಕೆಟ್‌ಗೆ 378 (ಟ್ರಾವಿಸ್ ಹೆಡ್ 33, ಜೇಕ್ ವಿದರಾಲ್ಡ್ 72, ಮಾರ್ನಸ್ ಲಾಬುಷೇನ್ 65, ಸ್ಟೀವ್ ಸ್ಮಿತ್ 61, ಕ್ಯಾಮರಾನ್ ಗ್ರೀನ್ 45, ಅಲೆಕ್ಸ್ ಕ್ಯಾರಿ ಔಟಾಗದೇ 46; ಬ್ರೈಡನ್ ಕಾರ್ಸ್ 115ಕ್ಕೆ3, ಬೆನ್ ಸ್ಟೋಕ್ಸ್ 93ಕ್ಕೆ2).

600 ವಿಕೆಟ್: ಸುನಿಲ್ ಮೈಲಿಗಲ್ಲು

ಅಬುಧಾಬಿ (ಪಿಟಿಐ): ಸ್ಪರ್ಧಾತ್ಮಕ ಟಿ–20 ಕ್ರಿಕೆಟ್‌ನಲ್ಲಿ 600 ವಿಕೆಟ್ ಪಡೆದ ವಿಶ್ವದ ಮೊದಲ ಬೌಲರ್ ಎಂಬ ಶ್ರೇಯಕ್ಕೆ ವೆಸ್ಟ್ ಇಂಡೀಸ್‌ನ ಸ್ಪಿನ್ನರ್ ಸುನಿಲ್ ನಾರಾಯಣ್ ಪಾತ್ರರಾಗಿದ್ದಾರೆ.



ಯುಎಇನಲ್ಲಿ ನಡೆಯುತ್ತಿರುವ ವಿಶ್ವ ಇಂಟರ್‌ನ್ಯಾಷನಲ್ ಲೀಗ್ ಟಿ20 (ಐಎಲ್‌ಟಿ20) ಟೂರ್ನಿಯಲ್ಲಿ ಅಬುಧಾಬಿ ನೈಟ್ ರೈಡರ್ಸ್ ತಂಡದಲ್ಲಿ ಪರ ಆಡುತ್ತಿರುವ ಅವರು, ಬುಧವಾರ ಶಾರ್ಜಾ ವಾರಿಯರ್ಸ್ ವಿರುದ್ಧದ ಪಂದ್ಯದಲ್ಲಿ ಟಾಮ್ ಅಬೆಲ್ ಅವರ ವಿಕೆಟ್ ಪಡೆಯುವುದರೊಂದಿಗೆ ಈ ಮೈಲಿಗಲ್ಲು ಸಾಧಿಸಿದ್ದಾರೆ. 37 ವರ್ಷ ವಯಸ್ಸಿನ ಸುನಿಲ್, ಅಂತರರಾಷ್ಟ್ರೀಯ ಪಂದ್ಯಗಳು ಮತ್ತು ವಿವಿಧ ಫ್ರಾಂಚೈಸಿಗಳಲ್ಲಿ ಈ ಸಾಧನೆ ಮಾಡಿದ್ದಾರೆ.

ಫೆಬ್ರುವರಿಯಲ್ಲಿ ಡೇವಿಸ್ ಕಪ್‌ಗೆ ಬೆಂಗಳೂರು ಆತಿಥ್ಯ

ಬೆಂಗಳೂರು: ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯು ಮುಂದಿನ ವರ್ಷದ ಫೆಬ್ರುವರಿಯಲ್ಲಿ ಡೇವಿಸ್ ಕಪ್ ವಿಶ್ವ ಗುಂಪಿನ ಪಂದ್ಯಕ್ಕೆ ಆತಿಥ್ಯ ವಹಿಸಲಿದೆ. ಭಾರತ ಮತ್ತು ನೆದರ್ಲೆಂಡ್ಸ್ ತಂಡಗಳು ಈ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಇತ್ತೀಚೆಗಷ್ಟೇ ಬಿಲ್ಲಿ ಜೀನ್ ಕಿಂಗ್ ಕಪ್ ಪ್ಲೇ ಆಫ್ ಟೂರ್ನಿಯನ್ನು ಇಲ್ಲಿ ಆಯೋಜಿಸಲಾಗಿತ್ತು. ಈ ತಿಂಗಳಾಂತ್ಯದಲ್ಲಿ ಎಸ್.ಎಂ. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ವಿಶ್ವ ಟೆನಿಸ್ ಲೀಗ್ (ಡಬ್ಲ್ಯುಟಿಎಲ್) ನಡೆಯಲಿದೆ.

ಬೆಂಗಳೂರಿನಲ್ಲಿ 1970, 1985, 2013, 2014 ಮತ್ತು 2017ರಲ್ಲಿ ಡೇವಿಸ್ ಕಪ್ ಪಂದ್ಯಗಳನ್ನು ಆಯೋಜಿಸಲಾಗಿತ್ತು.

‘ಬೆಂಗಳೂರಿಗೆ ಇದು ಬಹಳ ಗೌರವದ ವಿಷಯವಾಗಿದೆ. ನೆದರ್ಲೆಂಡ್ಸ್ ಎದುರಿನ ಡೇವಿಸ್ ಕಪ್ ಪಂದ್ಯಗಳು ಇಲ್ಲಿ ನಡೆಯಲಿವೆ. ಇದೊಂದು ವಿಶೇಷ ಸಂದರ್ಭವಾಗಿದೆ’ ಎಂದು ಕೆಎಸ್‌ಎಲ್‌ಟಿಎ ಉಪಾಧ್ಯಕ್ಷ ಮತ್ತು ಐಟಿ ಮತ್ತು ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡೇವಿಸ್ ಕಪ್ ರ‍್ಯಾಂಕಿಂಗ್‌ನಲ್ಲಿ ಭಾರತವು 33ನೇ ಸ್ಥಾನದಲ್ಲಿದೆ. ಮೂರು ಬಾರಿ (1966, 1974 ಮತ್ತು 1987) ಫೈನಲ್ಸ್ ಕೂಡ ತಲುಪಿತ್ತು. ಕಳೆದ ಸೆಪ್ಟೆಂಬರ್‌ನಲ್ಲಿ ಸ್ವಿಟ್ಜರ್ಲೆಂಡ್ ವಿರುದ್ಧ ಜಯಗಳಿಸಿದ್ದ ಭಾರತ ಮುಂದಿನ ವರ್ಷದ ಕ್ವಾಲಿಫೈಯರ್‌ನಲ್ಲಿ ಸ್ಥಾನ ಪಡೆದಿದೆ.

2026ರ ಫೆಬ್ರುವರಿ 7 ಮತ್ತು 8ರಂದು ಪಂದ್ಯ ನಡೆಯಲಿದೆ. ಅನುಭವಿ ಆಟಗಾರ ಸುಮಿತ್ ನಗಾಲ್ ಮತ್ತು ದಕ್ಷಿಣೇಶ್ವರ್ ಸುರೇಶ್ ನಾಯಕತ್ವದಲ್ಲಿ ತಂಡವು ಆಡಲಿದೆ.

ತಿಂಗಳ ಆಟಗಾರ್ತಿ ರೇಸ್‌ನಲ್ಲಿ ಶಫಾಲಿ

ದುಬೈ (ಪಿಟಿಐ): ವಿಶ್ವಕಪ್ ವಿಜೇತ ಭಾರತ ತಂಡದ ಆರಂಭಿಕ ಬ್ಯಾಟರ್ ಶಫಾಲಿ ವರ್ಮಾ ಅವರು ಐಸಿಸಿ ‘ನವೆಂಬರ್ ತಿಂಗಳ ಆಟಗಾರ್ತಿ’ ಪ್ರಶಸ್ತಿಗೆ ಶುಕ್ರವಾರ ನಾಮನಿರ್ದೇಶನಗೊಂಡಿದ್ದಾರೆ. ಯುಎಇ ತಂಡದ ಈಶಾ ಓಝಾ ಹಾಗೂ ಥಾಯ್ಲೆಂಡ್‌ನ ತಿಪಾಚಾ ಪುತ್ತವಾಂಗ್ ಸಹ ಈ ಗೌರವಕ್ಕೆ ನಾಮನಿರ್ದೇಶನ ಪಡೆದಿದ್ದಾರೆ.

ಶಫಾಲಿ ಅವರು ಮುಂಬೈನ ಡಿ.ವೈ.ಪಾಟೀಲ ಕ್ರೀಡಾಂಗಣದಲ್ಲಿ ನವೆಂಬರ್ 2ರಂದು ನಡೆದ ಮಹಿಳಾ ವಿಶ್ವಕಪ್ ಫೈನಲ್ ಪಂದ್ಯದಲ್ಲಿ 87 ರನ್ (78 ಎಸೆತ) ಗಳಿಸಿದ್ದರು. ಬೌಲಿಂಗ್‌ನಲ್ಲಿಯೂ ಕೈಚಳಕ ತೋರಿ 2 ವಿಕೆಟ್ ಪಡೆದಿದ್ದರು. ಪಂದ್ಯದ ಆಟಗಾರ್ತಿ ಗೌರವಕ್ಕೂ ಭಾಜನರಾಗಿದ್ದರು

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331







ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

JOB OPPORTUNITIES

Multiple Vacancy

ಮೆ. ವಿಸ್ಡಂ ಸೆಕ್ಯೂರಿಟಿ ಸರ್ವೀಸಸ್

ನಂ. 106, 1ನೇ ಮಹಡಿ, 40 ಅಡಿ ರಸ್ತೆ, ಮಂಜುನಾಥನಗರ, ವೆಸ್ಟ್ ಆಫ್ ಕಾರ್ಡ್ ರಸ್ತೆ, ಬೆಂಗಳೂರು-560010.

ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಹುದ್ದೆಗಳ ನೇಮಕಾತಿ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ರಾಜ್ಯಾದ್ಯಂತ ಖಾಲಿ ಇರುವ ವಿವಿಧ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಮೆ॥ ವಿಸ್ಡಮ್ ಸೆಕ್ಯೂರಿಟಿ ಸರ್ವೀಸಸ್ ವತಿಯಿಂದ ಅರ್ಹ ಅಭ್ಯರ್ಥಿಗಳಿಂದ ನೇರ ಸಂದರ್ಶನಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಹುದ್ದೆಯ ವಿವರ	ಅರ್ಹತೆ (Qualification)	ಹುದ್ದೆಗಳ ಸಂಖ್ಯೆ
1.	ಹಾರ್ಡ್‌ವೇರ್ ಕನ್ಸಲ್ಟೆಂಟ್ (ತಾಂತ್ರಿಕ)	ಬಿ.ಇ (ಐಟಿ)/ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್‌ನಲ್ಲಿ ಡಿಪ್ಲೊಮಾ, ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ನೆಟ್‌ವರ್ಕಿಂಗ್ ಪ್ರಮಾಣಪತ್ರದೊಂದಿಗೆ ಕನಿಷ್ಠ 2 ವರ್ಷಗಳ ಅನುಭವ.	1
2.	ತಾಂತ್ರಿಕೇತರ ಕನ್ಸಲ್ಟೆಂಟ್ಸ್ (Non-Technical)	1) ಯಾವುದೇ ಪದವಿ ಅಥವಾ ತತ್ಸಮಾನ ಅರ್ಹತೆ. 2) ದ್ವಿತೀಯ ಪಿಯುಸಿ (12ನೇ) ಪಾಸ್, ಕಂಪ್ಯೂಟರ್ ಜ್ಞಾನ ಹೊಂದಿರಬೇಕು.	1
3.	ಫೈರ್‌ಮ್ಯಾನ್ (ಟೆಕ್)	ಫೈರ್ ಮತ್ತು ಸೇಫ್ಟಿಯಲ್ಲಿ ಡಿಪ್ಲೊಮಾ ಅಥವಾ ತತ್ಸಮಾನ ಅರ್ಹತೆ.	1
4.	ಟ್ಯಾಲಿ ಕನ್ಸಲ್ಟೆಂಟ್	ಟ್ಯಾಲಿಯೊಂದಿಗೆ ಬಿ.ಕಾಂ (B.Com)	1
5.	ಪ್ರಾಜೆಕ್ಟ್ ಅಸಿಸ್ಟೆಂಟ್ (ಯೋಜನಾ ಸಹಾಯಕ)	ಕೆಮಿಕಲ್ / ಎನ್ವಿರಾನ್ಮೆಂಟಲ್ (ಪರಿಸರ) / ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಬಿ.ಇ ಅಥವಾ ಎನ್ವಿರಾನ್ಮೆಂಟಲ್ ಸೈನ್ಸ್‌ನಲ್ಲಿ ಎಂ.ಎಸ್ಸಿ. ಮೊದಲ ಶ್ರೇಣಿಯಲ್ಲಿ ಉತ್ತೀರ್ಣರಾಗಿರಬೇಕು.	56
6.	ಸೈಂಟಿಫಿಕ್ ಅಸಿಸ್ಟೆಂಟ್ (ವೈಜ್ಞಾನಿಕ ಸಹಾಯಕ)	ಕಂಪ್ಯೂಟರ್ ಜ್ಞಾನದೊಂದಿಗೆ ಬಿ.ಎಸ್ಸಿ., ಕೆಮಿಸ್ಟ್ರಿ (B.Sc., Chemistry)	25
7.	ಡಾಟಾ ಎಂಟ್ರಿ ಆಪರೇಟರ್	ದ್ವಿತೀಯ ಪಿಯುಸಿ (12ನೇ) ಪಾಸ್ ಮತ್ತು ಇಂಗ್ಲೀಷ್ ಹಾಗೂ ಕನ್ನಡ ಟೈಪಿಂಗ್ (ಸೀನಿಯರ್) ಜೊತೆಗೆ ಕಂಪ್ಯೂಟರ್ ಜ್ಞಾನ.	54
8.	ರಿಸೆಪ್ಷನಿಸ್ಟ್ (ಸ್ವಾಗತಕಾರರು)	ದ್ವಿತೀಯ ಪಿಯುಸಿ (12ನೇ) ಪಾಸ್ ಜೊತೆಗೆ ಕಂಪ್ಯೂಟರ್ ಜ್ಞಾನ.	1
9.	ಕ್ಲರ್ಕ್ (ಗುಮಾಸ್ತರು)	ಪಿಯುಸಿ ಜೊತೆಗೆ ಕಂಪ್ಯೂಟರ್ ನಿರ್ವಹಣೆ ಅಗತ್ಯ.	51
10.	ಫೀಲ್ಡ್ ಅಸಿಸ್ಟೆಂಟ್ (ಕ್ಷೇತ್ರ ಸಹಾಯಕ)	ವಿಜ್ಞಾನ ವಿಷಯದಲ್ಲಿ ಪಿಯುಸಿ / 12ನೇ ತರಗತಿ ಪಾಸ್.	48
11.	ಡ್ರೈವರ್ಸ್ (ಚಾಲಕರು)	ಎಸ್.ಎಸ್.ಎಲ್.ಸಿ (SSLC) ಪಾಸ್, ಮಾನ್ಯವಾದ ಡ್ರೈವಿಂಗ್ ಲೈಸೆನ್ಸ್ ಹೊಂದಿರಬೇಕು.	80
12.	ಪಿಯೋನ್ (ಜವಾನರು)	ಎಸ್.ಎಸ್.ಎಲ್.ಸಿ ಪಾಸ್, ಕನ್ನಡ ಓದಲು ಮತ್ತು ಬರೆಯಲು ಬರುವುದು ಕಡ್ಡಾಯ.	81
13.	ಭದ್ರತಾ ರಕ್ಷಕರು (Security Guards)	ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರಬೇಕು.	147
		ಒಟ್ಟು	547

ಆಯ್ಕೆಪ್ರಕ್ರಿಯೆಯು ಸದರಿ ಹುದ್ದೆಗಳಿಗೆ ಅವಶ್ಯವಿರುವ ವಿದ್ಯಾರ್ಹತೆ, ಅನುಭವ ಹಾಗೂ ಕರ್ನಾಟಕ ಸರ್ಕಾರದ ಮೀಸಲಾತಿ ನಿಯಮದ (ಎಸ್.ಸಿ-17%, ಎಸ್.ಟಿ-7%, ಒಬಿಸಿ-32%, ಜನರಲ್ ಮೆರಿಟ್ - 44%) ಪ್ರಕಾರ ನಡೆಯುತ್ತದೆ.

ಅರ್ಹ ಅಭ್ಯರ್ಥಿಗಳು ನೇರ ಸಂದರ್ಶನಕ್ಕೆ ದಿನಾಂಕ 06.12.2025 ರಿಂದ 13.12.2025 ರ ಒಳಗೆ ಎಲ್ಲಾ ವಿವರಗಳೊಂದಿಗೆ, ವಿದ್ಯಾರ್ಹತೆ ಪ್ರಮಾಣ ಪತ್ರ, ಅನುಭವ ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರ ಇತ್ಯಾದಿ ದಾಖಲೆಗಳೊಂದಿಗೆ ನಮ್ಮ ಕೇಂದ್ರ ಕಛೇರಿಯಾದ : ಮೆ॥ ವಿಸ್ಡಂ ಸೆಕ್ಯೂರಿಟಿ ಸರ್ವೀಸಸ್, ನಂ. 106, 1ನೇ ಮಹಡಿ, 40 ಅಡಿ ರಸ್ತೆ, ವೆಸ್ಟ್ ಆಫ್ ಕಾರ್ಡ್ ರಸ್ತೆ, ಬೆಂಗಳೂರು-560010 ಇಲ್ಲಿಗೆ ಖುದ್ದಾಗಿ ಸಲ್ಲಿಸಲು ತಿಳಿಸಿದೆ.

ಅಪೂರ್ಣ ಮಾಹಿತಿ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ದೂರವಾಣಿ ಸಂಖ್ಯೆ : 99452 30204, 90359 16688, 99452 422768.

Wanted

WANTED EXPERIENCED Dhobis for a laundry washing unit in Bannerghatta, Bangalore Salary : 18,000 to 25,000 Call: 9880266007 / 8050666007

Drivers

WANTED DRIVERS for Tata intra. Salary 18,000 to 22,000 + Food + Accomodation Timings: 10am to 9pm Sunday holiday Location: Bannerghatta, Bangalore Call 8050666007/ 9148899007

REAL ESTATE SELLING

Sites

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

AVAILABLE 30X40 North Facing Site Sale, 10th Block, 100 Feet Road Near, Contact: DEVARAJ 9993959099, 9799099699.

AVAILABLE 40X60 West Facing Site Sale, 10th Block, 40 Feet Road, Contact: DEVARAJ 9993959099, 9799099699.

BANASHANKARI 6TH Stage 10th Block 40×60 North Facing 100ft Road Parallel Contact: 9738028011

SALE BSK 6th stage 4th B-block 40x60 west facing 2Cr also 40x60 south facing 6th block 2.10Cr, owners 9945373839, 9620041313

SALE BSK 6th stage 4th B block 40x60 west facing 2Cr also 40x60 south facing 6th block 2.10Cr, owners 9945373839, 9620041313

Domlur

40X61 WF SITE SALE Clear Title, Immediate Settlment Old Airport Road, KHB 1st Stage: 8310681025

Hosur Road

ANEPALYA BANGALORE Property, 3360 sq ft. next to CMP Centre off Hosur Road available for sale. Buyers call 9844349701

Hebbal

HEBBAL 30X35 House Sale, Ground 1 BHK, Two Carparking, 1st 2 BHK, 2nd 2 BHK 9845623970/ 9739400838

J P Nagar

4TH PHASE Dollers Colony 50X80 East Facing Excellent Location, Price 32000/- sft Settler: 9880225333/ 9845035333

Kempegowda Layout

SITE FOR SALE 40X60 East Facing
BDA 40 feet Road
Very Good Location
Rs 8500/- Negotiable
Kempegowda Layout
Near Metro Station
Contact: 6366711598

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80, Genuine Buyers Call: 9632146784, 9731162067.

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

Nagarabhavi

"NAGARBHAVI/ VISHVESHWARAIAH / KEMPEGOWDA LAYOUT 30x40,40x60 OR ANY MEASUREMENT SITES REQUIRED`& AVAILABLE PREFERABLY OWNER/`ALLOTTE SITES. 9845268611"

Out-Station

PENUKONDA NEAR KIA Car-Factory, Madakasira Highway, 50X100 (4-SITES) Resi Converted, Gated Community, 400/- PSft: 8310681025

Vijayanagar

SITE FOR SALE: 60X90 WEST FACING WOC ROAD RPC LAYOUT ONLY GENUINE BUYERS: 6363250343/ 9845038343

Vishweshwariah Layout

BDA SITE SALE VISHVESHWARAIAH LAYOUT 6TH BLOCK 30X40 WEST NEAR OXFORD COLLEGE 40X60 NEAR KLE COLLEGE: 8892901567

DIRECT OWNER 30x40 E/F VISHVESHWARAIAH LAYOUT, Near 100 feet Road, Rs.9000/- Contact: 9742681666, 9886634578

BDA SITE FOR SALE 30X40 South Facing
Very Good Location
Rs 2 Cr. Negotiable
Visveswaraiah Layout
8th Block
Contact: 9611577666

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

'DIRECT OWNER' 20x30 N/F Vishveswaraiah Layout 2nd Block, Near Kommagatta, Full Developed Area: 8496030007/ 8310885235

Anjanapura

SALE BDA 30x40 Anjanapura 5th G-block south facing 40x60 west facing commercial site 2nd block. 9620041313, 9945373839

SALE BDA 30x40 Anjanapura 5th G-block south facing 40x60 west facing commercial site 2nd block, 9620041313, 9945373839

Intl Airport Road

EMBASSY SPRINGS 50X80, Jade Gardens 100X100, Century Eden 40X50, Hollywood Town 60X80, Supreme Estates 9632974714

Peenya

"PLOTS FOR_SALE in`Peenya 2nd_Stage, DC.Conversion, East_facing Adjacent Sites. 2220`Sqft_& 2260`Sqft, Rs.7000/- Per Sqft. Contact: 9353057779"

House

BTM Layout

HOUSE & Site For sale 30×40,40×60 East&North Facing For Sale BTM 2nd Stage.Rathnakar: 9945377119/ 9844099557

Hoskote

NEW 4BHK Fully_Furnished, East`Facing Villa @ HOSKOTE, BMRDA, HPA Approved, 1.91 Crore.Nego, HAMSA 9886544124.

Jayanagar

JAYANAGARA 40X52 (2100sft) BDA Property For Sale Living Condition 4BHK Independent House Excellent Location Clear_Title 9845341034

J P Nagar

JPNAGAR 5TH PHASE VINAYAKANAGARA OLD HOUSE (30'X40') SALE 2CRORE FETCHING RENTAL INCOME 1LAKH CALL:9448052264

Kumaraswamy Layout

KUMARSWAMY LAYOUT Near Dayananda sagar college Prime Location 40x64 East/South Corner Commercial old_House Sale Call:9845069739 9380613718

Multiple Locations

WANTED / AVAILABLE
PG BUILDINGS For Sale in Bangalore
(60 Paisa to 1 Rupee) with Rental Income, Price Ranging From 5Cr to 10Cr.
Contact: 9900399006

Nagarabhavi

NAGARABHAVI RENT Independent Triplex 4BHK Luxurious House Lift. 4-Car-Parks Borewell Master Bedrooms 1.1 Lakhs: 9036207777

HOUSE G+3 Floors, 15x40 SF, Shanthaveri Gopalagowdanagara, Moodalapalya, Nagarabhavi, A Katha, 98 Lakh Direct Owner 9739957911

Vidyaranyapura

4-STORY HOUSE FOR SALE in Ramchandrapura, Jalahalli (Post) Bangalore 13. Size: 20X30. Built area 2700 Sqft: 1,75,00,000/- 9880450523.

Flat

Kanakapura Road

HIGH RENTAL INCOME PROPERTIES FOR SALE NEAR METRO STATIONS ON KANAKAPURA ROAD. SARAKKI HOMES: 9663676464

Nagarabhavi

FLATS FOR-SALE @ Nagarabhavi Chandra Layout 2_&_3BHK Ready to Move In_Good Location Call:9538472420 9845066608

Rajajinagar

3 BHK Flat for Sale in 1st block Rajajinagar, W.O.C. near Metro Station. Call: 9980741316.

Farm House/ Land/ Resorts

Hosur

DOCTOR'S RESORT 0.67 acre, beautiful nature, next to Hosur highway, 90min from Bangalore enroute Hoggenekal falls. (3.6Cr): 9632921289

Commercial Building

Malleshwaram

SALE OFFICE SPACE 3600Sq.ft. Furnished 4th Floor,Vishnupriya Towers, Beside Srirampura Metro Station Price: 15,000/Sq.ft. Call:9900029200

Commercial Land

J P Nagar

SALE A.EAST South Corner 8766sft, B.East Facing 10,890sft C.4 side Road 21,780sft PLOTS on 80 feet Main Road Near RV Engineering College J.P.NAGAR 8TH PHASE, Uttarahalli Hobli. 'A' KATHA BETTERMENT CHARGE PAID, BDA NOC, DC Conversion 9986090000/ 7259316827

Commerical

Vijayanagar

450-SQFT COMMERCIAL Office Space_Floor Wise For Sale Opposite to Vijayanagar Metro Station Contact: 7676900174 9945569909

RENTAL PROPERTIES

Accommodation Available

Commercial

AVAILABLE SITES in 100 Feet Road Banashankari 6th Stage 4th and 7th Block for Rent. Call 9880022644

WEEKEND CORNER

ಕ್ಲಾಸಿಫೈಡ್ಸ್

Apartment For Sale
2 BHK 16 Flats +
1 Penthouse
(Entire Building)
Srirangapatna, Mysore
Site: 4800 Sq.ft
18 Car Parking
Lift Facility
Call: 8618513137



GBA LIMITS
MYSORE ROAD, BIDADI.
FARM LAND PLOTS FOR SALE
~~Rs.750~~ OLD PRICE PER SQFT.
Rs.649 NEW PRICE PER SQFT.
NELAMANGALA
Near BYLAANJANEYA TEMPLE
Just 5 Minutes from TUMKUR HIGHWAY
~~Rs.1250~~ OLD PRICE PER SQFT.
Rs.999 NEW PRICE PER SQFT.
WITH WORLD CLASS AMENITIES.
For MORE DETAILS CALL | 8880660099

CONSTRUCTION MATERIALS FOR SALE
Large quantity of used construction materials in good conditions. Such as Shuttering Plate, Jacks, Spans, Cuplock scafolding & Machinery such as 1Bag, 2, 3&4 Bag Mixers, and Tractor Mounted 16 KVA D.G, Material hoist Electrical & Diesal 30 & 40 mts height, Cutting & Bar Bending Mechines (Electrical) for sale.
Contact:
6360605636 / 8431164733

LAND FOR LEASE BANGALORE & MYSORE
We Are Looking Prime Commercial Land (Empty Plot) For Long-Term Lease In Top Locations Across Bangalore And Mysore.
- ☑ High footfall area
- ☑ Minimum area: 1500 sq. ft. and above
- ☑ High-visibility commercial zones
- ✗ Real estate brokers, please excuse

DIRECT OWNERS CONTACT: (11 AM TO 7 PM)
+91 7483 233 755

FOR RENT/ SALE

FOR RENT/ SALE Fully Furnished Old Airport Road VDB TOUCHDOWN Next to HAL Museum 7447Sqft 96 Work Stations 5 Cabins 3 Meeting Room 1 Board 1 MD Cabin 6 Carparks. No PHONE CALLS WHATS APP MESSAGE ONLY TO: 9845031550

Farm House/Land/ Resorts

10 ACRES of land with coconut plantation and fruits is available for lease at Chikkanayakanahalli, Tumkur. contact: 9902545995

House

RENT: 2BHK, Pooja Room, Semifurnished GIRINAGAR 1BHK Attached Ist Floor, Hanumanthnagar. Owner: Mobile: 78925-30410/ 94488-09902.

2 BHK House for Rent 1st Floor Margosa Road,10th Cross Malleswaram, Vegetarian Only Contact: 7259808481/ 9902309528

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKARI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

EDUCATIONAL

General

TEACHER REQUIRED FOR PRIMARY AND HIGH SCHOOL FOR SCIENCE AND EVS contact Kenmore School Basavanagudi Jayanagar whatsapp 9901501185

BUSINESS

Business to Business

Finance

ALL LOANS AVAILABLE @4% YEARLY INTEREST PERSONAL BUSINESS PROJECT TAKEOVER MORTGAGE MINIMUM DOCUMENTATION QUICK DISBURSEMENT MAHALAKSHMI FINANCE 9984823862

Business Offers

Finance

EARN DAILY profit from the stock market, min Investment Rs.8Lacs call: 8793104423

PERSONAL

Change of Name

CHANGE OF NAME
We, **Somashekar M & Kavya N,** R/at No. 55, Boovanahalli Village, Doddasonne Post, Kasaba Hobali, Devanahalli Taluk, Bengaluru Rural District-562110, have changed our minor Son's name from **SAMRAT S** to **DRUVIK S** vide affidavit dated 16-07-2025 before notary S.R. Ravikumar, Bengaluru.

CHANGE OF NAME
I, **GEETHA BAI BANGALORE DEVI SINGH** W/o. Shivashankar Singh R/o. #229, Mediagrahara, Hesarghatta Main Road, Vidyaranyapura, Bangalore-560097 have changed my Name to **GEETHA BAI D** vide affidavit Dated: 31.10.2025 Sworn before Notary Chandrakala, Bangalore.

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331